ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 22 ಶುಕ್ರವಾರ 2023

ಸಂಪುಟ: 44 | ಸಂಚಿಕೆ: 157 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಆದೇಶದಂತೆ

ತಮಿಳುನಾಡಿಗೆ ನೀರು ಹರಿಸಿ

● ರಾಜ್ಯಕ್ಕೆ ಸುಪ್ರೀಂಕೋರ್ಟ್ ಆದೇಶ ● ಸಿಡಬ್ಲ್ಯುಎಂಎ ಆದೇಶಕ್ಕೆ ತಡೆ ನೀಡಲು ನಿರಾಕರಣೆ ● ಮತ್ತೆ 15 ದಿನ ನಿತ್ಯ 5000 ಕ್ಯುಸೆಕ್ ನೀರು ಹರಿಸುವ ಅನಿವಾರ್ಯತೆ





ಬೆಂಗಳೂರು, ಸೆ.21(ಕೆಎಂಶಿ)– ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ (ಸಿಡಬ್ಲ್ಯುಎಂಎ) ಆದೇಶದಂತೆ ತಮಿಳುನಾಡಿಗೆ ಪ್ರತಿನಿತ್ಯ 5000 ಕ್ಯುಸೆಕ್ ನೀರು ಹರಿಸುವಂತೆ ಸುಪ್ರೀಂಕೋರ್ಟ್ ರಾಜ್ಯ ಸರ್ಕಾರಕ್ಕೆ ಆದೇಶ ಮಾಡಿದೆ.

ನಿರ್ವಹಣಾ ಪ್ರಾಧಿಕಾರದ ಆದೇಶ ಪ್ರಶ್ನಿಸಿ ಕರ್ನಾಟಕ–ತಮಿಳುನಾಡು ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಇಂದು ಕೈಗೆತ್ತಿಕೊಂಡ ತ್ರಿಸದಸ್ಯ ಪೀಠ ಈ ನಿರ್ದೇಶನ ನೀಡಿದೆ.

ಎರಡೂ ಸರ್ಕಾರಗಳ ಮನವಿಯನ್ನು ತಿರಸ್ಕರಿಸಿದ ನ್ಯಾಯಪೀಠ, ಪ್ರಾಧಿಕಾರದ ಆದೇಶವನ್ನು ಎತ್ತಿ ಹಿಡಿದಿದೆ. ಇದರಿಂದ 15 ದಿನಗಳ ಕಾಲ ಪ್ರತಿನಿತ್ಯ 5000 ಕ್ಯುಸೆಕ್ ನೀರನ್ನು ನಮ್ಮ ಕಾವೇರಿ ಜಲಾನಯನ ಪಾತ್ರದಿಂದ ತಮಿಳುನಾಡಿಗೆ ಹರಿಸಲೇಬೇಕಾಗಿದೆ.

ಪ್ರಾಧಿಕಾರ ಆದೇಶ ನೀಡಿದ ನಂತರ ನಮ್ಮ ನೀರನ್ನು ಉಳಿಸಿಕೊಳ್ಳಲು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಅವರ ಸಂಪುಟ ಸದಸ್ಯರು ಕಳೆದ ಮೂರು ದಿನಗಳಿಂದ ದೆಹಲಿಯಲ್ಲಿ ಕುಳಿತು ನಡೆಸಿದ ಯತ್ನ ವಿಫಲಗೊಂಡ ನಂತರ ರಾಜ್ಯಕ್ಕೆ ಹಿಂತಿರುಗಿದ್ದಾರೆ. ಪ್ರಾಧಿಕಾರ ಹೊರಡಿಸಿರುವ ಆದೇಶಕ್ಕೆ ತಡೆಯಾಜ್ಞೆ ನೀಡಬೇಕೆಂಬ ರಾಜ್ಯದ ಮನವಿಯನ್ನು ಸುಪ್ರೀಂ ಕೋರ್ಟ್ ಮಾನ್ಯ ಮಾಡಲಿಲ್ಲ. ಜೊತೆಗೆ ಉಭಯ ರಾಜ್ಯಗಳ ರೈತರು ತಮ್ಮ ವಾದವನ್ನು ಆಲಿಸುವಂತೆ ಕೋರಿದ್ದ ಅರ್ಜಿಯನ್ನೂ ಪುರಸ್ಕರಿಸಲು ಪೀಠ ನಿರಾಕರಿಸಿತು. ಆದರೆ, ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಹಾಗೂ ಕಾವೇರಿ ನೀರು ನಿಯಂತ್ರಣಾ ಸಮಿತಿ ಸಭೆಗಳನ್ನು ನಡೆಸಿ, ಸೂಕ್ತ ತೀರ್ಮಾನಗಳನ್ನು ಕೈಗೊಳ್ಳಬೇಕು ಎಂದು ಆದೇಶಿಸಿದೆ.

ಕಾವೇರಿ, ಕೃಷ್ಣಾ ಕಣಿವೆಯಲ್ಲಿ ಭಾರಿ ನೀರಿನ ಕೊರತೆ ಕಾಣಿಸಿಕೊಂಡಿದೆ, ಜೊತೆಗೆ ರಾಜ್ಯದ 195 ತಾಲೂಕುಗಳು ಬರಕ್ಕೆ ಸಿಲುಕಿವೆ, ರಾಜ್ಯದ ಕಾವೇರಿ ಜಲಾನಯನ ಭಾಗವೂ ಇದರಿಂದ ಹೊರತಾಗಿಲ್ಲ ಹೀಗಾಗಿ ತಮಿಳುನಾಡಿಗೆ ನೀರು ಹರಿಸಲು ಸಾಧ್ಯವಿಲ್ಲ, ಆದ್ದರಿಂದ ಪ್ರಾಧಿಕಾರದ ಆದೇಶಕ್ಕೆ ತಡೆ ನೀಡಿ ಎಂದು ರಾಜ್ಯ ಸರ್ಕಾರ ಮನವಿ ಮಾಡಿತ್ತು. ಇದೇ ಸಂದರ್ಭದಲ್ಲಿ ತಮಿಳುನಾಡು ಮುಂದಿನ 15 ದಿನಗಳ ಕಾಲ ನಮಗೆ ಪ್ರತಿನಿತ್ಯ 12,500 ಕ್ಯುಸೆಕ್ ನೀರು ಬಿಡುಗಡೆ ಮಾಡುವಂತೆ ಹಾಗೂ 6,500 ಕ್ಯುಸೆಕ್ ಬಾಕಿಯನ್ನು ಇದರಲ್ಲಿ ಸೇರಿಸಿ ನೀರು ಹರಿಸುವಂತೆ ಕರ್ನಾಟಕ ಸರ್ಕಾರಕ್ಕೆ ನಿರ್ದೇಶನ ಮಾಡಬೇಕೆಂದು ಮನವಿ ಮಾಡಿತ್ತು. ಎರಡೂ ರಾಜ್ಯಗಳ ವಾದ–ಪ್ರತಿವಾದವನ್ನು ಆಲಿಸಿದ ನ್ಯಾಯಪೀಠ, ಕಾವೇರಿ ನೀರು ನಿಯಂತ್ರಣ ಸಮಿತಿಯ ಶಿಫಾರಸ್ಸನ್ನು ಎತ್ತಿಹಿಡಿದಿದೆ.

ಮೈಸೂರಲ್ಲಿ ಕಾವೇರಿತು ಕಾವೇರಿ ಕೂಗು

● ವಿವಿಧೆಡೆ ಪ್ರತಿಭಟನೆ, ಸರ್ಕಾರದ ವಿರುದ್ಧ ಆಕ್ರೋಶ ● ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್ ಭಾವಚಿತ್ರಕ್ಕೆ ರಾಕ್ಷಸ ಪೋಷಾಕು ● ಕಣ್ಣಿಗೆ ಕಪ್ಪು ಪಟ್ಟಿ, ಕೈಯ್ಯಲ್ಲಿ ಪೊರಕೆ ಹಿಡಿದು ಪ್ರತಿಭಟನೆ

ಮೈಸೂರು, ಸೆ.21(ಎಂಟಿವೈ)– ಕಾವೇರಿ ನೀರು ಹಂಚಿಕೆಗೆ ಸಂಬಂಧಪಟ್ಟಂತೆ ಕಾವೇರಿ ನೀರು ನಿರ್ವಹಣಾ ಸಮಿತಿ ಆದೇಶಕ್ಕೆ ತಡೆ ನೀಡಲು ಸುಪ್ರಿಂಕೋರ್ಟ್ ನಿರಾಕರಿಸಿದ ಹಿನ್ನೆಲೆಯಲ್ಲಿ ಮೈಸೂರಲ್ಲಿ ನಾಲ್ಕು ಪ್ರತ್ಯೇಕ ಸಂಘಟನೆಗಳ ಕಾರ್ಯಕರ್ತರು ಪ್ರತಿಭಟನೆ ನಡೆಸಿ, ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಭೀಕರ ಬರಗಾಲ ತಲೆದೋರಿದೆ. ಮಳೆ ಪ್ರಮಾಣ ತೀರಾ ಕಡಿಮೆಯಿದ್ದು, ಕಾವೇರಿ ಜಲಾನಯನ ಪ್ರದೇಶದ ಜಲಾಶಯಗಳಲ್ಲಿ ಸಂಗ್ರಹವಾಗಿರುವ ನೀರಿನ ಪ್ರಮಾಣ ಕುಗ್ಗಿದೆ. ಆದರೂ ಕಾವೇರಿ ನೀರು ನಿರ್ವಹಣಾ ಸಮಿತಿ ರಾಜ್ಯಕ್ಕೆ ಅನ್ಯಾಯವಾಗುವಂತಹ ತೀರ್ಪು ನೀಡುವ ಮೂಲಕ ದ್ರೋಹ ಬಗೆದಿದೆ. ಈ ನಡುವೆ ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸಿ ರಾಜ್ಯದ ಜನರ ಹಿತಕಾಯುವ ತೀರ್ಮಾನ ಕೈಗೊಳ್ಳದೆ ಮಲತಾಯಿ ▶ 6ನೇ ಪುಟಕ್ಕೆ



ಕಾಡಾ ಕಚೇರಿ ಮುಂದೆ ರೈತರು ಪ್ರತಿಭಟನೆ ನಡೆಸಿದರು.




ನ್ಯಾಯಾಲಯದ ಮುಂಭಾಗ ಪ್ರತಿಭಟನೆ ನಡೆಸಿದರು.



ಜಿ.ಪಂ ಮುಂಭಾಗ ಪ್ರತಿಭಟನೆ ನಡೆಸಿದರು.

ಪ್ರೊ.ಲೋಕನಾಥ್ ಮತ್ತೆ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ

ನೇಮಕಾತಿ ರದ್ದು ಆದೇಶಕ್ಕೆ ಹೈಕೋರ್ಟ್ ವಿಭಾಗೀಯ ಪೀಠ ತಡೆಯಾಜ್ಞೆ



ಮೈಸೂರು, ಸೆ.21(ಬಿಎಲ್‌ಯು)– ಮೈಸೂರು ವಿಶ್ವ ವಿದ್ಯಾನಿಲಯದ ಕುಲಪತಿಯಾಗಿ ಪ್ರೊ.ಲೋಕನಾಥ್ ನೇಮಕಾತಿ ಆದೇಶ ರದ್ದು ಮಾಡಿದ್ದ ಹೈಕೋರ್ಟ್ ಏಕ ಸದಸ್ಯ ಪೀಠದ ತೀರ್ಪಿಗೆ ಹೈಕೋರ್ಟ್ ವಿಭಾಗೀಯ ಪೀಠ ತಡೆಯಾಜ್ಞೆ ನೀಡಿದೆ. ಹೈಕೋರ್ಟ್ ಮುಖ್ಯ ನ್ಯಾಯಾಧೀಶ ನ್ಯಾಯಮೂರ್ತಿ ಪ್ರಸನ್ನ ವರಾಲೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರನ್ನೊಳಗೊಂಡ ವಿಭಾಗೀಯ ಪೀಠ ಈ ತಡೆಯಾಜ್ಞೆ ನೀಡಿದೆ.

ಕುಲಪತಿ ಪ್ರೊ.ಲೋಕನಾಥ್ ನೇಮಕಾತಿಯನ್ನು ಕಳೆದ ವಾರ ಹೈಕೋರ್ಟ್ ಏಕ ಸದಸ್ಯ ಪೀಠ ರದ್ದು ಮಾಡಿತ್ತು.

ಇದನ್ನು ಪ್ರಶ್ನಿಸಿ ಪ್ರೊ.ಲೋಕನಾಥ್ ಅವರು ಹೈಕೋರ್ಟ್ ವಿಭಾಗೀಯ ಪೀಠದ ಮೊರೆ ಹೋಗಿದ್ದರು. ಇಂದು ವಿಚಾರಣೆ ನಡೆಸಿದ ವಿಭಾಗೀಯ ಪೀಠ, ಪ್ರೊ.ಲೋಕನಾಥ್ ನೇಮಕಾತಿ ರದ್ದುಪಡಿಸಿದ್ದ ಏಕ ಸದಸ್ಯ ಪೀಠದ ಆದೇಶಕ್ಕೆ ತಡೆಯಾಜ್ಞೆ ನೀಡಿ ಮುಂದಿನ ವಿಚಾರಣೆಯನ್ನು ಅ.25ಕ್ಕೆ ಮುಂದೂಡಿದೆ.

ಆದರೆ ಪ್ರೊ.ಲೋಕನಾಥ್ ಯಾವುದೇ ಪ್ರಮುಖ ತೀರ್ಮಾನ ಕೈಗೊಳ್ಳಬಾರದು ಎಂದು ವಿಭಾಗೀಯ ▶ 6ನೇ ಪುಟಕ್ಕೆ

ಕೋರ್ಟ್ ಮುಂದೆ ಸಮರ್ಪಕ ವಾದ ಮಂಡಿಸಲು ಸರ್ಕಾರ ವಿಫಲ



ಬೆಂಗಳೂರು: ರಾಜ್ಯ ಸರ್ಕಾರ ಸಮರ್ಪಕ ವಾದ ಮಾಡದೆ ಇದ್ದುದರಿಂದ, ವಾಸ್ತವಿಕ ಸ್ಥಿತಿಯನ್ನು ಸಮರ್ಥವಾಗಿ ಮನದಟ್ಟು ಮಾಡಿಕೊಡಲು ವಿಫಲವಾಗಿದ್ದರಿಂದ ಕಾವೇರಿ ವಿಚಾರದಲ್ಲಿ ಸುಪ್ರೀಂಕೋರ್ಟ್‌ನಲ್ಲಿ ರಾಜ್ಯಕ್ಕೆ ಹಿನ್ನಡೆಯಾಯಿತು ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅಭಿಪ್ರಾಯಪಟ್ಟಿದ್ದಾರೆ. ಸುಪ್ರೀಂಕೋರ್ಟ್ ತೀರ್ಪಿನ ಬಳಿಕ ಬೆಂಗಳೂರಿನಲ್ಲಿ ಮಾತನಾಡಿದ ಅವರು, ಸರ್ಕಾರ ನೀರು ಬಿಟ್ಟು ತಪ್ಪು ಮಾಡಿತು. ಈಗ ಕೋರ್ಟ್ ಮುಂದೆ ಸಮರ್ಪಕವಾದ ವಾದ ಮಂಡಿಸುವಲ್ಲಿ ವಿಫಲವಾಯಿತು. ಸರಿಯಾಗಿ ಹೋಂ ವರ್ಕ್ ಮಾಡದೆ ಕೋರ್ಟ್ ಮೆಟ್ಟಿಲೇರಿರುವುದು ಸಾಬೀತಾಗಿದೆ ಎಂದರು. ▶ 6ನೇ ಪುಟಕ್ಕೆ

ನೀರಾವರಿ ವಿವಾದಗಳ ಬಗ್ಗೆ ಕನಿಷ್ಠ ಜ್ಞಾನ ಇಲ್ಲದವರು ಅಧಿಕಾರದಲ್ಲಿದ್ದಾರೆ



ಬೆಂಗಳೂರು: ಕರ್ನಾಟಕ ಎದುರಿಸುತ್ತಿರುವ ಕಾವೇರಿ ಬಿಕ್ಕಟ್ಟಿಗೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ನೀಡಿರುವ ಆದೇಶ ರಾಜ್ಯದ ಪಾಲಿಗೆ ನಿಜಕ್ಕೂ ದುರದೃಷ್ಟಕರ, ನೀರಾವರಿ ವಿವಾದಗಳ ಕುರಿತು ಕನಿಷ್ಠ ಜ್ಞಾನ ಇಲ್ಲದವರು ಅಧಿಕಾರದಲ್ಲಿದ್ದರೆ ಪರಿಸ್ಥಿತಿ ಏನಾಗುತ್ತದೆ ಎಂಬುದಕ್ಕೆ ಇದೇ ಸಾಕ್ಷಿ ಎಂದು ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಪ್ರತಿಕ್ರಿಯಿಸಿದ್ದಾರೆ.

ಕರ್ನಾಟಕ ಮತ್ತು ತಮಿಳುನಾಡು ನಡುವಿನ ಕಾವೇರಿ ವಿವಾದದಲ್ಲಿ ನ್ಯಾಯಾಲಯವನ್ನು ದೂರುವಂತಿಲ್ಲ, ರಾಜ್ಯ ಸರ್ಕಾರ ಹೆಜ್ಜೆಹೆಜ್ಜೆಗೂ ತಪ್ಪು ಮಾಡುತ್ತಿದೆ ಎಂಬುದಾಗಿ ಸರ್ವಪಕ್ಷ ಸಭೆಯಲ್ಲೇ ಹೇಳಿದ್ದೆವು. ಕಾವೇರಿ ಜಲ ನಿಯಂತ್ರಣಾ ಸಮಿತಿ ಮತ್ತು ಪ್ರಾಧಿಕಾರದ ನಿರ್ದೇಶನ ▶ 6ನೇ ಪುಟಕ್ಕೆ

ವಾಸ್ತವತೆ ನೆಲೆಗಟ್ಟಿನಲ್ಲಿ ತೀರ್ಪು ನೀಡಬೇಕಿತ್ತು: ಬೊಮ್ಮಾಯಿ ಪ್ರತಿಕ್ರಿಯೆ



ಬೆಂಗಳೂರು: ಕಾವೇರಿ ನೀರು ಹಂಚಿಕೆ ವಿಚಾರದಲ್ಲಿ ಸುಪ್ರೀಂಕೋರ್ಟ್ ಸಿಡಬ್ಲ್ಯುಎಂಎ ಆದೇಶವನ್ನೇ ಪರಿಗಣಿಸದೇ, ವಾಸ್ತವತೆ ಆಧಾರದಲ್ಲಿ ತೀರ್ಪು ನೀಡಬೇಕಿತ್ತು ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರತಿಕ್ರಿಯಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇವತ್ತು ಕಾವೇರಿ ವಿಚಾರದಲ್ಲಿ ಸುಪ್ರೀಂಕೋರ್ಟ್ ಎರಡು ರಾಜ್ಯಗಳ ವಾದ ಕೇಳಿ ಸಿಡಬ್ಲ್ಯುಎಂಎ ಆದೇಶ ಎತ್ತಿ ಹಿಡಿದಿದೆ, ಮುಂದಿನ 15 ದಿನ ಸಿಡಬ್ಲ್ಯುಎಂಎ ಆದೇಶ ಪಾಲನೆ ಮಾಡಬೇಕು ಅಂತ ಹೇಳಿರುವುದು ದುರದೃಷ್ಟ ಎಂದರು. ಮತ್ತೊಮ್ಮೆ ಕರ್ನಾಟಕದ ವಸ್ತುಸ್ಥಿತಿಯನ್ನು ಸುಪ್ರೀಂಕೋರ್ಟ್‌ಗೆ ಮನವರಿಕೆ ▶ 9ನೇ ಪುಟಕ್ಕೆ

ರಾಜ್ಯಸಭೆಯಲ್ಲೂ ಮಹಿಳಾ ಮೀಸಲಾತಿ ಮಸೂದೆ ಅಂಗೀಕಾರ

ಎಲ್ಲಾ 215 ಸಂಸದರಿಂದ ಪರವಾಗಿ ಮತ ಚಲಾವಣೆ

ನವದೆಹಲಿ, ಸೆ.21– ಲೋಕಸಭೆಯಲ್ಲಿ ಬುಧವಾರ ಅಂಗೀಕಾರ ಪಡೆದ ಬೆನ್ನಲ್ಲೇ ರಾಜ್ಯಸಭೆಯಲ್ಲೂ ಮಹಿಳಾ ಮೀಸಲಾತಿ ಮಸೂದೆ ಅಂಗೀಕಾರವಾಗಿದೆ. ಎಲ್ಲ 215 ಸಂಸದರು ಕೂಡ 'ನಾರಿ ಶಕ್ತಿ ವಂದನ ಅಧಿನಿಯಮ' ಮಸೂದೆ ಪರವಾಗಿ ಮತ ಚಲಾವಣೆ ಮಾಡಿದ್ದು, ಯಾರೂ ಕೂಡ ವಿರುದ್ಧವಾಗಿ ಮತ ಚಲಾಯಿಸಿಲ್ಲ. ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳಾ ಮೀಸಲಾತಿ ಮಸೂದೆ–2023 ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ಕಲ್ಪಿಸುತ್ತದೆ. ಈ ಮಸೂದೆಯನ್ನು ▶ 6ನೇ ಪುಟಕ್ಕೆ

ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ರದ್ದಿಗೆ ರೈತರ ಆಗ್ರಹ





ಮಂಡ್ಯ, ಸೆ.21 (ಮೋಹನ್‌ರಾಜ್)– ಮುಂದಿನ 15 ದಿನಗಳ ಕಾಲ ತಮಿಳುನಾಡಿಗೆ ಕಾವೇರಿ ನೀರು ಬಿಡುವಂತೆ ಕಳೆದ ಸೋಮವಾರ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ನೀಡಿದ್ದ ಆದೇಶ ಎತ್ತಿ ಹಿಡಿದು, ತಮಿಳುನಾಡಿಗೆ ನೀರು ಬಿಡುವಂತೆ ಸುಪ್ರೀಂ ಕೋರ್ಟ್ ಆದೇಶಿಸಿರುವ ಹಿನ್ನೆಲೆಯಲ್ಲಿ ಮಂಡ್ಯ ನಗರ ಸೇರಿದಂತೆ ಕಾವೇರಿ ಕೊಳ್ಳದಲ್ಲಿ ರೈತರ ಆಕ್ರೋಶ ಮತ್ತೆ ಭುಗಿಲೆದ್ದಿದ್ದು, ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರವನ್ನು ರದ್ದುಪಡಿಸುವಂತೆ ರೈತರು ಆಗ್ರಹಿಸಿದ್ದಾರೆ.

ಕಳೆದ ಹಲವು ದಿನಗಳಿಂದ ನಗರದ ಸರ್‌ಎಂವಿ ಪುತ್ಥಳಿ ಬಳಿ ಧರಣಿ ನಡೆಸುತ್ತಿರುವ ರೈತ ಹಿತರಕ್ಷಣಾ ಸಮಿತಿ ಪದಾಧಿಕಾರಿಗಳು ಹಾಗೂ ರೈತ ಮುಖಂಡರು ಗುರುವಾರ ತೀರ್ಪು ಬರಲಿರುವ ಹಿನ್ನೆಲೆಯಲ್ಲಿ ಬೆಳಗ್ಗೆ 9ಗಂಟೆಗೆ ಧರಣಿ ನಿರತ ಸ್ಥಳಕ್ಕೆ ಆಗಮಿಸಿ, ತೀರ್ಪು ರಾಜ್ಯದ ಪರ ಬರಲೆಂದು ಕಾದು ಕುಳಿತಿದ್ದರು. ಆದರೆ ಬೆಳಗ್ಗೆ 11 ಗಂಟೆ ವೇಳೆಗೆ ತೀರ್ಪು ಹೊರಬಂದು ನಿತ್ಯ 5 ಸಾವಿರ ಕ್ಯುಸೆಕ್ ನೀರನ್ನು ತಮಿಳುನಾಡಿಗೆ ಹರಿಸುವಂತೆ ರಾಜ್ಯ ಸರ್ಕಾರಕ್ಕೆ ಆದೇಶಿಸಿದ ಬೆನ್ನಲ್ಲೇ ಹೋರಾಟಗಾರರ ಕಿಚ್ಚು ಭುಗಿಲೆದ್ದಿತ್ತು. ತೀರ್ಪು ಬರುತ್ತಿದ್ದಂತೆ ಸರ್‌ಎಂವಿ ಪುತ್ಥಳಿ ಮುಂಭಾಗ ಬೆಂಗಳೂರು– ಮೈಸೂರು ಹೆದ್ದಾರಿ ತಡೆದು ರಾಜ್ಯ ಸರ್ಕಾರ, ಪ್ರಾಧಿಕಾರ, ತಮಿಳುನಾಡು ಸರ್ಕಾರ, ರಾಜ್ಯದ ಸಂಸದರು ಹಾಗೂ ಜನಪ್ರತಿನಿಧಿಗಳ ವಿರುದ್ಧ ಧಿಕ್ಕಾರ ಕೂಗಿದ ಹೋರಾಟಗಾರರು, ಸುಪ್ರೀಂ ಕೋರ್ಟ್ ಆದೇಶದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಸುಮಾರು ಅರ್ಧ ಗಂಟೆಗೂ ಹೆಚ್ಚುಕಾಲ ರಸ್ತೆ ತಡೆ ನಡೆಸಿ ಘೋಷಣೆ ಕೂಗಿದರು. ಬಳಿಕ ಮಾತನಾಡಿದ ಪ್ರತಿಭಟನಾಕಾರರು, ಕಾವೇರಿ ನದಿ ನೀರು ನಿಯಂತ್ರಣ ಸಮಿತಿ ▶ 9ನೇ ಪುಟಕ್ಕೆ

ಶನಿವಾರ ಮಂಡ್ಯ ಬಂದ್

ಮಂಡ್ಯ: ಕಾವೇರಿ ವಿಚಾರದಲ್ಲಿ ಸುಪ್ರೀಂಕೋರ್ಟ್‌ನಲ್ಲಿ ವ್ಯತಿರಿಕ್ತ ತೀರ್ಪು ಬಂದಿರುವ ಹಿನ್ನೆಲೆಯಲ್ಲಿ ನಾಳೆ (ಶನಿವಾರ) ಮಂಡ್ಯ ಬಂದ್‌ಗೆ ಮಂಡ್ಯ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಕರೆ ನೀಡಿದೆ.

ತಮಿಳುನಾಡಿಗೆ ನೀರು ಬಿಡುವಂತೆ ಸುಪ್ರೀಂ ಕೋರ್ಟ್ ಆದೇಶ ಹಿನ್ನೆಲೆಯಲ್ಲಿ ಶನಿವಾರ ಮಂಡ್ಯ ಬಂದ್‌ಗೆ ಕರೆ ನೀಡಿದ್ದು, ಇಂದಿನ ಮಂಡ್ಯ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಸಭೆಯಲ್ಲಿ ನಿರ್ಧಾರ ಮಾಡಲಾಗಿದೆ. ಬಂದ್ ಸಂಬಂಧ ನಾಳೆ ಮತ್ತೊಂದು ಸುತ್ತಿನ ಸಭೆ ನಡೆಸಲಿದ್ದು, ಎಲ್ಲಾ ರಾಜಕೀಯ ಪಕ್ಷಗಳ ಮುಖಂಡರು, ವರ್ತಕರು, ಸಂಘಟನೆಗಳ ಮುಖಂಡರ ಸಭೆ ನಡೆಸಿ, ನಾಳಿನ ಸಭೆಯಲ್ಲಿ ಬಂದ್ ಕುರಿತ ರೂಪುರೇಷೆ ಬಗ್ಗೆ ಚರ್ಚೆ ನಡೆಸಲಾಗುವುದು ಎಂದು ಹಿತರಕ್ಷಣಾ ಸಮಿತಿ ತಿಳಿಸಿದೆ.

ಕೆಆರ್‌ಎಸ್ ಮುತ್ತಿಗೆ ಯತ್ನ: ರೈತರ ಬಂಧನ



ಶ್ರೀರಂಗಪಟ್ಟಣ: ತಮಿಳುನಾಡಿಗೆ ನೀರು ಹರಿಸುವಂತೆ ಸುಪ್ರೀಂಕೋರ್ಟ್ ತೀರ್ಪು ವಿರೋಧಿಸಿ ಕೆಆರ್‌ಎಸ್‌ಗೆ ಮುತ್ತಿಗೆ ಹಾಕಲು ಯತ್ನಿಸಿದ ರೈತರನ್ನು ಪೊಲೀಸರು ಬಂಧಿಸಿದರು. ರೈತ ಮುಖಂಡ ಕೆ.ಎಸ್. ನಂಜುಂಡೇಗೌಡ ಹಾಗೂ ಭೂಮಿ ತಾಯಿ ಹೋರಾಟ ಸಮಿತಿ ಅಧ್ಯಕ್ಷ ಕೃಷ್ಣೇಗೌಡ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದ ರೈತರು, ತಮಿಳುನಾಡಿಗೆ ನೀರು ಬಿಡುವಂತೆ ಆದೇಶ ನೀಡುವ ಮೂಲಕ ಸುಪ್ರೀಂ ಕೋರ್ಟ್ ನಮ್ಮ ಮರಣ ಶಾಸನ ಬರೆದಿದೆ. ಸರ್ಕಾರ, ಸುಪ್ರೀಂ ಕೋರ್ಟ್ ಹಾಗೂ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ ಇಲ್ಲಿನ ವಾಸ್ತವ ಸ್ಥಿತಿ ತಿಳಿಸಿಕೊಡುವಲ್ಲಿ ವಿಫಲವಾಗಿದೆ ಎಂದು ದೂರಿದರು. ಇದೇ ವೇಳೆ ಕೆಆರ್‌ಎಸ್‌ಗೆ ಮುತ್ತಿಗೆ ಹಾಕಲು ಯತ್ನಿಸಿದ ರೈತರನ್ನು, ಪೊಲೀಸರು ಬಂಧಿಸಿ ಕರೆದೊಯ್ದರು. ಪ್ರತಿಭಟನೆಯಲ್ಲಿ ಭೂಮಿ ತಾಯಿ ಹೋರಾಟ ಸಮಿತಿ ಕಾರ್ಯದರ್ಶಿ ಎಂ.ವಿ.ಕೃಷ್ಣ, ಖಜಾಂಚಿ ಮಹದೇವು, ಸದಸ್ಯರಾದ ರವಿ ಲಕ್ಷ್ಮಣ, ಸುನೀಲ್, ಮಹಾಲಿಂಗು, ರಾಮಚಂದ್ರು, ಕೆಂಪೇಗೌಡ, ಕೃಷ್ಣ, ಕುಮಾರ ಬಿ.ಸಿ, ಮಹದೇವು ಸೇರಿದಂತೆ ಇನ್ನಿತರರಿದ್ದರು.

ಈ ಬಾರಿ ಸರಳ ದಸರಾ



ಮೈಸೂರು, ಸೆ.21– ರಾಜ್ಯದಲ್ಲಿ ಮಳೆ ಪ್ರಮಾಣ ಕಡಿಮೆಯಾಗಿರುವುದರಿಂದ ರೈತಾಪಿ ವರ್ಗವು ಸಂಕಷ್ಟದಲ್ಲಿದ್ದು, ಈ ಬಾರಿ ಸರಳ ಹಾಗೂ ಅರ್ಥಪೂರ್ಣ ದಸರಾ ಆಚರಿಸಲು ನಮ್ಮ ಸರ್ಕಾರ ನಿರ್ಧರಿಸಿದೆ ಎಂದು ಮೈಸೂರು ಜಿಲ್ಲಾ ಉಸ್ತುವಾರಿ ಹಾಗೂ ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಮ್ಮ ಅಧಿಕೃತ ಟ್ವಿಟರ್ ಖಾತೆಯಲ್ಲಿ ಗುರುವಾರ ತಿಳಿಸಿದ್ದಾರೆ. ಇತ್ತೀಚೆಗೆ ನಡೆದ ಹಂಪಿ ಉತ್ಸವ ಪೂರ್ವ ಸಿದ್ಧತಾ ಸಭೆಯಲ್ಲಿ ರಾಜ್ಯದಲ್ಲಿ ಮುಂಗಾರು ವೈಫಲ್ಯ ಹಾಗೂ ಬರದ ಛಾಯೆ ಹಿನ್ನೆಲೆಯಲ್ಲಿ ಹಂಪಿ ಉತ್ಸವವನ್ನು ಮುಂದೂಡುವುದು ಹಾಗೂ ಮೈಸೂರು ದಸರಾ ಸರಳ ಹಾಗೂ ಸಾಂಪ್ರದಾಯಿಕತೆಗೆ ಒತ್ತು ನೀಡುವ ಸಂಬಂಧ ಪ್ರಸ್ತಾಪವಾಗಿತ್ತು. ಅಂತೆಯೇ ಈಗಾಗಲೇ ಹಂಪಿ ಉತ್ಸವವನ್ನು ಮುಂದೂಡಲಾಗಿದೆ. ಈಗ ದಸರಾವನ್ನು ಸರಳವಾಗಿ ಆಚರಿಸಲು ಸರ್ಕಾರ ನಿರ್ಧರಿಸಿದೆ.

ವೀಕೇರ್ ಎಕ್ಸ್–ಸರ್ವೀಸ್‌ಮೆನ್ ಟ್ರಸ್ಟ್ ಅಧ್ಯಕ್ಷ ಎಂ.ಎನ್. ಸುಬ್ರಮಣಿ ನಿಧನ



ಮೈಸೂರು, ಸೆ. 21–ಮೈಸೂರಿನ ವೀಕೇರ್ ಎಕ್ಸ್–ಸರ್ವೀಸ್‌ಮೆನ್ ಟ್ರಸ್ಟ್ ಅಧ್ಯಕ್ಷರು, ಇಂಡಿಯನ್ ಏರ್ ಫೋರ್ಸ್‌ನ ಮಾಜಿ ಸಾರ್ಜೆಂಟ್ ಹಾಗೂ ವಿಜಯನಗರ ಮೂರನೇ ಹಂತದ ನಿವಾಸಿ ಮಂಡೇಟೀರಾ ಸುಬ್ರಮಣಿ (67) ಗುರುವಾರ ಬೆಳಿಗ್ಗೆ ಹೃದಯಾಘಾತದಿಂದ ನಿಧನರಾದರು.

ವಕೀಲರಾದ ಸುಬ್ರಮಣಿ ಅವರು ಪತ್ನಿ ಶಕುಂತಲಾ, ಪುತ್ರ ಸೂರಜ್, ಪುತ್ರಿ ಸಿತಾರಾ ಸೇರಿದಂತೆ ಅಪಾರ ಬಂಧು ಬಳಗ ಮತ್ತು ಸ್ನೇಹಿತರನ್ನು ಅಗಲಿದ್ದಾರೆ.

ಸುಬ್ರಮಣಿ ಅವರು ಕೊಡಗು ಎಕ್ಸ್–ಸರ್ವೀಸ್‌ಮೆನ್ ವೆಲ್‌ಫೇರ್ ಅಸೋಸಿಯೇಷನ್, ಮೈಸೂರು ಈಸ್ಟ್‌ನ ಗೌರವ ಸಲಹೆಗಾರರು, ಮೈಸೂರು ಸಶಸ್ತ್ರ ಪಡೆಗಳ ಎಕ್ಸ್–ಸರ್ವೀಸ್‌ಮೆನ್ ಅಸೋಸಿಯೇಷನ್ ಗೌರವ ಕಾನೂನು ಸಲಹೆಗಾರರು ಮತ್ತು ಕೊಡಗಿನ ಟಿ.ಶೆಟ್ಟಿಗೇರಿ ಎಕ್ಸ್–ಸರ್ವೀಸ್‌ಮೆನ್ ಅಸೋಸಿಯೇಷನ್‌ನ ಗೌರವ ಸಲಹೆಗಾರರಾಗಿಯೂ ಸೇವೆ ಸಲ್ಲಿಸಿದ್ದಾರೆ. ಅಂತ್ಯಕ್ರಿಯೆ ವಿಜಯನಗರ 4ನೇ ಹಂತದಲ್ಲಿರುವ ಮುಕ್ತಿಧಾಮದಲ್ಲಿ ಗುರುವಾರ ಮಧ್ಯಾಹ್ನ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರಿನ ಯುದ್ಧ ಸ್ಮಾರಕ ನಿರ್ಮಾಣದ ಪ್ರಮುಖ ರೂವಾರಿ

2000ರಲ್ಲಿ ಯುದ್ಧ ಸ್ಮಾರಕಕ್ಕೆ ಪ್ರಸ್ತಾವನೆ, 2022ರಲ್ಲಿ ಶಂಕುಸ್ಥಾಪನೆ, 2023ರಲ್ಲಿ ಕಾಮಗಾರಿ ಪ್ರಗತಿಯಲ್ಲಿದೆ

ಮೈಸೂರು, ಸೆ.21–ಗುರುವಾರ (ಸೆ.21)ದಂದು ನಿಧನರಾದ ವೀಕೇರ್ ಎಕ್ಸ್–ಸರ್ವೀಸ್‌ಮೆನ್ ಟ್ರಸ್ಟ್‌ನ ಅಧ್ಯಕ್ಷರಾದ ಮಂಡೇಟಿರ ಎನ್.ಸುಬ್ರಮಣಿ ಅವರು ಮೈಸೂರಿನಲ್ಲಿ ಯುದ್ಧ ಸ್ಮಾರಕ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಮೈಸೂರಿನ ಹಳೇ ಜಿಲ್ಲಾಧಿಕಾರಿಗಳ ಕಚೇರಿ (ಡಿಸಿ)ಗೆ ಹೊಂದಿಕೊಂಡಂತಿರುವ ಎನ್‌ಸಿಸಿ ಪರೇಡ್ ಮೈದಾನದಲ್ಲಿ ಜುಲೈ 29, 2022ರಂದು ಶಂಕುಸ್ಥಾಪನೆ ನೆರವೇರಿಸಲಾಗಿತ್ತು.

ಹಿರಿಯ ಸಾರ್ಜೆಂಟ್ ಎಂ.ಎನ್. ಸುಬ್ರಮಣಿ ಅವರು ಯುದ್ಧ ಸ್ಮಾರಕ ಯೋಜನೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದು, ಈ ಸಂಬಂಧ 2000ರಲ್ಲಿ ರಾಜ್ಯ ಸರ್ಕಾರ ಮತ್ತು ಜಿಲ್ಲಾಡಳಿತಕ್ಕೆ ಪ್ರಸ್ತಾವನೆ ಸಲ್ಲಿಸಿದ್ದರು. ಅಂದಿನ ಜಿಲ್ಲಾಧಿಕಾರಿ ಬಸವರಾಜು ಅವರು ಹುತಾತ್ಮ ಯೋಧರ ಗೌರವಾರ್ಥ ಸ್ಮಾರಕ ನಿರ್ಮಾಣಕ್ಕೆ ಜಾಗ ನೀಡುವ ಭರವಸೆ ನೀಡಿದ್ದು, ಈಗ ಆ ಜಾಗದಲ್ಲಿ ಯುದ್ಧ ಸ್ಮಾರಕ ನಿರ್ಮಾಣವಾಗುತ್ತಿದೆ.

ಕಳೆದ 22 ವರ್ಷಗಳಿಂದ ಬಹು ನಿರೀಕ್ಷಿತ ಮೈಸೂರಿನ ಯುದ್ಧ ಸ್ಮಾರಕ ನಿರ್ಮಾಣ ಕಾಮಗಾರಿಗೆ ಮಾಜಿ ಶಾಸಕ ಎಲ್.ನಾಗೇಂದ್ರ ಅವರು ಕಳೆದ ವರ್ಷ ಶಂಕುಸ್ಥಾಪನೆ ಮಾಡುವ ಮೂಲಕ ಕೈಗೂಡಿತು. ಸ್ಮಾರಕದ ಕಾಮಗಾರಿ ಹಿರಿಯ ಕೆಎಎಸ್ ಅಧಿಕಾರಿ ಸಿ.ಎಲ್. ಆನಂದ ಮತ್ತು ಓರ್ವ ಮಾಜಿ ಯೋಧರ ಮೇಲ್ವಿಚಾರಣೆಯಲ್ಲಿ ನಡೆಯುತ್ತಿದೆ.

ಯುದ್ಧ ಸ್ಮಾರಕವನ್ನು, ಚೌಕಾಕಾರದಲ್ಲಿ 10 ಅಡಿ ತಳಪಾಯ ಸೇರಿದಂತೆ 43 ಅಡಿ ಎತ್ತರ, ನಾಲ್ಕು ಕಡೆ 5 ಅಡಿ ಎತ್ತರದ ಸಾರನಾಥ ಅಶೋಕ ಲಾಂಛನದೊಂದಿಗೆ ನಿರ್ಮಾಣವಾಗುತ್ತಿದೆ. ಸ್ಮಾರಕದ ಮುಖ್ಯದ್ವಾರ ರಕ್ಷಣಾ ಪಡೆಯ ಮೂರು ಘಟಕಗಳಾದ ಸೇನಾಪಡೆ, ನೌಕಾಪಡೆ ಮತ್ತು ವಾಯುಪಡೆಯ ಚಿಹ್ನೆಗಳನ್ನು ಚಿತ್ರಿಸಲಾಗುತ್ತಿದೆ. ಹಾಗೂ ಸ್ಮಾರಕ ಮೂರು ಬದಿಗಳಲ್ಲಿ ಸಶಸ್ತ್ರ ಪಡೆಗಳ ಚಿಹ್ನೆಗಳನ್ನು ಹೊಂದಿರುತ್ತದೆ.

ವಿಧವೆಯರು ಪಿಂಚಣಿ ಪಡೆಯಲು ಸಹಾಯ: ವೀಕೇರ್ ಎಕ್ಸ್–ಸರ್ವೀಸ್‌ಮೆನ್ ಟ್ರಸ್ಟ್ ಅಧ್ಯಕ್ಷರಾದ ಸುಬ್ರಮಣಿ ಅವರು ಮಾಜಿ ಸೈನಿಕರು ಮತ್ತು ಹುತಾತ್ಮ ಯೋಧರ ವಿಧವಾ ಪತ್ನಿಯರು, ಕುಟುಂಬಗಳು ಅವರ ಪಿಂಚಣಿಗೆ ಸಂಬಂಧಿಸಿದ ಹಲವಾರು ಸಮಸ್ಯೆಗಳನ್ನು ಬಗೆಹರಿಸುವ ಮೂಲಕ ಮಾಜಿ ಸೈನಿಕರು ಮತ್ತು ಅವರ ಕುಟುಂಬದ ಕಲ್ಯಾಣಕ್ಕಾಗಿ ನಿರಂತರವಾಗಿ ಶ್ರಮಿಸಿದ್ದಾರೆ. ಮೈಸೂರು, ಕೊಡಗು, ಮಂಡ್ಯ, ಚಾಮರಾಜನಗರ, ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ನೆಲೆಸಿರುವ ಮಾಜಿ ಸೈನಿಕ ಬಂಧುಗಳು ಟ್ರಸ್ಟ್‌ನ ಸೇವೆಯನ್ನು ಪಡೆದುಕೊಂಡಿದ್ದಾರೆ.



ಟಿ.ಶೆಟ್ಟಿಗೇರಿ ಎಕ್ಸ್–ಸರ್ವೀಸ್‌ಮೆನ್ ಅಸೋಸಿಯೇಷನ್‌ನ ಸಲಹೆಗಾರರಾಗಿದ್ದ ಸುಬ್ರಮಣಿ ಅವರನ್ನು ಇತ್ತೀಚೆಗೆ ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ ಅವರು ದಕ್ಷಿಣ ಕೊಡಗಿನ ಟಿ.ಶೆಟ್ಟಿಗೇರಿ ಗ್ರಾಮದಲ್ಲಿ ಯುದ್ಧ ಸ್ಮಾರಕ ಉದ್ಘಾಟನಾ ಸಂದರ್ಭದಲ್ಲಿ ಅಭಿನಂದಿಸಿದ್ದರು.

ಟಿ.ಶೆಟ್ಟಿಗೇರಿ ಎಕ್ಸ್–ಸರ್ವೀಸ್‌ಮೆನ್ ಅಸೋಸಿಯೇಷನ್‌ನ ಸಲಹೆಗಾರರಾಗಿದ್ದ ಸುಬ್ರಮಣಿ ಅವರನ್ನು ಇತ್ತೀಚೆಗೆ ವಿರಾಜಪೇಟೆ ಶಾಸಕ ಎ.ಎಸ್. ಪೊನ್ನಣ್ಣ ಅವರು ದಕ್ಷಿಣ ಕೊಡಗಿನ ಟಿ.ಶೆಟ್ಟಿಗೇರಿ ಗ್ರಾಮದಲ್ಲಿ ಯುದ್ಧ ಸ್ಮಾರಕವನ್ನು ಉದ್ಘಾಟಿಸಿದ ಸಂದರ್ಭದಲ್ಲಿ ಹಲವಾರು ನಿವೃತ್ತ ರಕ್ಷಣಾ ಸಿಬ್ಬಂದಿ, ದಾನಿಗಳು ಮತ್ತು ಸಂಘದ ಪರವಾಗಿ ಸಮಾಜಕ್ಕೆ ಗಮನಾರ್ಹ ಕೊಡುಗೆ ನೀಡಿದ ಮಹನೀಯರೊಂದಿಗೆ ಸನ್ಮಾನಿಸಲಾಗಿತ್ತು. 1965ರ ಇಂಡೋ–ಪಾಕ್ ಯುದ್ಧದಲ್ಲಿ ಹುತಾತ್ಮರಾದ ಗ್ಯಾಲಂಟ್ ಫೈಟರ್ ಪೈಲಟ್ ಸ್ಕ್ವಾಡ್ರನ್ ಲೀಡರ್ ಅಜ್ಜಮಾಡ ಬೋಪಯ್ಯ ದೇವಯ್ಯ (ಎ.ಬಿ. ದೇವಯ್ಯ) ಅವರ ಆಳೆತ್ತರದ ಪ್ರತಿಮೆಯನ್ನು ಕೊಡಗಿನ ಮಡಿಕೇರಿಯಲ್ಲಿ ಸೆಪ್ಟೆಂಬರ್ 7, 2020ರಂದು ಸ್ಥಾಪಿಸುವಲ್ಲಿ ಸುಬ್ರಮಣಿ ಪ್ರಮುಖ ಪಾತ್ರ ವಹಿಸಿದ್ದರು. ಮೈಸೂರಿನ ಹಳೇ ಡಿಸಿ ಕಚೇರಿ ಬಳಿ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಉಪನಿರ್ದೇಶಕರ ಕಚೇರಿ ಇರುವ ಕಟ್ಟಡಕ್ಕೆ 'ಸ್ಕ್ವಾಡ್ರನ್ ಲೀಡರ್ ಎ.ಬಿ.ದೇವಯ್ಯ ಭವನ'ವೆಂದು 2003ರಲ್ಲಿ ನಾಮಕರಣ ಮಾಡುವಲ್ಲೂ ಇವರ ಪಾತ್ರವಿದೆ.



ಸುತ್ತೂರಿನ ಜೆಎಸ್‌ಎಸ್ ಸಂಸ್ಥೆಗಳ ವತಿಯಿಂದ ಪ್ರತಿಷ್ಠಾಪಿಸಿದ್ದ ಗಣೇಶ ಮೂರ್ತಿಯನ್ನು ಗುರುವಾರ ಕಪಿಲಾ ನದಿಯಲ್ಲಿ ವಿಸರ್ಜಿಸಲಾಯಿತು. ಈ ವೇಳೆ ಸಂಸ್ಥೆ ಮುಖ್ಯಸ್ಥರು ಹಾಗೂ ಸಿಬ್ಬಂದಿ ವರ್ಗ ಹಾಜರಿದ್ದರು.

ನಾಳೆ ಲೇಖಕರೊಂದಿಗೆ ವಿಚಾರ ಮಂಥನ

ಮೈಸೂರು,ಸೆ.21–ಹಿಂದೂ, ಹಿಂದೂ ಧರ್ಮ ಮತ್ತು ಹಿಂದುತ್ವ ಈಗಿನ ಬಹು ಚರ್ಚಿತ ವಿಷಯ. ಹಿಂದುತ್ವದ ತತ್ವ ಬಹುತ್ವ ಎನ್ನುವುದನ್ನು ತಾರ್ಕಿಕ ಅಧ್ಯಯನಗಳ ಮೂಲಕ ಸಾಬೀತುಪಡಿಸಿದ, ಬಹುವಚನಕ್ಕೊಂದೇ ತತ್ವ ಕೃತಿಯ ಲೇಖಕರಾದ ಡಾ.ಅಜಕ್ಕಳ ಗಿರೀಶ್‌ಭಟ್ ಅವರೊಂದಿಗೆ ಒಂದು ಚಿಂತನ ಪ್ರಚೋದಕ ಚರ್ಚೆ ಮತ್ತು ವಿಚಾರ ಮಂಥನ ಕಾರ್ಯಕ್ರಮವನ್ನು ಮಂಥನ–ಮೈಸೂರು ತಂಡ ಆಯೋಜಿಸಿದೆ. ಸೆ.23 ಸಂಜೆ 5.30ಕ್ಕೆ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಕಟ್ಟಡದ ಎಸ್ಪಿ ಭಟ್ ಸಭಾಂಗಣದಲ್ಲಿ ಈ ಚಿಂತನ ಮಂಥನ ಕಾರ್ಯಕ್ರಮ ನಡೆಯಲಿದೆ. ಹೆಚ್ಚಿನ ಮಾಹಿತಿಗಾಗಿ ಮೊ.ಸಂ. 99864 93998, 98804 35175 ಸಂಪರ್ಕಿಸಬಹುದು.

ಚಿರತೆಗಳಿಗೆ ಯಾವುದೇ ಸೋಂಕು ತಗುಲದಂತೆ ಎಚ್ಚರಿಕೆ ವಹಿಸಲು ಅಧಿಕಾರಿಗಳಿಗೆ ಅರಣ್ಯ ಸಚಿವರ ಸೂಚನೆ

ಬೆಂಗಳೂರು, ಸೆ.21(ಕೆಎಂಶಿ)–ರಾಜ್ಯದ ಯಾವುದೇ ಮೃಗಾಲಯಗಳಲ್ಲಿ ಚಿರತೆಗಳಿಗೆ (ಬೆಕ್ಕಿನ ಜಾತಿಗೆ ಸೇರಿದ ವನ್ಯಮೃಗಗಳಿಗೆ) ಸೋಂಕು ಬಾರದಂತೆ ಅಗತ್ಯ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವಂತೆ ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಬನ್ನೇರುಘಟ್ಟ ರಾಷ್ಟ್ರೀಯ ಜೈವಿಕ ಉದ್ಯಾನದಲ್ಲಿ ಬೆಕ್ಕುಗಳಿಗೆ ತಗಲುವ ಮಾರಕ ಫೆಲೈನ್ ಪ್ಯಾನ್ಲ್ಯೂಕೋ ಪೇನಿಯಾ (ಎಫ್.ಪಿ.ವಿ) ವೈರಾಣು ಸೋಂಕಿನಿಂದ 7 ಚಿರತೆ ಮರಿಗಳು ಮತ್ತು ಉದರ ಸಂಬಂಧಿ ಕಾಯಿಲೆ (ಹೆಮೊರೈಜಿಕ್ ಎಂಟ್ರೈಟಿಸ್ ಮತ್ತು ಎಂಡೋ ಕಾರ್ಡೈಟಸ್)ಯಿಂದ ಹಾಗೂ ಪರಸ್ಪರ ಸಂಘರ್ಷದಿಂದ 16 ಜಿಂಕೆಗಳು ಸಾವಿಗೀಡಾಗಿರುವ ಹಿನ್ನೆಲೆಯಲ್ಲಿ ಉದ್ಯಾನಕ್ಕೆ ಖುದ್ದು ಭೇಟಿ ನೀಡಿ ಪರಿಶೀಲಿಸಿ, ಬಳಿಕ ಉನ್ನತ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಸಚಿವರು, ಉದ್ಯಾನದಲ್ಲಿ ಚಿರತೆಗಳಿಗೆ ಸೋಂಕು ಬಂದಿರುವ ಹಿನ್ನೆಲೆಯಲ್ಲಿ ಇಲ್ಲಿನ ಯಾವುದೇ ಸಿಬ್ಬಂದಿ ರಾಜ್ಯದ ಬೇರೆ ಯಾವುದೇ ಮೃಗಾಲಯಕ್ಕೆ ಭೇಟಿ ನೀಡದಂತೆ ಆದೇಶ ನೀಡಿದರು.



ಮೈಸೂರಿನ ಜಗದ್ವಿಖ್ಯಾತ ಶ್ರೀಚಾಮರಾಜೇಂದ್ರ ಮೃಗಾಲಯ ಮತ್ತು ಇತರ ಮೃಗಾಲಯಗಳಲ್ಲಿ ಬೆಕ್ಕಿನ ಜಾತಿಯ ಪ್ರಾಣಿಗಳು ಅಂದರೆ ಚಿರತೆ, ಸಿಂಹ, ಹುಲಿ, ಕಾಡುಬೆಕ್ಕು ಇತ್ಯಾದಿಗಳಿಗೆ ಅಗತ್ಯವಿದ್ದರೆ ಲಸಿಕೆ ನೀಡುವಂತೆ ಸೂಚಿಸಿದರು. ಜಿಂಕೆಗಳ ಸಾವಿನ ಕುರಿತಂತೆ ಸುದೀರ್ಘ ಚರ್ಚೆ ನಡೆಸಿದ ಸಚಿವರಿಗೆ ಬೆಂಗಳೂರಿನ ಸೇಂಟ್ ಜಾನ್ಸ್ ಆಸ್ಪತ್ರೆಯಿಂದ ಸಂರಕ್ಷಣೆ ಮಾಡಿ ತರಲಾದ ಜಿಂಕೆಗಳಿಗೆ ಉದರ ಸಂಬಂಧಿ ಕಾಯಿಲೆಗಳಿತ್ತು, ಹೀಗಾಗಿ ಅವುಗಳನ್ನು ಪ್ರತ್ಯೇಕವಾಗಿ ಇಡಲಾಗಿತ್ತು. ಅವು ಪರಸ್ಪರ ಕಚ್ಚಾಟದಿಂದ ಮತ್ತು ಸೋಂಕಿನಿಂದ ಮೃತಪಟ್ಟಿವೆ.

ಮೃಗಾಲಯ ಅತ್ಯಂತ ಸುರಕ್ಷಿತ ಮತ್ತು ಸಂರಕ್ಷಿತ ತಾಣವಾಗಿದ್ದು ಇಲ್ಲಿ ಇಷ್ಟು ಪ್ರಮಾಣದಲ್ಲಿ ಮೃಗಗಳ ಸಾವು ನಿಜಕ್ಕೂ ಆಘಾತಕಾರಿ. ಇನ್ನು ಮುಂದೆ ಇಂತಹ ಘಟನೆ ಮರುಕಳಿಸದಂತೆ ಎಚ್ಚರಿಕೆ ವಹಿಸಿ ಎಂದು ಸಚಿವರು ಕಾರ್ಯನಿರ್ವಾಹಕ ನಿರ್ದೇಶಕರಿಗೆ ಸೂಚನೆ ನೀಡಿದರು.

ಅರಣ್ಯ ಅಧಿಕಾರಿಗಳು ಮತ್ತು ವೈದ್ಯಾಧಿಕಾರಿಗಳು ಸಮನ್ವಯದೊಂದಿಗೆ ಎಲ್ಲ ಪ್ರಾಣಿಗಳನ್ನು ಗಮನವಿಟ್ಟು ಪರೀಕ್ಷಿಸಿ ಅವುಗಳ ಆರೈಕೆ ಮತ್ತು ಸಂರಕ್ಷಣೆಗೆ ಆದ್ಯತೆ ನೀಡಬೇಕು. ಯಾವುದೇ ವೈಷಮ್ಯ, ಮನಸ್ತಾಪದಿಂದ ಸಂಸ್ಥೆಗೆ ಸರ್ಕಾರಕ್ಕೆ ಕೆಟ್ಟ ಹೆಸರು ಬಾರದಂತೆ ಮುಂಜಾಗ್ರತೆ ವಹಿಸಬೇಕು ಎಂದು ಸ್ಪಷ್ಟ ಸೂಚನೆ ನೀಡಿದರು. ಯಾವುದೇ ವನ್ಯಮೃಗಗಳು ಹಠಾತ್ ಅಥವಾ ಅನುಮಾನಾಸ್ಪದ ಸಾವಿಗೀಡಾದರೆ ತಕ್ಷಣವೇ ಸರ್ಕಾರಕ್ಕೆ ಮತ್ತು ಉನ್ನತ ಅಧಿಕಾರಿಗಳಿಗೆ ಮಾಹಿತಿ ನೀಡುವಂತೆ ಅರಣ್ಯ ಸಚಿವ ಈಶ್ವರ ಖಂಡ್ರೆ ಆದೇಶಿಸಿದರು.

ಪೌರಾಡಳಿತ, ಹಜ್ ಸಚಿವರ ಮೈಸೂರು ಜಿಲ್ಲಾ ಪ್ರವಾಸ



ಮೈಸೂರು.ಸೆ.21–ಪೌರಾಡಳಿತ ಮತ್ತು ಹಜ್ ಸಚಿವ ರಹೀಮ್ ಖಾನ್ ಸೆ.22 ಬೆಳಗ್ಗೆ 10 ಗಂಟೆಗೆ ಮೈಸೂರು ಜಿಲ್ಲಾ ಪಂಚಾಯತ್ ಅಬ್ದುಲ್ ನಜೀರ್‌ಸಾಬ್ ಸಭಾಂಗಣದಲ್ಲಿ ನಡೆಯುವ ಪೌರಾಡಳಿತ ಇಲಾಖೆಗೆ ಸಂಬಂಧಿಸಿದ ನಗರ ಸ್ಥಳೀಯ ಸಂಸ್ಥೆಗಳಲ್ಲಿನ ವಿವಿಧ ಯೋಜನೆಗಳ ಪ್ರಗತಿ, ಕಂದಾಯ ವಿಷಯಗಳು, ಸಾರ್ವಜನಿಕ ಆರೋಗ್ಯ ಸೇವೆಗಳ ವಿಷಯಗಳು ಹಾಗೂ ಇತರ ವಿಷಯಗಳ ಕುರಿತು ನಗರ ಅಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು ಪೌರಾಡಳಿತ ಹಾಗೂ ಹಜ್ ಸಚಿವರ ಜಂಟಿ ಅಧ್ಯಕ್ಷತೆ ನಡೆಯುವ ಸಭೆಯಲ್ಲಿ ಪಾಲ್ಗೊಳ್ಳುವರು.

ಮಧ್ಯಾಹ್ನ 1:30ಕ್ಕೆ ಮೈಸೂರು ವಿಭಾಗದ ಎಲ್ಲಾ ನಗರ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರು, ನಗರ ಯೋಜನೆ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು, ನಗರ ಪಾಲಿಕೆ ಆಯುಕ್ತರು, ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ, ಕರ್ನಾಟಕ ನಗರ ನೀರು ಸರಬರಾಜು, ಒಳಚರಂಡಿ ಮಂಡಳಿ ಅಧಿಕಾರಿಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನೆ ಇಲಾಖೆ ಅಧಿಕಾರಿಗಳ ಜೊತೆಯಲ್ಲಿ ಜಿಪಂನ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಸಭೆಯಲ್ಲಿ ಭಾಗವಹಿಸಲಿದ್ದಾರೆ ಎಂದು ಪೌರಾಡಳಿತ ಮತ್ತು ಹಜ್ ಸಚಿವರ ಆಪ್ತ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಗಪುರದ ದೀಕ್ಷಾ ಭೂಮಿಗೆ ಭೇಟಿ ನೀಡುವ ಯಾತ್ರಾರ್ಥಿಗಳಿಗೆ ಬಸ್ ಪ್ರಯಾಣಕ್ಕೆ ಅರ್ಜಿ ಆಹ್ವಾನ

ಮೈಸೂರು.ಸೆ.21– 2023–24ನೇ ಸಾಲಿನಲ್ಲಿ ಮಹಾರಾಷ್ಟ್ರದ ನಾಗಪುರದಲ್ಲಿನ ನಾಗಮರದಲ್ಲಿನ ದೀಕ್ಷಾ ಭೂಮಿಗೆ ಭೇಟಿ ನೀಡುವ ಯಾತ್ರಾರ್ಥಿಗಳಿಗೆ ಬಸ್ಸುಗಳ ವ್ಯವಸ್ಥೆಯನ್ನು ಸಮಾಜ ಕಲ್ಯಾಣ ಇಲಾಖೆಯಿಂದ ಕಲ್ಪಿಸಲಾಗುತ್ತಿದ್ದು, ದೀಕ್ಷಾ ಭೂಮಿಗೆ ಭೇಟಿ ನೀಡುವ ಯಾತ್ರಾರ್ಥಿಗಳು ಸಮಾಜ ಕಲ್ಯಾಣ ಇಲಾಖೆ ವೆಬ್‌ಸೈಟ್ http://www.sw.kar.nic.in ನಲ್ಲಿ ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಅ.10 ಕೊನೆಯ ದಿನಾಂಕವಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರ ಕಚೇರಿಯನ್ನು ಸಂಪರ್ಕಿಸಬಹುದು.

ಸೆ.24ರಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು.ಸೆ.21– ತ್ರೈಮಾಸಿಕ ಅವಧಿಯ ನಿರ್ವಹಣಾ ಕಾಮಗಾರಿ ನಿಮಿತ್ತ ಸೆ.24ರಂದು ಬೆಳಗ್ಗೆ 10ರಿಂದ ಸಂಜೆ 5:30 ವರೆಗೆ ಸಿದ್ದಖಿನಗರ, ಶಿವರಾತ್ರೀಶ್ವರನಗರ, ಮಣಿಪಾಲ್ ಹಾಸ್ಪಿಟಲ್ಸ್, ಹನುಮಂತನಗರ, ಹುಡ್ಕೊ, ಇಂಡಸ್ಟ್ರಿಯಲ್ 'ಎ' ಬಡಾವಣೆ, 'ಸಿ' ಬಡಾವಣೆ, ಟೆಲಿಫೋನ್ ಎಕ್ಸ್‌ಚೇಂಜ್, ಕೆಎಸ್‌ಆರ್‌ಟಿಸಿ ಡಿಪೋ, ಲಿಡ್ಕರ್ ಕಾಲೋನಿ, ಇಂಡಸ್ಟ್ರಿಯಲ್ 'ಬಿ' ಬಡಾವಣೆ, ಹೈವೆ ವೃತ್ತ, ಸ್ಟಾರ್ ಆಫ್ ಮೈಸೂರ್, ಪರಹಾ ಕಾಂಪೌಂಡ್, ಕಾವೇರಿನಗರ, ಬೆಲವತ್ತ, ಸಾದನಹಳ್ಳಿ, ಸಿದ್ದಲಿಂಗಪುರ, ಕೆ.ಆರ್.ಮಿಲ್ ಕಾಲೋನಿ, ನಾಗನಹಳ್ಳಿ, ಲಕ್ಷ್ಮಿಪುರ, ಕಳಸ್ತವಾಡಿ, ಮೈಸೂರು–ಬೆಂಗಳೂರು ಮುಖ್ಯ ರಸ್ತೆ ಹಾಗೂ ಸುತ್ತಮುತ್ತ ವಿದ್ಯುತ್ ವ್ಯತ್ಯಯವಾಗಲಿದೆ.

ಗೃಹಲಕ್ಷ್ಮಿಯರಿಗೆ ಮೂರ್‍ನಾಲ್ಕು ದಿನದಲ್ಲಿ ಬಾಕಿ ಹಣ ಜಮೆ

ಮೈಸೂರು, ಸೆ. 21– ಜೆಎಸ್‌ಎಸ್ ರೇಡಿಯೋ 91.2ಎಫ್‌ಎಂ ಸಮುದಾಯ ಬಾನುಲಿ ಕೇಂದ್ರವು ಆಯೋಜಿಸಿದ್ದ ನೇರ ಸಂದರ್ಶನ ಫೋನ್–ಇನ್ ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕ ಬಿ. ಬಸವರಾಜು ಭಾಗವಹಿಸಿ, ಗೃಹಲಕ್ಷ್ಮಿಯ ಅರ್ಹ ಉಳಿದ ಫಲಾನುಭವಿಗಳಿಗೆ ಮೂರರಿಂದ ನಾಲ್ಕು ದಿನಗಳಲ್ಲಿ ಹಣ ಜಮೆಯಾಗಲಿದೆ ಎಂದು ಭರವಸೆ ನೀಡಿದರು.



ಒಟ್ಟು 539460 ಮಂದಿಗೆ ಹಣ ಬಿಡುಗಡೆ ಮಾಡಿದ್ದು, ಅದರಲ್ಲಿ 4,97,208 ಮಂದಿಗೆ ಅವರವರ ಖಾತೆಗೆ ಜಮೆಯಾಗಿದೆ. ಆದರೆ, 42,252 ಮಂದಿಗೆ ಖಾತೆ ಹಾಗೂ ಇತರೇ ತಾಂತ್ರಿಕ ದೋಷದಿಂದ ಪೇಮೆಂಟ್ ಫೇಲ್ಯೂರ್ ಆಗಿದೆ. ಉಳಿದ 72000 ಮಂದಿಗೆ ಮೂರ್‍ನಾಲ್ಕು ದಿನಗಳಲ್ಲಿ ಹಣ ಬಿಡುಗಡೆಯಾಗಲಿದೆ ಎಂದರು.

ಮೈಸೂರು ಜಿಲ್ಲೆಯಲ್ಲಿ 7,30,000 ರೇಷನ್ ಕಾರ್ಡ್ ಹೊಂದಿದ್ದು, ಇವರಲ್ಲಿ 6,48,575 ಜನರು ನೋಂದಣಿಯಾಗಿದ್ದಾರೆ ಉಳಿದ 81,425 ಕಾರ್ಡ್ ನೋಂದಣಿಯಾಗಿಲ್ಲ. ಆದರೆ, ಇವರು ನೋಂದಣಿ ಮಾಡಿಕೊಳ್ಳಲು ಇನ್ನೂ ಅವಕಾಶವಿದೆ ಎಂದರು.

ಕಾರ್ಯಕ್ರಮದಲ್ಲಿ ಮೈಸೂರು, ಹುಣಸೂರು, ಹೆಚ್.ಡಿ.ಕೋಟೆ, ಸರಗೂರು, ಟಿ.ನರಸಿಪುರ, ನಂಜನಗೂಡು, ಕೆ.ಆರ್.ನಗರ, ಸುತ್ತೂರು ಒಳಗೊಂಡಂತೆ 20ಕ್ಕೂ ಹೆಚ್ಚು ಕರೆಗಳಿಗೆ ಪ್ರತಿಕ್ರಿಯಿಸಿದ ಉಪನಿರ್ದೇಶಕರು, ರೇಷನ್ ಕಾರ್ಡ್‌ನಲ್ಲಿ ಮಹಿಳೆಯು ಯಜಮಾನಿಯಾಗಿರಬೇಕು. ಇಲ್ಲದಿದ್ದಲ್ಲಿ ಅದನ್ನು ತಿದ್ದುಪಡಿ ಮಾಡಲು ಅವಕಾಶಗಳಿವೆ. ಮಾಸಾಶನ ಪಡೆಯುತ್ತಿದ್ದರೂ ಈ ಯೋಜನೆ ಪಡೆಯಬಹುದು ಎಂದರು. ಇದುವರೆಗೂ ಹಣ ಪಡೆಯದಿದ್ದವರು ಒಂದು ವಾರ ಕಾದು ನೋಡಿ, ಬರಲಿಲ್ಲ ಎಂದರೆ ನಿಮ್ಮ ವ್ಯಾಪ್ತಿಯ ಶಿಶು ಅಭಿವೃದ್ಧಿ ಇಲಾಖೆಗೆ ಭೇಟಿ ನೀಡಿ, ಒಮ್ಮೆ ಪರಿಶೀಲಿಸಿಕೊಳ್ಳಿ ಎಂದು ಸಲಹೆ ನೀಡಿದರು.

ಇದೇ ಸಂದರ್ಭದಲ್ಲಿ ಕರೆಮಾಡಿದ ಹಲವು ಸಾರ್ವಜನಿಕರು ಅಂಗನವಾಡಿ ಕೇಂದ್ರದಲ್ಲಿ ನೀಡಲಾಗುತ್ತಿರುವ ಆಹಾರದ ಪೌಡರ್ ಗುಣಮಟ್ಟವಿಲ್ಲ. ಗರ್ಭಿಣಿಯರು ಮತ್ತು ಬಾಣಂತಿಯರಿಗೆ ನೀಡಲಾಗುತ್ತಿರುವ ಆಹಾರವನ್ನು ಸೇವಿಸುವವರ ಸಂಖ್ಯೆ ತುಂಬ ವಿರಳವಾಗಿದೆ. ಹಾಗಾಗಿ ಈ ಯೋಜನೆಯನ್ನು ಪರಿಶೀಲಿಸಿ, ಪರಿಷ್ಕರಿಸಬೇಕೆಂದು ಸಲಹೆ ನೀಡಿದರು. ಜೆಎಸ್‌ಎಸ್ ರೇಡಿಯೋ ಕೇಂದ್ರದ ನಿರೂಪಕ ಹಾಗೂ ಸಂಯೋಜಕ ಶಿವಕುಮಾರ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಜಿಲ್ಲಾ ಕಾರ್ಯಕ್ರಮ ಅಧಿಕಾರಿ ಮಂಜುನಾಥ್ ಹಾಗೂ ಜೆಎಸ್‌ಎಸ್ ರೇಡಿಯೋ ಕೇಂದ್ರದ ಕಾರ್ಯಕ್ರಮ ಸಹಾಯಕರಾದ ರಮೇಶ್ ಮತ್ತು ಕನ್ಯಾಕುಮಾರಿ ಹಾಜರಿದ್ದರು.

ನೀರಿನ ಮಟ್ಟ

ಕೆಆರ್‌ಎಸ್ ಅಣೆಕಟ್ಟು	ಕಬಿನಿ ಅಣೆಕಟ್ಟು	ಹಾರಂಗಿ ಅಣೆಕಟ್ಟು
ಗರಿಷ್ಠ ಮಟ್ಟ 124.80 ಅಡಿ	ಗರಿಷ್ಠ ಮಟ್ಟ 2,284.00 ಅಡಿ	ಗರಿಷ್ಠ ಮಟ್ಟ 2,859.00 ಅಡಿ
ಇಂದಿನ ಮಟ್ಟ 97.02 ಅಡಿ	ಇಂದಿನ ಮಟ್ಟ 2,275.70 ಅಡಿ	ಇಂದಿನ ಮಟ್ಟ 2,857.29 ಅಡಿ
ಹಿಂದಿನ ವರ್ಷದ ಮಟ್ಟ 124.30 ಅಡಿ	ಹಿಂದಿನ ವರ್ಷದ ಮಟ್ಟ 2,283.05 ಅಡಿ	ಹಿಂದಿನ ವರ್ಷದ ಮಟ್ಟ 2,857.86 ಅಡಿ
ನಿನ್ನೆಯ ಮಟ್ಟ 97.08 ಅಡಿ	ನಿನ್ನೆಯ ಮಟ್ಟ 2,275.97 ಅಡಿ	ನಿನ್ನೆಯ ಮಟ್ಟ 2,857.70 ಅಡಿ
ಇಂದಿನ ಒಳಹರಿವು 5,336 ಕ್ಯೂಸೆಕ್ಸ್	ಇಂದಿನ ಒಳಹರಿವು 2,799 ಕ್ಯೂಸೆಕ್ಸ್	ಇಂದಿನ ಒಳಹರಿವು 1,227 ಕ್ಯೂಸೆಕ್ಸ್
ಇಂದಿನ ಹೊರಹರಿವು 5,735 ಕ್ಯೂಸೆಕ್ಸ್	ಇಂದಿನ ಹೊರಹರಿವು 4,390 ಕ್ಯೂಸೆಕ್ಸ್	ಇಂದಿನ ಹೊರಹರಿವು 2,800 ಕ್ಯೂಸೆಕ್ಸ್

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

22.9.2023 ಶುಕ್ರವಾರ, ಮಳೆ ನಕ್ಷತ್ರ: ಉತ್ತರಾ 14.09.2023ರಿಂದ 27.09.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ,
ಶುಕ್ಲ ಪಕ್ಷ, ತಿಥಿ: ಸಪ್ತಮಿ, ನಕ್ಷತ್ರ: ಜ್ಯೇಷ್ಠ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ವ್ಯಸನ ಮುಕ್ತಿ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 10ರಿಂದ.

■ **ಇಂಡಿಯನ್ ಫಾರ್ಮಾಸ್ಯುಟಿಕಲ್ ಅಸೋಸಿಯೇಷನ್, ಮೈಸೂರು ಸ್ಥಳೀಯ ಶಾಖೆ, ಜೆಎಸ್‌ಎಸ್ ಫಾರ್ಮಸಿ ಕಾಲೇಜು:** ವಿಶ್ವ ಫಾರ್ಮಾಸಿಸ್ಟ್ ದಿನಾಚರಣೆ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್, ಮುಖ್ಯ ಅತಿಥಿಗಳು: ಕರ್ನಾಟಕ ಡ್ರಗ್ಸ್ ಅಂಡ್ ಫಾರ್ಮಾಸ್ಯುಟಿಕಲ್ ಮ್ಯಾನ್ಯೂಫ್ಯಾಕ್ಚರರ್ಸ್ ಅಸೋಸಿಯೇಷನ್ ಅಧ್ಯಕ್ಷ ಹರೀಶ್ ಕೆ.ಜೈನ್, ಅಧ್ಯಕ್ಷತೆ: ಜೆಎಸ್‌ಎಸ್ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ. ಬೆಟಸೂರ ಮಠ, ಗೌರವ ಅತಿಥಿಗಳು: ಜೆಎಸ್‌ಎಸ್ ಉನ್ನತ ಶಿಕ್ಷಣ ಅಕಾಡೆಮಿ ಕುಲಸಚಿವ ಡಾ. ಬಿ. ಮಂಜುನಾಥ, ಜೆಎಸ್‌ಎಸ್ ಫಾರ್ಮಸಿ ಕಾಲೇಜು ಪ್ರಿನ್ಸಿಪಾಲ್ ಡಾ.ಟಿ.ಎಂ.ಪ್ರಮೋದ್‌ಕುಮಾರ್, ಸ್ಥಳ: ಶ್ರೀ ರಾಜೇಂದ್ರ ಸಭಾಂಗಣ, ಜೆಎಸ್‌ಎಸ್ ಫಾರ್ಮಸಿ ಕಾಲೇಜು, ಬೆಳಗ್ಗೆ 10ಕ್ಕೆ.

■ **ಕರ್ನಾಟಕ ರಿಜಿಸ್ಟರ್ಡ್ ಫಾರ್ಮಾಸಿಸ್ಟ್ ಅಸೋಸಿಯೇಷನ್, ಜೆಎಸ್‌ಎಸ್ ಫಾರ್ಮಸಿ ಕಾಲೇಜು :** 6ನೇ ಆವೃತ್ತಿ ಟ್ಯಾಬ್ಲೆಟ್ ಕಪ್ ಕ್ರಿಕೆಟ್ ಪಂದ್ಯಾವಳಿ, ಉದ್ಘಾಟನೆ : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್, ಮುಖ್ಯ ಅತಿಥಿಗಳು : ಕರ್ನಾಟಕ ಡ್ರಗ್ಸ್ ಅಂಡ್ ಫಾರ್ಮಾಸ್ಯುಟಿಕಲ್ ಮ್ಯಾನ್ಯೂಫ್ಯಾಕ್ಚರರ್ಸ್ ಅಸೋಸಿಯೇಷನ್ ಅಧ್ಯಕ್ಷ ಹರೀಶ್ ಕೆ. ಜೈನ್, ಸೇಂಟ್ ಫಿಲೋಮಿನಾ ಕಾಲೇಜು ರೆಕ್ಟರ್ ಬರ್ನಾಡ್ ಪ್ರಕಾಶ್ ಬಾರ್ನಿಸ್, ಮೈಸೂರು ವಿಭಾಗದ ಡೆಪ್ಯುಟಿ ಡ್ರಗ್ಸ್ ಕಂಟ್ರೋಲರ್ ಬಿ.ಪಿ. ಅರುಣ್, ಸ್ಥಳ: ಜೆಎಸ್‌ಎಸ್ ಮೆಡಿಕಲ್ ಕಾಲೇಜು ಮೈದಾನ, ಬೆಳಗ್ಗೆ 10ಕ್ಕೆ.

■ **ಮಹಾಜನ ವಿದ್ಯಾಸಂಸ್ಥೆ, ಮಹಾಜನ ಪ್ರಥಮ ದರ್ಜೆ ಕಾಲೇಜು:** ಪ್ರೊ.ಜಿ.ಎಚ್.ನಾಯಕ–88 ರಾಷ್ಟ್ರೀಯ ವಿಚಾರ ಸಂಕಿರಣ–ಕನ್ನಡ ಸಾಹಿತ್ಯ ಮತ್ತು ಜೀವನ ಮೌಲ್ಯಗಳು, ಉದ್ಘಾಟನೆ: ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ, ನುಡಿ ಹೊತ್ತಿಗೆ ನ್ಯಾಯ ನಿಷ್ಠುರಿ ಜಿ.ಎಚ್.ನಾಯಕ ಶತಮಾನದ ಕನ್ನಡ ಸಾಹಿತ್ಯ: ಜಿ.ಎಚ್.ನಾಯಕ ಲೋಕಾರ್ಪಣೆ: ಮೀರಾನಾಯಕ, ಸಾಕ್ಷಿ ನುಡಿ: ಪ್ರೊ.ಬೋರಲಿಂಗಯ್ಯ, ಉಪಸ್ಥಿತರು: ಮಹಾಜನ ವಿದ್ಯಾಸಂಸ್ಥೆ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮಿ ಮುರಳೀಧರ್, ಪ್ರಾಂಶುಪಾಲರಾದ ಡಾ.ಜಯಕುಮಾರಿ, ನುಡಿ ತೋರಣ: ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್.ತಿಮ್ಮೇಗೌಡ, ನುಡಿ ತಂತು: ಅಭಿನವ ಬೆಂಗಳೂರಿನ ನ.ರವಿಕುಮಾರ್, ಸ್ಥಳ: ವಿವೇಕಾನಂದ ಸಭಾಂಗಣ, ಮಹಾಜನ ವಿದ್ಯಾಸಂಸ್ಥೆ, ಬೆಳಗ್ಗೆ 10ಕ್ಕೆ.

■ **ಶ್ರೀ ನಟರಾಜ ಪ್ರತಿಷ್ಠಾನ, ಶ್ರೀ ಹೊಸಮಠ, ಶರಣ ಜ್ಯೋತಿ ಪ್ರಸಾರಾಂಗ, ಕನ್ನಡ ಸಾಹಿತ್ಯ ಕಲಾಕೂಟ:** ಕಲಾವಿದ ಎಲ್.ಶಿವಲಿಂಗಪ್ಪ ರಚಿಸಿರುವ ಮಹಾಮಾನವತಾವಾದಿ–ಬಸವಣ್ಣ ಮರಾಠಿ ಅನುವಾದಿತ ಕೃತಿ ಕಲಾವಿದ ಮಣ್ಣೂರುಗುರಪ್ಪ ಅವರ ಲೇಖನಗಳ ಸಂಗ್ರಹ ವಚನಗಳಲ್ಲಿ ವಿಜ್ಞಾನ–ಸುಜ್ಞಾನ ಕೃತಿಗಳ ಬಿಡುಗಡೆ ಸಮಾರಂಭ, ಸಾನ್ನಿಧ್ಯ: ಶ್ರೀ ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ, ಮಹಾಮಾನವತಾವಾದಿ ಬಸವಣ್ಣ ಕೃತಿ ಬಿಡುಗಡೆ: ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕ ಪ್ರೊ. ನೀಲಗಿರಿ ಎಂ.ತಳವಾರ, ವಚನಗಳಲ್ಲಿ ವಿಜ್ಞಾನ ಸುಜ್ಞಾನ ಕೃತಿ ಬಿಡುಗಡೆ: ಎಡಿಸಿ ಪಿ.ಶಿವರಾಜು, ಕೃತಿಗಳ ಕುರಿತು: ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಡಾ.ಎಸ್. ಶಿವರಾಜಪ್ಪ, ಅಧ್ಯಕ್ಷತೆ: ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಹೆಳವರಹುಂಡಿ ಸಿದ್ದಪ್ಪ, ಪ್ರಾಸ್ತಾವಿಕ ನುಡಿ: ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಚಂದ್ರಶೇಖರ್, ಉಪಸ್ಥಿತರು: ಹಿರಿಯ ಲೇಖಕ ಎಲ್. ಶಿವಲಿಂಗಪ್ಪ, ಪ್ರಾಂಶುಪಾಲರಾದ ವಿ.ಡಿ.ಸುನೀತಾರಾಣಿ, ಸ್ಥಳ: ಶ್ರೀ ನಟರಾಜ ಸಭಾಭವನ, ಬೆಳಗ್ಗೆ 10.30ಕ್ಕೆ.

■ **ರಾಜು ಕ್ಷತ್ರಿಯ ಪತ್ತಿನ ಸಹಕಾರ ಸಂಘ :** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಎಸ್. ಶಿವಕುಮಾರ್, ಸ್ಥಳ: ಸಂಘದ ಕಚೇರಿ ಆವರಣ, ಸರಸ್ವತಿಪುರಂ, ಬೆಳಗ್ಗೆ 11ಕ್ಕೆ.

■ **ರಾಜ್ಯ ಮಟ್ಟದ ರಸ್ತೆ ಸಾರಿಗೆ ನಿಗಮಗಳ ಸೇವೆಯಲ್ಲಿರುವ ಮತ್ತು ನಿವೃತ್ತ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ :** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಎಸ್.ಎಂ. ಹಂಪಯ್ಯ, ಸ್ಥಳ: ಪ್ರಾರ್ಥನಾ ಮಂದಿರ, ವೀರಶೈವ ಅನಾಥಾಲಯ, ರಾಮಾನುಜ ರಸ್ತೆ, ಬೆಳಗ್ಗೆ 11.30ಕ್ಕೆ.

■ **ಇಂಡಿಯನ್ ಥಿಯೇಟರ್ ಫೌಂಡೇಶನ್ :** ರಾಷ್ಟ್ರೀಯ ಮಕ್ಕಳ ರಂಗೋತ್ಸವ, ಮಧ್ಯಾಹ್ನ 3.30 ರಿಂದ ಪೋಸ್ಟ್ ಮಾಸ್ಟರ್ (ಹಿಂದಿ), ಇಲಾ ದೀದಿ (ಹಿಂದಿ), ಸಂಜೆ 7 ರಿಂದ ನಾಜೀರ್ ಕಥಾ ಕೀರ್ತನಾ (ಹಿಂದಿ), ಪಿಪ್ಪಿಗೊಂದು ಪಪ್ಪಿ (ಕನ್ನಡ), ಸ್ಥಳ: ಕಿರು ರಂಗಮಂದಿರ.

■ **ಅಭಿವೃದ್ಧಿ ಆಯುಕ್ತರು (ಕೈಮಗ್ಗ), ಜವಳಿ ಮಂತ್ರಾಲಯ, ಕೈಮಗ್ಗ ಮತ್ತು ಜವಳಿ ಇಲಾಖೆ, ಕರ್ನಾಟಕ ರಾಜ್ಯ ಸಹಕಾರಿ ಕೈಮಗ್ಗ ನೇಕಾರರ ಮಹಾಮಂಡಳಿ ನಿಯಮಿತ, ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್:** ವಿಶೇಷ ಕೈಮಗ್ಗ ಮೇಳ, ಸಂಸ್ಕೃತಿ–ಹತ್‌ಕರ್ಗ್–2023, ಕೈಮಗ್ಗ ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ: ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಉಪಸ್ಥಿತರು: ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್, ಕೈಮಗ್ಗ ಮತ್ತು ಜವಳಿ ಕಬ್ಬು ಹಾಗೂ ಸಕ್ಕರೆ ಅಭಿವೃದ್ಧಿ ಸಚಿವ ಶಿವಾನಂದ ಪಾಟೀಲ್, ಅಧ್ಯಕ್ಷತೆ : ಶಾಸಕ ಜಿ.ಟಿ.ದೇವೇಗೌಡ, ಸ್ಥಳ: ಜೆಎಸ್‌ಎಸ್ ಅರ್ಬನ್ ಹಾತ್, ರಿಂಗ್ ರೋಡ್, ಸಂಜೆ 4ಕ್ಕೆ.

■ **ಮೈಸೂರು ವೀರಶೈವ ಸಜ್ಜನ ಸಂಘ :** 48ನೇ ವರ್ಷದ ಸ್ವರ್ಣಗೌರಿ ಹಾಗೂ ವರಸಿದ್ಧಿ ವಿನಾಯಕ ಪೂಜಾ ಮಹೋತ್ಸವ, ಸಂಜೆ 4ಕ್ಕೆ ಕುಂಕುಮಾರ್ಚನೆ, ಸಮಜೆ 6.30ಕ್ಕೆ ವಿವಿಧ ಮನರಂಜನಾ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು, ಸ್ಥಳ:ಕಂಠಿ ಮಲ್ಲಣ್ಣನವರ ಕಲ್ಯಾಣ ಮಂದಿರ, ಕಬೀರ್ ರಸ್ತೆ.

■ **ಶ್ರೀ ಯೋಗಿ ನಾರಾಯಣ ಸಹಕಾರ ಸಂಘ :** ಸರ್ವ ಸದಸ್ಯರ ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಕೆ. ಸುಬ್ಬಯ್ಯ, ಸ್ಥಳ: ಜಾವಾ ರೋಟರಿ ವಿದ್ಯಾಸಂಸ್ಥೆ, ಎಫ್‌ಕೆ ಇರಾನಿ ಸಭಾಂಗಣ, ಇಂಜಿನಿಯರುಗಳ ಸಂಸ್ಥೆ ಎದುರು, ಜೆಎಲ್‌ಬಿ ರಸ್ತೆ, ಸಂಜೆ 5ಕ್ಕೆ.

■ **ಎಸ್‌ಪಿವಿಜಿಎಂಸಿ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ:** 62ನೇ ಪಾರಂಪರಿಕ ಸಂಗೀತೋತ್ಸವ, ಸಂಜೆ 5.30ರಿಂದ ಕಾಳಿದಾಸನ ರಘುವಂಶ, ವಾಚನ: ಡಾ.ಸನತ್‌ಕುಮಾರ್ ಸೋಮಯಾಜಿ, ವ್ಯಾಖ್ಯಾನ: ಶ್ರೀ ನಾರಾಯಣ ದೇಸಾಯಿ, ಸಂಜೆ 6.45ರಿಂದ ವಿದ್ವಾನ್ ಎನ್.ಆರ್.ನಮ್ಮಾರ ಕಣ್ಣನ್, ವಿದ್ವಾನ್ ಎನ್.ಆರ್.ಆನಂದ ಬ್ರಹ್ಮ ಅವರಿಂದ ನಾದಸ್ವರ–ವಯೋಲಿನ್ ಜುಗಲ್‌ಬಂದಿ, ವಿದ್ವಾನ್ ಮೈಸೂರು ಎಂ.ನಾಗರಾಜ್–ವಯೋಲಿನ್, ವಿದ್ವಾನ್ ಅನಂತ ಆರ್.ಕೃಷ್ಣ–ಮೃದಂಗ, ವಿದ್ವಾನ್ ಅಮೃತ್–ಖಂಜಿರ, ಸ್ಥಳ: 8ನೇ ಕ್ರಾಸ್, ವಿ.ವಿ.ಮೊಹಲ್ಲಾ.

■ **ಮೈಸೂರು ಧಾರ್ಮಿಕ ಪ್ರತಿಷ್ಠಾನ, ಮೈಸೂರು ಕಲಾ ಪ್ರತಿಷ್ಠಾನ:** ಮೈಸೂರು ಗಣೇಶ ಉತ್ಸವ–2023, ಸಂಜೆ 5.30ರಿಂದ ಶಂಕರ್ ಶಾನುಬೋಗ್ ಅವರಿಂದ ಸಂಗೀತ ಕಾರ್ಯಕ್ರಮ, ಸಂಜೆ 6.30 ರಿಂದ ವರ್ಚ್ಯುಯಲ್ ರಿಯಾಲಿಟಿ–ವಿನಯ್ ಹೆಗಡೆ, ಸಂಜೆ 7.30ರಿಂದ ಆಕ್ಸಿಜನ್ ನೃತ್ಯ ತಂಡ, ಸ್ಥಳ: ಮಾಧವ ಕೃಪ

■ **ಕಟ್ಟೆ ಬಳಗ :** 8ನೇ ವರ್ಷದ ಗಣೇಶೋತ್ಸವ, ಸಂಗೀತ ನಿರ್ದೇಶಕ ಎ.ಎಸ್. ಪ್ರಸನ್ನಕುಮಾರ್ ಮತ್ತು ತಂಡದವರಿಂದ ರಸಸಂಜೆ ಕಾರ್ಯಕ್ರಮ, ಸ್ಥಳ: ಕೃಷ್ಣಮೂರ್ತಿಪುರಂ, ಸಂಜೆ 6.30ಕ್ಕೆ.

■ **ಶ್ರೀ ಶ್ರೀ ಶ್ರೀ 101 ಗಣಪತಿ ದೇವಸ್ಥಾನ ಟ್ರಸ್ಟ್ :** ಶ್ರೀ ಗೌರಿ–ಗಣೇಶ ಹಬ್ಬ ಮತ್ತು ಶ್ರೀ 101 ಗಣಪತಿ ಪ್ರತಿಷ್ಠಾನ, ಶ್ರೀಮತಿ ವಿದುಷಿ ಶ್ರೀ ವಿದ್ಯಾರಾವ್ ಅವರಿಂದ ಭರತನಾಟ್ಯ, ಸ್ಥಳ:ದೇವಸ್ಥಾನ, ಕೆ.ಆರ್.ಮೊಹಲ್ಲಾ, ಸಂಜೆ 7ಕ್ಕೆ.

■ **ಶ್ರೀ ಚಾಮುಂಡೇಶ್ವರಿ ಯುವಕರ ಬಳಗ :** ರೆಬಲ್‌ಸ್ಟಾರ್ ಅಂಬರೀಶ್ ಅವರ ಪುತ್ರ ರೆಬಲ್‌ಸ್ಟಾರ್ ಅಭಿಷೇಕ್ ಅಂಬರೀಶ್ ಅವರಿಗೆ ಅಭಿನಂದನಾ ಸಮಾರಂಭ ಮತ್ತು ಸಂಗೀತ ಸಂಜೆ ಕಾರ್ಯಕ್ರಮ, ಸ್ಥಳ: ದೇವರಾಜ ಮಾರುಕಟ್ಟೆ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಬಣ್ಣದ ಬಾನಾಡಿಗಳು–ಬಾನುಲಿ ಸರಣಿ, ರಚನೆ– ಡಾ. ಎಸ್.ವಿ.ನರಸಿಂಹನ್, ಪ್ರಸ್ತುತಿ–ಜಿ.ಶಾಂತಕುಮಾರ್, 6.40 ಪದ ಸಂಸ್ಕೃತಿ–ಪರಮೇಶ್ವರ ವಿ. ಭಟ್, 7.15 ಭಾವಗೀತೆಗಳು–ಕಸ್ತೂರಿ ಶಂಕರ್, 9.05 ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 10.00 ಡಾ.ಸಿ.ಎ. ಶ್ರೀಧರ್–ವೇಣುವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರ ನಾಮ, 12.45 ಕಾದಂಬರಿ ವಿಹಾರ–ನಾ ಕಸ್ತೂರಿ ಅವರ ರಂಗನಾಯಕಿ ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್ ಎಸ್.ಎಸ್., 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆ–ಎನ್.ಹೇಮಾ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಎಂ.ಆರ್. ಸುಧಾ–ಹಾಡುಗಾರಿಕೆ, 4.00 ವೃತ್ತಿ ಮಾರ್ಗದರ್ಶನ–ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾಲಯದಲ್ಲಿ ಲಭ್ಯವಿರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಪ್ರೊ.ಶರಣಪ್ಪ ವೈಜನಾಥ ಹಲಸೆ ಅವರೊಂದಿಗೆ ಮಾತುಕತೆಯಲ್ಲಿ ಭಾಗವಹಿಸುವವರು ದಿವಾಕರ ಹೆಗಡೆ, 6.50 ಕೃಷಿರಂಗ–ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಬಿ.ರಾಮಲಿಂಗಯ್ಯ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಎನ್. ಕೇಶವಮೂರ್ತಿ, 8.00 ಹಿರಿಯರಾದ ಸಿ.ಎನ್. ಶ್ಯಾನ್‌ಭೋಗ್ ಹಾಗೂ ಅವರ ಮಡದಿ ಜಯಂತಿ ಎನ್.ಶಾನ್‌ಭೋಗ್ ಅವರ ಜೀವನಾನುಭವ ಕುರಿತು ಆತ್ಮೀಯ ಮಾತುಕತೆ ನಡೆಸಿಕೊಡು ವವರು ದಿವಾಕರ ಹೆಗಡೆ, 9.30 ವಾದ್ಯವೃಂದ–ನಿಲಯದ ಕಲಾವಿದರಿಂದ, 10.30 ಸವಿನೆನಪು

ಸಚಿವರು ಆಡಳಿತದಲ್ಲಿ 'ಸಂವಿಧಾನ ಧರ್ಮ' ಪಾಲಿಸಬೇಕು

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದಿಂದ ಜೀವಮಾನ ಸಾಧನೆ ಪ್ರಶಸ್ತಿ ಪುರಸ್ಕೃತ "ಮೈಸೂರು ಮಿತ್ರ" ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿಯವರು ಅಭಿಮತ

■ ಎಲ್ಲರೂ ಸಂವಿಧಾನದ ಆಶಯಗಳಿಗೆ ಬದ್ಧರಾಗಿರಬೇಕು ■ ಮೂಲತಃ ಪತ್ರಕರ್ತ ಎನಿಸಿಕೊಂಡವನಿಗೆ ಸೌಜನ್ಯವಿರಬೇಕು ■ ಪ್ರಮುಖವಾಗಿ ಆಯಾ ವಿಚಾರಗಳ ಜ್ಞಾನ ಅತೀ ಮುಖ್ಯ ■ ಮುಂದೆ ಕೃತಕ ಬುದ್ಧಿಮತ್ತೆಯಿಂದ ಭಾರಿ ಪರಿಣಾಮ

ಮೈಸೂರು, ಸೆ.21(ಬಿಎಲ್‌ಯು)– ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಚಿವರು ಆಡಳಿತದಲ್ಲಿ 'ಸಂವಿಧಾನ ಧರ್ಮ' ಪಾಲಿಸಬೇಕು ಎಂದು 'ಸ್ಟಾರ್ ಆಫ್ ಮೈಸೂರ್' ಮತ್ತು 'ಮೈಸೂರು ಮಿತ್ರ' ಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ (ಕೆಬಿಜಿ)ಯವರು ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ತ್ಯಾಗರಾಜ ರಸ್ತೆಯ ಪತ್ರಕರ್ತರ ಭವನದಲ್ಲಿ ಇಂದು ಮೈಸೂರು ಜಿಲ್ಲಾ ಪತ್ರಕರ್ತರ ಸಂಘದಿಂದ ಪತ್ರಿಕೋದ್ಯಮ ಕ್ಷೇತ್ರದ ಜೀವಮಾನ ಸಾಧನೆ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅವರು, ಈ ಮೊದಲು ನಮ್ಮ ದೇಶದಲ್ಲಿ ರಾಜಪ್ರಭುತ್ವ ಚಾಲ್ತಿಯಲ್ಲಿತ್ತು. ಆ ವೇಳೆ ರಾಜರು ಅವರವರ ಮನೋಧರ್ಮದಂತೆ ರಾಜಧರ್ಮ ಪಾಲನೆ ಮಾಡುತ್ತಿದ್ದರು. ಆದರೆ ನಾವು ಈಗ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿದ್ದೇವೆ. ಈಗ ಸಂವಿಧಾನವೇ ಶ್ರೇಷ್ಠವಾಗಿದ್ದು, ಹಾಗಾಗಿ 'ಸಂವಿಧಾನ ಧರ್ಮ' ಪಾಲಿಸಬೇಕಿದೆ ಎಂದು ಕೆಬಿಜಿ ಕಿವಿಮಾತು ಹೇಳಿದರು.

ಗುಜರಾತ್ ಪ್ರಕರಣದಲ್ಲಿ, ಅಂದಿನ ಪ್ರಧಾನಮಂತ್ರಿ ಅಟಲ್ ಬಿಹಾರಿ ವಾಜಪೇಯಿ ಅವರು ಅಲ್ಲಿನ ಮುಖ್ಯಮಂತ್ರಿ ನರೇಂದ್ರ ಮೋದಿ ಅವರಿಗೆ ರಾಜಧರ್ಮ ಪಾಲಿಸುವಂತೆ ಕಿವಿಮಾತು ಹೇಳಿದ್ದರು. ಆದರೆ ಇದು ಸರಿಯಲ್ಲ ಕಾರಣ ರಾಜಧರ್ಮದಲ್ಲಿ ರಾಜರು ಅವರವರಿಗೆ ಸರಿ ಎನಿಸಿದ ಧರ್ಮವನ್ನು ಪಾಲಿಸುತ್ತಾರೆ. ಅದಕ್ಕೆ ಉದಾಹರಣೆ: ರೋಮ್ ಸಾಮ್ರಾಜ್ಯದಲ್ಲಿ ಮಾರ್ಕಸ್ ಅರಿಲಸ್ ಜನಪರ ರಾಜನಾಗಿದ್ದ. ಅವನು ಜನರ ಹಿತ ಸಾಧನೆಯೇ ತನ್ನ ಧರ್ಮವೆಂದು ಪರಿಗಣಿಸಿದ್ದ.

ಹಾಗೆಯೇ ನಮ್ಮ ರಾಮಾಯಣ ಮಹಾಕಾವ್ಯದಲ್ಲಿ ಬರುವ ಶ್ರೀರಾಮಚಂದ್ರ, ಅಪಹೃತ ತನ್ನ ಪತ್ನಿ ಸೀತಾಮಾತೆಯನ್ನು ಯುದ್ಧ ಮಾಡಿ ವಾಪಸ್ಸು ಕರೆತಂದ ನಂತರ, ತನ್ನ ಸಾಮ್ರಾಜ್ಯದ ಪ್ರಜೆಯೊಬ್ಬ ಆಡಿದ ಮಾತಿಗೆ ಮನ್ನಣೆ ನೀಡಿ ಸೀತೆಯನ್ನು ಅಗ್ನಿಪರೀಕ್ಷೆಗೀಡು ಮಾಡಿದ. ರಾಮನೂ ಪ್ರಜಾಭಿಪ್ರಾಯ ಪಾಲನೆ ತನ್ನ ಧರ್ಮ ಎಂದು ಪರಿಗಣಿಸಿದ್ದ. ಹಾಗಾಗಿ ಇವೆರಡೂ ಉದಾಹರಣೆಗಳು ರಾಜರ ಜನಪರತೆ ಧರ್ಮಕ್ಕೆ ಸಾಕ್ಷಿ.

ಆದರೆ, ಯುದ್ಧ ಸಾರಿ ಬಂದ ಶತ್ರುವನ್ನು ಪೃಥ್ವಿರಾಜ ಚೌಹ್ವಾಣ್ ಸಾಕಷ್ಟು ಬಾರಿ ಸೋಲಿಸಿ, ಆತನಿಗೆ ಕ್ಷಮೆ ನೀಡಿ ಕಳುಹಿಸುತ್ತಾ ಬಂದಿದ್ದನ್ನು ಉಲ್ಲೇಖಿಸಿದ ಕೆ.ಬಿ.ಗಣಪತಿ ಅವರು, ಪೃಥ್ವಿರಾಜ ಚೌಹ್ವಾಣ್, ತನ್ನ 'ಕ್ಷಮಾ ಧರ್ಮ' ಪಾಲಿಸುತ್ತಾ ಬಂದಿದ್ದ. ಆದರೆ ಮತ್ತೊಮ್ಮೆ ಅಪಾರ ಶಸ್ತ್ರಾಸ್ತ್ರ, ಸೇನೆಯೊಂದಿಗೆ ದಂಡೆತ್ತಿ ಬಂದ ಆ ಶತ್ರು, ಪೃಥ್ವಿರಾಜ ಚೌಹ್ವಾಣ್‌ನನ್ನು, ಅವನ ದೇಶದ ಸೇನಾಧಿಪತಿ ನೆರವಿನಿಂದಲೇ ಸೋಲಿಸಿ, ಸೆರೆ ಹಿಡಿದು, ರಾಜ ಪೃಥ್ವಿರಾಜ ಚೌಹ್ವಾಣ್‌ರನ್ನು ಸೆರೆಮನೆಯಲ್ಲಿಟ್ಟು ಕೊಲೆಗೈದ. ಸೆರೆಸಿಕ್ಕ ಶತ್ರುವನ್ನು ಸಂಹರಿಸುವುದು ಆ ವಿಜಯಿ ಶತ್ರುವಿನ ಧರ್ಮ ಆಗಿತ್ತು.

ಹೀಗೆ ರಾಜರು ತಮ್ಮ ತಮ್ಮ ಮನೋಧೋರಣೆಗೆ ಅನುಗುಣವಾಗಿ ಕೈಗೊಂಡತಹ ನಿರ್ಧಾರಗಳನ್ನು ಆದರ್ಶವಾಗಿಸುವುದು ಸರಿಯಲ್ಲ. ಹಾಗಾಗಿ ರಾಜ ಧರ್ಮ ಈಗ ಊರ್ಜಿತವಲ್ಲ. ಈಗ ಅಸ್ತಿತ್ವದಲ್ಲಿರುವ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಂವಿಧಾನವೇ ಶ್ರೇಷ್ಠ. ಸಂವಿಧಾನವು ಪ್ರತಿಯೊಬ್ಬ ನಾಗರಿಕನಿಗೆ ಸಮಾನತೆ, ಸಾಮಾಜಿಕ ನ್ಯಾಯ ಹಾಗೂ ಸ್ವಾತಂತ್ರ್ಯ, ಮೂಲಭೂತ ಹಕ್ಕುಗಳನ್ನು ಖಾತ್ರಿಪಡಿಸುತ್ತದೆ. ಈ ಕಾರಣದಿಂದ ಸಂವಿಧಾನವೇ ಧರ್ಮವಾಗಿದ್ದು, ಆಳುವಂತಹ ಸರ್ಕಾರಗಳು ಈ 'ಸಂವಿಧಾನ ಧರ್ಮ' ಪಾಲನೆ ಮಾಡಬೇಕಾಗುತ್ತದೆ ಎಂದು ಕೆಬಿಜಿ ಅಭಿಪ್ರಾಯಪಟ್ಟರು.

ಸಚಿವರು ಮೊದಲು ಅನುಸರಿಸಬೇಕು: ಈಗಿನ ಸರ್ಕಾರವು ಎಲ್ಲರೂ ಸಂವಿಧಾನದ ಪೀಠಿಕೆಯನ್ನು ವಾಚನ ಮಾಡಬೇಕು ಎಂದು ಆದೇಶಿಸಿದೆ. ಸಚಿವರು, ಸಂವಿಧಾನ ಧರ್ಮದ ಬಗ್ಗೆ ಸುಮ್ಮನೆ ಹೇಳುವುದಲ್ಲ. ಆ ಧರ್ಮವನ್ನು ಆಡಳಿತದಲ್ಲಿ ತಾವೂ ಚಾಚೂ ತಪ್ಪದೆ ಅನುಸರಿಸಬೇಕು. ಅರ್ಥಾತ್ ಅದರಲ್ಲಿರುವ ತತ್ವಗಳಂತೆ ನಡೆಯಬೇಕು ಎಂದು ಕೆ.ಬಿ.ಗಣಪತಿ ಅವರು ಸಲಹೆ ನೀಡಿದರು.

ಪತ್ರಕರ್ತರಿಗೆ ಕಿವಿಮಾತು: ಸಂವಿಧಾನದ ಹೆಸರಿನಲ್ಲಿ ಅನ್ಯಾಯ ಹಾಗೂ ತಪ್ಪುಗಳನ್ನು ಮಾಡಬಾರದು. ನಿರ್ಣಯ ತೆಗೆದುಕೊಳ್ಳುವಾಗ ತಾರತಮ್ಯ ಮಾಡಬಾರದು. ಉದಾಹರಣೆಗೆ, ಜಾಹೀರಾತು ನೀಡುವಲ್ಲಿ. ಸಂವಿಧಾನದ ತತ್ವಗಳನ್ನು ಎತ್ತಿ ಹಿಡಿಯುವಲ್ಲಿ, ಸಮಾಜದಲ್ಲಿ ಹಕ್ಕುಗಳ ಮಹತ್ವ ತಿಳಿಸುವಲ್ಲಿ ಹಾಗೂ ತಪ್ಪುಗಳನ್ನು ಗುರುತಿಸುವಲ್ಲಿ ಪತ್ರಕರ್ತರು ಪ್ರಮುಖ ಪಾತ್ರ ವಹಿಸಬೇಕು. ಯಾವುದೇ ಕಾರಣಕ್ಕೂ ರಾಜೀ ಮಾಡಿಕೊಳ್ಳಬಾರದು ಎಂದು ಕಿವಿಮಾತು ಹೇಳಿದರು.

ಪತ್ರಕರ್ತ ತಾನು ಸಾಗುವ ರಸ್ತೆಯಲ್ಲಿ ಕವಲು ದಾರಿ ಸಿಕ್ಕಾಗ ಕ್ಲಿಷ್ಟಕರವಾದ ಹಾದಿಯನ್ನೇ ಆಯ್ಕೆ ಮಾಡಿಕೊಳ್ಳಬೇಕು. ಸವಾಲುಗಳನ್ನು ಸಮರ್ಥವಾಗಿ ಎದುರಿಸುವ ಮೂಲಕ ತನ್ನದೇ ಆದ ಹೊಸ ದಾರಿಯನ್ನು ಹುಟ್ಟು ಹಾಕಬೇಕು. ಈ ಮೂಲಕ ಪತ್ರಕರ್ತ ತನ್ನದೇ ಛಾಪನ್ನು ಮೂಡಿಸಬೇಕು ಎಂದು ಅವರು ಹೇಳಿದರು.

ಸೌಜನ್ಯ ಬಹಳ ಮುಖ್ಯ: ಪತ್ರಕರ್ತನಿಗೆ ಸೌಜನ್ಯ ಬಹಳ ಮುಖ್ಯ. ಎಲ್ಲಿಯೂ ಧಿಮಾಕು ತೋರಿಸಬಾರದು ಎಂದು ಕಿವಿಮಾತು ಹೇಳಿದ ಕೆ.ಬಿ.ಗಣಪತಿ ಅವರು, ಪತ್ರಿಕಾಗೋಷ್ಠಿ ಸೇರಿದಂತೆ ತಾನು ವರದಿ ಮಾಡುವ ಯಾವುದೇ ಸ್ಥಳಕ್ಕೆ ಹೋಗುವ ಮೊದಲು ಆ ವಿಚಾರದ ಬಗ್ಗೆ ಜ್ಞಾನ ಹೊಂದಿರಬೇಕು, ಸೂಕ್ತ ತಯಾರಿ ಮಾಡಿಕೊಂಡಿರಬೇಕು. ಜ್ಞಾನವೇ ಶಕ್ತಿ ಎಂಬ ಅರ್ಥಕ್ಕೆ ತಕ್ಕಂತೆ ತಮ್ಮತನವನ್ನು ಸಾಬೀತು ಮಾಡಬೇಕು.

ಪತ್ರಕರ್ತರಲ್ಲಿ ಒಗ್ಗಟ್ಟಿರಬೇಕು: ಕೆಲವು ವರ್ಷಗಳ ಹಿಂದೆ ಸರ್ಕಾರ ಮೈಸೂರಿನಲ್ಲಿ, ಒಂದು ಪತ್ರಿಕೆಯನ್ನು ಹೊರತುಪಡಿಸಿ ಬೇರೆಲ್ಲಾ ಪತ್ರಿಕೆಗಳಿಗೆ ಜಾಹೀರಾತು ನೀಡುವುದನ್ನು ನಿಲ್ಲಿಸಿತ್ತು ಎಂದು ಹಿಂದಿನ ಘಟನೆಯ ಮೆಲುಕು ಹಾಕಿದ ಕೆ.ಬಿ.ಗಣಪತಿ ಅವರು, ಅಂದು ಮೈಸೂರಿನ ಎಲ್ಲಾ ಪತ್ರಕರ್ತರು ಒಗ್ಗಟ್ಟಾಗಿ ಮುಖ್ಯಮಂತ್ರಿಗಳ ಬಳಿ ನಿಯೋಗ ತೆರಳಿ ಜಾಹೀರಾತು ಪಡೆಯುವಲ್ಲಿ ಯಶಸ್ವಿಯಾದೆವು. ಈ ಹಿನ್ನೆಲೆಯಲ್ಲಿ ಪತ್ರಕರ್ತರಲ್ಲಿ ಒಗ್ಗಟ್ಟು ಇರಬೇಕು ಎಂದು ಪತ್ರಕರ್ತರ ಒಗ್ಗಟ್ಟಿನ ಮಹತ್ವವನ್ನು ಒತ್ತಿ ಹೇಳಿದರು. ಮೈಸೂರಿನ ಹಿಂದಿನ ಪತ್ರಕರ್ತರ ಒಗ್ಗಟ್ಟಿನ ಫಲವಾಗಿ ಇಂದು ಪತ್ರಕರ್ತರ ಭವನ ತಲೆ ಎತ್ತಿ ನಿಂತಿದೆ ಎಂದು ಹೇಳಿದರು.

ಪತ್ರಿಕೆ ಯಶಸ್ಸಿನ ಸೂತ್ರ: ಇದೇ ವೇಳೆ ಖುಶ್ವಂತ್ ಸಿಂಗ್ ಅವರ ಮಾತನ್ನು ಉಲ್ಲೇಖಿಸಿದ ಕೆ.ಬಿ.ಗಣಪತಿ ಅವರು, ಪತ್ರಿಕೆ ಓದುಗರಿಗೆ ಸುದ್ದಿಗಳನ್ನು ಕೊಡಬೇಕು. ಜೊತೆಗೆ ಅವರಿಗೆ ಶಿಕ್ಷಣ ಹಾಗೂ ಮನೋರಂಜನೆಯನ್ನು ನೀಡಬೇಕು. ಈ ಮೂರು ಅಂಶಗಳಿದ್ದರೆ ಪತ್ರಿಕೆ ಯಶಸ್ವಿಯಾಗುತ್ತದೆ ಎಂದು ತಿಳಿಸಿದರು.

ವಿದ್ಯುನ್ಮಾನ ಮಾಧ್ಯಮಗಳ ಪ್ರಭಾವದಿಂದ ಓದುಗರ ಸಂಖ್ಯೆ ಸ್ವಲ್ಪ ಮಟ್ಟಿಗೆ ಕಡಿಮೆಯಾಗಿದೆ. ತಂತ್ರಜ್ಞಾನದ ಪ್ರಗತಿಯಿಂದ ದೇಶದಲ್ಲಿ ಇಂತಹ ಬೆಳವಣಿಗೆ ಸಹಜ. ಮುಂದಿನ ದಿನದಲ್ಲಿ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ (ಕೃತಕ ಬುದ್ಧಿಮತ್ತೆ)ನಿಂದ ಮುದ್ರಣ ಮಾಧ್ಯಮಕ್ಕೆ ತೊಂದರೆ ಆಗಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

ತಮ್ಮ 46 ವರ್ಷಗಳ ಪತ್ರಿಕೋದ್ಯಮ ಸೇವೆಯಲ್ಲಿ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಿಬ್ಬಂದಿಯ ಸಹಕಾರವನ್ನು ಕೆಬಿಜಿ ಸ್ಮರಿಸಿದರು.

ಸುಮಾರು ಒಂದು ಗಂಟೆ ಕಾಲ ತಮ್ಮ ಪತ್ರಿಕೋದ್ಯಮದ ಅನುಭವಗಳನ್ನು ಸವಿಸ್ತಾರವಾಗಿ ಹಂಚಿಕೊಂಡ ಕೆ.ಬಿ.ಗಣಪತಿ ಅವರು, ನಂತರ ನಡೆದ ಸಂವಾದದಲ್ಲಿ ಯುವ ಪತ್ರಕರ್ತರ ಕೆಲವು ಪ್ರಶ್ನೆಗಳಿಗೆ ಉತ್ತರಿಸಿದರು. ಮೈಸೂರು ನಗರದಲ್ಲಿ ಆಗಸ್ಟ್ 27 ರಂದು ನಡೆದ ಪತ್ರಿಕಾ ದಿನಾಚರಣೆ ವೇಳೆ ಪ್ರಶಸ್ತಿ ಸ್ವೀಕರಿಸಲು ಸಾಧ್ಯವಾಗದ ಕಾರಣ ಕೆ.ಬಿ.ಗಣಪತಿ ಅವರಿಗೆ ಇಂದು ನಡೆದ ಸಮಾರಂಭದಲ್ಲಿ ಮೈಸೂರು ಪೇಟ ತೊಡಿಸಿ, ಸ್ಮರಣಿಕೆ ನೀಡಿ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಹೋಟೆಲ್ ಮಾಲೀಕರ ಸಂಘ ಹಾಗೂ ಪತ್ರಿಕಾ ವಿತರಕರ ಸಂಘದವರೂ ಕೆ.ಬಿ.ಗಣಪತಿ ಅವರನ್ನು ಅಭಿನಂದಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಸುಬ್ರಹ್ಮಣ್ಯ, ಮಾಜಿ ಅಧ್ಯಕ್ಷರಾದ ಅಂಶಿ ಪ್ರಸನ್ನಕುಮಾರ್, ಸಿ.ಕೆ.ಮಹೇಂದ್ರ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ರವಿಶಾಸ್ತ್ರಿ ಕನ್ನಡ ಸಾಹಿತ್ಯ ಪರಿಷತ್‌ನ ರಾಜಣ್ಣ, ಚಂದ್ರಶೇಖರ್ ಇತರರು ಉಪಸ್ಥಿತರಿದ್ದರು.



ಮೈಸೂರಿನ ಪತ್ರಕರ್ತರ ಭವನದಲ್ಲಿ ಗುರುವಾರ ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ "ಮೈಸೂರು ಮಿತ್ರ" ಹಾಗೂ "ಸ್ಟಾರ್ ಆಫ್ ಮೈಸೂರ್" ಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ ಅವರಿಗೆ ಪತ್ರಿಕೋದ್ಯಮ ಕ್ಷೇತ್ರದಲ್ಲಿ ಜೀವಮಾನದ ಸಾಧನೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸಂಘದ ಮಾಜಿ ಅಧ್ಯಕ್ಷರಾದ ಅಂಶಿ ಪ್ರಸನ್ನ ಕುಮಾರ್, ಸಿ.ಕೆ.ಮಹೇಂದ್ರ, ಹಾಲಿ ಅಧ್ಯಕ್ಷ ಎಸ್.ಟಿ.ರವಿಕುಮಾರ್, ವಾರ್ತಾ ಮತ್ತು ಪ್ರಸಾರ ಇಲಾಖೆಯ ಸಹಾಯಕ ನಿರ್ದೇಶಕ ಕೆ.ಟಿ.ಹರೀಶ್ ಕುಮಾರ್, ಸಂಘದ ಉಪಾಧ್ಯಕ್ಷ ಅನುರಾಗ್ ಬಸವರಾಜ್, ಕಾರ್ಯದರ್ಶಿ ರಂಗಸ್ವಾಮಿ, ಪ್ರಧಾನ ಕಾರ್ಯದರ್ಶಿ ಎಂ.ಸುಬ್ರಹ್ಮಣ್ಯ, ಕಾರ್ಯಕಾರಿ ಸಮಿತಿ ಸದಸ್ಯ ಕೃಷ್ಣೋಜಿರಾವ್ ಅವರನ್ನು ಚಿತ್ರದಲ್ಲಿ ಕಾಣಬಹುದು.

'ಮೈಸೂರು ಮಿತ್ರ', 'ಸ್ಟಾರ್ ಆಫ್ ಮೈಸೂರ್' ಕರ್ನಾಟಕಕ್ಕೆ ಮಾದರಿ

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಅಭಿಪ್ರಾಯ

ಮೈಸೂರು, ಸೆ.21(ಬಿಎಲ್‌ಯು)– ಸಣ್ಣ ಪತ್ರಿಕೆಗಳ ತವರೂರಾದ ಮೈಸೂರಿನಲ್ಲಿ ಕೆ.ಬಿ.ಗಣಪತಿ ಅವರು ಕರ್ನಾಟಕಕ್ಕೆ ಮಾದರಿಯಾಗಿ ಪ್ರಾದೇಶಿಕ ಪತ್ರಿಕೆಗಳಾದ 'ಸ್ಟಾರ್ ಆಫ್ ಮೈಸೂರ್' ಹಾಗೂ 'ಮೈಸೂರು ಮಿತ್ರ' ಪತ್ರಿಕೆ ನಡೆಸುತ್ತಿದ್ದಾರೆ ಎಂದು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಪ್ರಶಂಸೆ ವ್ಯಕ್ತಪಡಿಸಿದರು.

ಮೈಸೂರಿನ ಪತ್ರಕರ್ತರ ಭವನದಲ್ಲಿ ಇಂದು ಜಿಲ್ಲಾ ಪತ್ರಕರ್ತರ ಸಂಘದಿಂದ ಕೆ.ಬಿ.ಗಣಪತಿ ಅವರಿಗೆ ಜೀವಮಾನದ ಸಾಧನೆ ಪ್ರಶಸ್ತಿ ನೀಡಿ ಗೌರವಿಸಿದ ವೇಳೆ ಮಾತನಾಡಿದ ಅವರು, ಕೆ.ಬಿ.ಗಣಪತಿ ಅವರನ್ನು ಮಾದರಿಯಾಗಿಟ್ಟುಕೊಂಡು ಹೋದರೆ ಪತ್ರಿಕೋದ್ಯಮದಲ್ಲಿ ಬೆಳವಣಿಗೆ ಸಾಧಿಸಬಹುದು ಎಂದು ಅಭಿಪ್ರಾಯಪಟ್ಟರು.

ಕೆ.ಬಿ.ಗಣಪತಿ ಅವರು ಯುವ ಪತ್ರಕರ್ತರಿಗೆ ಮಾದರಿಯಾಗಿದ್ದಾರೆ. 'ಸ್ಟಾರ್ ಆಫ್ ಮೈಸೂರ್' ಹಾಗೂ 'ಮೈಸೂರು ಮಿತ್ರ' ಪತ್ರಿಕೆಯಲ್ಲಿ ಬರುವ ಅವರ ಅಂಕಣ ಓದುವ ಬಹಳಷ್ಟು ಅಭಿಮಾನಿಗಳಿದ್ದಾರೆ. ಟಿಜೆಎಸ್ ಜಾರ್ಜ್ ಬಿಟ್ಟರೆ ಸರಳ ಹಾಗೂ ಮನಮುಟ್ಟುವಂತೆ ಕೆ.ಬಿ.ಗಣಪತಿ ಅವರು ಬರೆಯುತ್ತಾರೆ ಎಂದು ಅಂಶಿ ಅವರು ಹೇಳಿದರು.

ಮೈಸೂರಿನ ಹಿರಿಯ ಪತ್ರಕರ್ತರಾದ ಕೃಷ್ಣವಟ್ಟಂ, ರಾಜಶೇಖರಕೋಟಿ ಹಾಗೂ ಕೆ.ಬಿ.ಗಣಪತಿ ಅವರು ಆದರ್ಶರಾಗಿದ್ದಾರೆ. ಅವರ ಪರಿಶ್ರಮದ ಫಲವಾಗಿ ಇಂದು ಮೈಸೂರು ಪತ್ರಕರ್ತರ ಭವನ ನಿರ್ಮಾಣವಾಗಿದೆ ಎಂದು ತಿಳಿಸಿದರು.

ಕೆ.ಬಿ.ಗಣಪತಿ ಅವರಿಗೆ ಪತ್ರಿಕೋದ್ಯಮದ ಬಗ್ಗೆ ಅತೀವ ಆಸಕ್ತಿ ಇದೆ. ಎಲ್ಲೇ ಹೋದರೂ ತಮ್ಮಲ್ಲಿರುವ ಸಣ್ಣ ನೋಟ್ ಪುಸ್ತಕದಲ್ಲಿ ಕೆಲವು ಅಂಶಗಳನ್ನು ಗುರುತು ಹಾಕಿಕೊಂಡು ಅದನ್ನು ಪತ್ರಿಕೆಯಲ್ಲಿ ಅಂಕಣದ ರೂಪದಲ್ಲಿ ಬರೆಯುತ್ತಾರೆ ಎಂದು ಹೇಳಿದರು.

ಅವರು ಪತ್ರಕರ್ತರು ಮಾತ್ರವಲ್ಲದೆ ಹಲವು ಕಾದಂಬರಿ ಹಾಗೂ ಪುಸ್ತಕಗಳನ್ನು ಕೂಡ ಬರೆದಿದ್ದಾರೆ. ಅವರ 'ಆದರ್ಶವಾದಿ' ಕಾದಂಬರಿ ಗಮನಾರ್ಹವಾದುದ್ದು. ಕೆ.ಬಿ. ಗಣಪತಿ ಅವರನ್ನು ಮಾದರಿಯಾಗಿಟ್ಟುಕೊಂಡರೆ ಈಗಿನ ಯುವ ಪತ್ರಕರ್ತರು ಪತ್ರಿಕೋದ್ಯಮದಲ್ಲಿ ಬೆಳವಣಿಗೆ ಸಾಧಿಸಬಹುದು ಎಂದು ಅಂಶಿ ಪ್ರಸನ್ನಕುಮಾರ್ ಅಭಿಪ್ರಾಯಪಟ್ಟರು.

ಇದೇ ವೇಳೆ ಮಾತನಾಡಿದ ಹಿರಿಯ ಪತ್ರಕರ್ತ ಸಿ.ಕೆ.ಮಹೇಂದ್ರ, ಕೆ.ಬಿ.ಗಣಪತಿ ಅವರ ಪತ್ರಿಕೋದ್ಯಮದ ಸಾಧನೆ ಗುರುತಿಸಿ ಅವರಿಗೆ ಸನ್ಮಾನ ಮಾಡುವ ಮೂಲಕ ಜಿಲ್ಲಾ ಪತ್ರಕರ್ತರ ಸಂಘ ತನ್ನನ್ನು ತಾನೇ ಗೌರವಿಸಿಕೊಂಡಿದೆ ಎಂದರು. ಕೆ.ಬಿ.ಗಣಪತಿ ಅವರ ಬರವಣಿಗೆ ಆಕರ್ಷಕವಾಗಿದ್ದು, ಅದರಲ್ಲಿ ನೈಜತೆ ಇರುತ್ತದೆ ಎಂದು ಹೇಳಿದರು.

'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಯಲ್ಲಿ ಕೆ.ಬಿ.ಗಣಪತಿ ಅವರು ತಮ್ಮ ಬರವಣಿಗೆ ಮೂಲಕ ಸಮಾಜದ ಬಗ್ಗೆ ತಮಗಿರುವ ಕಾಳಜಿಯನ್ನು ಪ್ರದರ್ಶಿಸಿದ್ದಾರೆ ಎಂದು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್ ತಿಳಿಸಿದರು.

ರೈಲು ಅಪಘಾತಗಳ ಪರಿಹಾರ ಮೊತ್ತ 10 ಪಟ್ಟು ಹೆಚ್ಚಳ

ನವದೆಹಲಿ: ರೈಲು ಅಪಘಾತಗಳಲ್ಲಿ ಯಾರಾದರೂ ಮೃತಪಟ್ಟರೆ ಅಥವಾ ಗಾಯಗೊಂಡರೆ ನೀಡುವ ಪರಿಹಾರದ ಮೊತ್ತವನ್ನು ರೈಲ್ವೆ ಮಂಡಳಿ 10 ಪಟ್ಟು ಹೆಚ್ಚಿಸಿದೆ.

ರೈಲು ಅಪಘಾತಗಳ ಪರಿಹಾರವನ್ನು 2012 ಮತ್ತು 2013ರಲ್ಲಿ ಕೊನೆಯದಾಗಿ ಪರಿಷ್ಕರಿಸಲಾಗಿತ್ತು. ರೈಲು ಅಪಘಾತಗಳು ಮತ್ತು ಅಹಿತಕರ ಘಟನೆಗಳಲ್ಲಿ ಮೃತಪಟ್ಟವರ ಕುಟುಂಬಕ್ಕೆ ಮತ್ತು ಗಾಯಗೊಂಡ ಪ್ರಯಾಣಿಕರಿಗೆ ನೀಡುತ್ತಿದ್ದ ಪರಿಹಾರದ ಮೊತ್ತವನ್ನು ಪರಿಷ್ಕರಿಸಲು ನಿರ್ಧರಿಸಲಾಗಿದೆ ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಮಾನವಸಹಿತ ಲೆವೆಲ್ ಕ್ರಾಸಿಂಗ್ ಗೇಟ್ ಅಪಘಾತದಲ್ಲಿ ರೈಲ್ವೆಯ ಪ್ರಾಥಮಿಕ ಹೊಣೆಗಾರಿಕೆಯಿಂದಾಗಿ ಅಪಘಾತಕ್ಕೀಡಾದ ರಸ್ತೆ ಬಳಕೆದಾರರಿಗೆ ನೀಡುವ ಪರಿಹಾರವನ್ನು ಸಹ ಹೆಚ್ಚಿಸಲಾಗಿದೆ ಮತ್ತು ಇದು ಸೆಪ್ಟೆಂಬರ್ 18ರಿಂದ ಅನ್ವಯಿಸುತ್ತದೆ ಎಂದು ಸುತ್ತೋಲೆ ತಿಳಿಸಿದೆ.

ಸುತ್ತೋಲೆ ಪ್ರಕಾರ, ರೈಲು ಮತ್ತು ಮಾನವಸಹಿತ ಲೆವೆಲ್ ಕ್ರಾಸಿಂಗ್ ಅಪಘಾತಗಳಲ್ಲಿ ಮೃತ ಪ್ರಯಾಣಿಕರ ಸಂಬಂಧಿಕರಿಗೆ ನೀಡುತ್ತಿದ್ದ ಪರಿಹಾರದ ಮೊತ್ತವನ್ನು 5 ಲಕ್ಷ ರೂ.ಗೆ ಮತ್ತು ತೀವ್ರವಾಗಿ ಗಾಯಗೊಂಡವರಿಗೆ ನೀಡುತ್ತಿದ್ದ ಪರಿಹಾರವನ್ನು 2.5 ಲಕ್ಷ ರೂ.ಗೆ ಹೆಚ್ಚಿಸಲಾಗಿದೆ. ಸಣ್ಣ ಪುಟ್ಟ ಗಾಯಗಳಾಗಿರುವ ಪ್ರಯಾಣಿಕರಿಗೆ 50,000 ರೂ. ನೀಡಲಾಗುವುದು.

ಈ ಹಿಂದೆ ಪರಿಹಾರದ ಮೊತ್ತ ಕ್ರಮವಾಗಿ 50,000, 25,000 ಮತ್ತು 5,000 ರೂ. ಇತ್ತು. ಇನ್ನು ಅಹಿತಕರ ಘಟನೆಗಳಲ್ಲಿ ಮೃತಪಟ್ಟ, ಗಂಭೀರವಾಗಿ ಗಾಯಗೊಂಡ ಮತ್ತು ಸಣ್ಣಪುಟ್ಟ ಗಾಯಗೊಂಡ ಪ್ರಯಾಣಿಕರ ಅವಲಂಬಿತರಿಗೆ ಕ್ರಮವಾಗಿ 1.5 ಲಕ್ಷ, 50,000 ಮತ್ತು 5,000 ರೂ.ಗಳನ್ನು ನೀಡಲಾಗುವುದು ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ. ಮುಂಚೆ ಈ ಮೊತ್ತವು ಕ್ರಮವಾಗಿ 50,000, 25,000 ಮತ್ತು 5,000 ರೂ. ಇತ್ತು.

ಅಧಿಕೃತವಾಗಿ ವಾಟ್ಸಾಪ್ ಚಾನಲ್ ಆರಂಭಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ!



ಬೆಂಗಳೂರು, ಸೆ.21– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕೃತವಾಗಿ ವಾಟ್ಸಪ್ ಚಾನೆಲ್ ಆರಂಭಿಸಿದ್ದಾರೆ. ಈ ಮೂಲಕ ಇಡೀ ದೇಶದ ಇತರೆ ರಾಜ್ಯಗಳ ಮುಖ್ಯಮಂತ್ರಿಗಳ ಪೈಕಿ ವಾಟ್ಸಾಪ್ ಚಾನಲ್ ಆರಂಭಿಸಿದವರಲ್ಲಿ ಸಿದ್ದರಾಮಯ್ಯ ಮೊದಲಿಗರಾಗಿದ್ದಾರೆ. ಕಳೆದ ವಾರ ವಾಟ್ಸಪ್ ಚಾನೆಲ್ ಎಂಬ ಹೊಸ ಆವಿಷ್ಕಾರವನ್ನು ಮೇಟಾ ಕಂಪನಿ (ವಾಟ್ಸಪ್ ಸಂಸ್ಥೆ) ಪರಿಚಯಿಸಿತು. ಸೆಪ್ಟೆಂಬರ್ 12ರಂದು ಸಿಎಂ ಸಿದ್ದರಾಮಯ್ಯ ಅವರು ಈ ಚಾನಲ್ ಆರಂಭಿಸಿದರು. ಆ ಬಳಿಕ ನಿರಂತರವಾಗಿ ಸಾರ್ವಜನಿಕರು ಚಾನೆಲ್ ಸೇರ್ಪಡೆಗೊಳ್ಳುತ್ತಿದ್ದು, ಸೆಪ್ಟೆಂಬರ್ 19ಕ್ಕೆ 54,000ಕ್ಕೂ ಅಧಿಕ ಮಂದಿ ಈ ಚಾನೆಲ್ ಸೇರ್ಪಡೆಯಾಗಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಈಗಾಗಲೇ https://twitter.com/siddaramaiah ಖಾತೆ ಮೂಲಕ ಟ್ವಿಟರ್‌ನಲ್ಲಿ, https://www.facebook.com/Siddaramaiah.Official ಖಾತೆ ಮೂಲಕ ಫೇಸ್‌ಬುಕ್‌ನಲ್ಲಿ ಸಕ್ರಿಯರಾಗಿದ್ದಾರೆ. ಅಲ್ಲದೇ ಮುಖ್ಯಮಂತ್ರಿಗಳ ಕಚೇರಿ ಸಹ ತನ್ನ ಅಧಿಕೃತ ಖಾತೆ ಮೂಲಕ ಮುಖ್ಯಮಂತ್ರಿಗಳ ಕುರಿತಾದ ಅಪ್‌ಡೇಟ್ ನೀಡುತ್ತದೆ. ಈಗ ವಾಟ್ಸಪ್ ಚಾನೆಲ್ ಮೂಲಕ ಸಿದ್ದರಾಮಯ್ಯ ತಮ್ಮ ಅಭಿಮಾನಿಗಳು, ಪಕ್ಷದ ಕಾರ್ಯಕರ್ತರು, ಜನರನ್ನು ಸುಲಭವಾಗಿ ತಲುಪುತ್ತಿದ್ದಾರೆ. ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಮಾಹಿತಿ ನೀಡಿರುವ ಮುಖ್ಯಮಂತ್ರಿ, ನಿಮ್ಮ ಮೊಬೈಲ್‌ನ ಒಂದೇ ಕ್ಲಿಕ್‌ನಲ್ಲಿ ನಮ್ಮ ಸರ್ಕಾರದ ಯೋಜನೆಗಳು ಮತ್ತು ಸಾಧನೆಗಳ ಮಾಹಿತಿಯನ್ನು ತಲುಪಿಸುವ ಉದ್ದೇಶದೊಂದಿಗೆ ವಾಟ್ಸಾಪ್ ಚಾನಲ್ ಅನ್ನು ಆರಂಭಿಸಿದ್ದೇನೆ.

ವಿಧಾನಸಭೆಯಲ್ಲಿ ಆಹಾರ ಸುರಕ್ಷತೆ ಕುರಿತು ಒಂದು ದಿನ ಚರ್ಚೆಗೆ ಚಿಂತನೆ

● ಸ್ಪೀಕರ್ ಯು.ಟಿ.ಖಾದರ್ ಅಭಿಮತ ● ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘದ ಬೆಳ್ಳಿ ಚಪ್ಪರ ಸಮಾರಂಭ ಉದ್ಘಾಟನೆ

ಮೈಸೂರು, ಸೆ.21(ಎಸ್‌ಬಿಡಿ)– ಆಹಾರ ಗುಣಮಟ್ಟ ದೃಷ್ಟಿಯಿಂದ ಪಾಲಿಸಿ ತರುವ ಅಗತ್ಯವಿದೆ. ಈ ನಿಟ್ಟಿನಲ್ಲಿ ವಿಧಾನಸಭೆಯಲ್ಲಿ ಆಹಾರ ಸುರಕ್ಷತೆ ಬಗ್ಗೆ ಚರ್ಚಿಸಲು ಒಂದು ದಿನ ಮೀಸಲಿಡುವ ಚಿಂತನೆ ಇದೆ ಎಂದು ವಿಧಾನಸಭೆ ಸ್ಪೀಕರ್ ಯು.ಟಿ. ಖಾದರ್ ಹೇಳಿದರು.

ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಗುರುವಾರ ಆಯೋಜಿಸಿದ್ದ 'ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘದ ಬೆಳ್ಳಿ ಚಪ್ಪರ ಸಮಾರಂಭ'ವನ್ನು ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಶ್ರೀ ಮುಕ್ತಿದಾನಂದಜಿ ಮಹಾರಾಜ್ ಹಾಗೂ ಬೇಬಿ ಮಠದ ಶ್ರೀ ತ್ರಿನೇತ್ರ ಮಹಾಂತ ಶಿವಯೋಗಿ ಮಹಾಸ್ವಾಮಿಗಳ ಸಾನ್ನಿಧ್ಯದಲ್ಲಿ ಉದ್ಘಾಟಿಸಿ, ಅವರು ಮಾತನಾಡಿದರು.

ಹೋಟೆಲ್ ಉದ್ಯಮದಲ್ಲಿ ವ್ಯಾಪಾರದ ಜೊತೆಯಲ್ಲಿ ಗುಣಮಟ್ಟಕ್ಕೆ ಆದ್ಯತೆ ನೀಡಬೇಕು. ಈ ಸಂಬಂಧ ವ್ಯಾಪಕ ಜಾಗೃತಿ ಅತ್ಯಗತ್ಯ. ಈ ನಿಟ್ಟಿನಲ್ಲಿ ವಿಧಾನಸಭೆಯಲ್ಲಿ ಒಂದು ದಿನ ಸಂಪೂರ್ಣವಾಗಿ ಆಹಾರ ಮತ್ತು ಸುರಕ್ಷತೆ ಬಗ್ಗೆ ಚರ್ಚೆ ಮಾಡಬೇಕೆಂಬ ಚಿಂತನೆ ಇದೆ. ಇದರಿಂದ ಕನಿಷ್ಠ ಅಧಿಕಾರಿಗಳು ಈ ಬಗ್ಗೆ ಗಂಭೀರವಾಗಿ ಕ್ರಮ ವಹಿಸಬಹುದು. ರೋಗಗಳು ತನ್ನಂತಾನೆ ಬರುವುದಿಲ್ಲ. ನಮ್ಮ ಆಹಾರ ಹವ್ಯಾಸ, ಪರಿಸರ ಹಾಗೂ ಜೀವನ ಪದ್ಧತಿ ಇದಕ್ಕೆ ಕಾರಣ. ಆಹಾರಕ್ಕೆ ಬಳಸುವ ಪದಾರ್ಥಗಳ ಗುಣಮಟ್ಟ, ಅವುಗಳಿಂದ ಆಗಬಹುದಾದ ಪರಿಣಾಮದ ಬಗ್ಗೆ ತಿಳಿಯುವ ಅಗತ್ಯವಿದೆ. ಬೀದಿಬದಿ ವ್ಯಾಪಾರವಾದರೂ ಗುಣಮಟ್ಟದಲ್ಲಿ ಯಾವ ಕಾರಣಕ್ಕೂ ರಾಜೀ ಯಾಗಬಾರದು. ಈ ಬಗ್ಗೆ ಎಲ್ಲರಲ್ಲೂ ಜಾಗೃತಿ ಮೂಡಿಸಬೇಕಿದೆ.



ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ನಡೆದ 'ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘದ ಬೆಳ್ಳಿ ಚಪ್ಪರ ಸಮಾರಂಭ'ದಲ್ಲಿ ಸಂಘಕ್ಕಾಗಿ ದುಡಿದವರನ್ನು ಅಭಿನಂದಿಸಲಾಯಿತು. ಶ್ರೀ ಮುಕ್ತಿದಾನಂದಜಿ ಮಹಾರಾಜ್, ಶ್ರೀ ತ್ರಿನೇತ್ರ ಮಹಾಂತ ಶಿವಯೋಗಿ ಮಹಾಸ್ವಾಮಿ, ಸ್ಪೀಕರ್ ಯು.ಟಿ.ಖಾದರ್ ಮತ್ತಿತರರು ಉಪಸ್ಥಿತರಿದ್ದರು.

ಮುಂದಿನ ಪೀಳಿಗೆಗೆ ಆರೋಗ್ಯಯುಕ್ತ ಸಮಾಜ ನಿರ್ಮಿಸಿಕೊಡುವ ನಿಟ್ಟಿನಲ್ಲಿ ಎಲ್ಲರಿಗೂ ಜವಾಬ್ದಾರಿ ಇದೆ. ಈ ನಿಟ್ಟಿನಲ್ಲಿ ಹೋಟೆಲ್ ಮಾಲೀಕರ ಸಂಘದ ಸಲಹೆ ಹಾಗೂ ಅಭಿಪ್ರಾಯ ತಿಳಿಸಿದರೆ ಸರ್ಕಾರದ ಗಮನಕ್ಕೆ ತರುತ್ತೇನೆ ಎಂದು ತಿಳಿಸಿದರು.

ತಾಯಂದಿರ ಜವಾಬ್ದಾರಿ: ಆಹಾರಕ್ಕೆ ಸಂಬಂಧಪಟ್ಟಂತೆ ತಾಯಂದಿರಿಗೆ ವ್ಯಾಪಕ ಜಾಗೃತಿ ಮೂಡಿಸಬೇಕಿದೆ. ಈಗ ಆರೋಗ್ಯ ದೃಷ್ಟಿಯಿಂದಲ್ಲ, ದಪ್ಪವಾಗಲಿ ಎಂದು ಮಕ್ಕಳಿಗೆ ತಿನ್ನಿಸುತ್ತಾರೆ. ಅದು ಅಭ್ಯಾಸವಾಗಿ ದೊಡ್ಡವರಾದ ಮೇಲೆ ಸತ್ತರೂ ಚಿಂತೆಯಿಲ್ಲ ನಾಲಿಗೆ ರುಚಿ ಬಿಡಲು ಆಗದಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಆದ್ದರಿಂದ ಚಿಕ್ಕವರಿದ್ದಾಗಲೇ ಆರೋಗ್ಯಕ್ಕೆ ಪೂರಕವಾದ ಆಹಾರ ಪದ್ಧತಿ ರೂಢಿ ಮಾಡಬೇಕು. ನಾಲಿಗೆಗೆ ರುಚಿಯಾಗುವ ತಿನಿಸಿನ ಬದಲು ಆರೋಗ್ಯಕ್ಕೆ ಪೂರಕವಾದ ಆಹಾರ ಸೇವಿಸಬೇಕು ಎಂದು ಸಲಹೆ ನೀಡಿದರು.

ಆತ್ಮೀಯ ಅಭಿನಂದನೆ: ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘದವರು ಹಾಗೂ ಉದ್ಯಮದ ಸಾಧಕರಾದ ಬೆಳ್ಳಿ ಚಪ್ಪರ ಕಟ್ಟಿದ ಏಟ್ರಿಯಂ ಹೋಟೆಲ್ ಮಾಲೀಕ ಎಂ.ಕೆ. ಪುರಾಣಿಕ್, ಎಫ್‌ಕೆಸಿಸಿಐ ಮಾಜಿ ಅಧ್ಯಕ್ಷ ಸುಧಾಕರ್ ಎಸ್.ಶೆಟ್ಟಿ, ಜೀವಮಾನ ಸಾಧಕ ಮಹಾಲಕ್ಷ್ಮಿ ಸ್ವೀಟ್ಸ್ ಮಾಲೀಕ ಶಿವಕುಮಾರ್, ಉದ್ಯಮ ಪ್ರೋತ್ಸಾಹಿಗಳಾದ ಏಟ್ರಿಯಂ ಹೋಟೆಲ್ ಪಾಲುದಾರ ಎಂ.ವಿಷ್ಣುಮೂರ್ತಿ, ಹೋಟೆಲ್ ಮಾಲೀಕರ ಧರ್ಮದತ್ತಿ ಅಧ್ಯಕ್ಷ ವಿ.ಎಸ್.ರವಿಶಾಸ್ತ್ರಿ, ಪಿ.ನಾರಾಯಣ ಕುಂದರ್, ಓ.ಪ್ರತಾಪ್ ಕುಮಾರ್, ಪಿ.ಗೋಪಾಲಕೃಷ್ಣ, ಎಂ. ಸಂಜೀವಶೆಟ್ಟಿ, ಆರ್.ವಾಸುದೇವ ಭಟ್, ಡಿ.ಚಂದ್ರಶೇಖರ ಶೆಟ್ಟಿ ಅವರನ್ನು ಗಣ್ಯರು ಸನ್ಮಾನಿಸಿದರು. ಸಮಾರಂಭದಲ್ಲಿ ಶಾಸಕರಾದ ಟಿ.ಎಸ್.ಶ್ರೀವತ್ಸ, ಕೆ.ಹರೀಶ್‌ಗೌಡ, ಮೇಯರ್ ಶಿವಕುಮಾರ್, ಮೈಸೂರು ಜಿಲ್ಲಾ ಪತ್ರ ಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಸಹಕಾರ ಸಂಘಗಳ ಸಹಾಯಕ ನಿಬಂಧಕ ಕೆ.ಎಸ್.ಹರೀಶ್ ಕುಮಾರ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ. ನಾರಾಯಣಗೌಡ, ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ನಾರಾಯಣ ವಿ.ಹೆಗಡೆ ಹಾಗೂ ಎಲ್ಲಾ ನಿರ್ದೇಶಕರೂ ಉಪಸ್ಥಿತರಿದ್ದರು.

ಧರ್ಮಗುರುಗಳು ದೇಶದ ರಾಯಭಾರಿಗಳು...

ಭಾರತದ ದೇಶದ ರಾಯಭಾರಿಗಳು ಎಲ್ಲಾ ಧಾರ್ಮಿಕ ಮುಖಂಡರೇ ಹೊರತು ರಾಜಕಾರಣಿಗಳಲ್ಲ. ಗುರುಗಳನ್ನು ಕಾಣಲು ವಿದೇಶಗಳಿಂದ ಭಾರತಕ್ಕೆ ಬರುತ್ತಾರೆ. ಹಾಗಾಗಿ ಎಲ್ಲಾ ಜಾತಿ, ಧರ್ಮದವರೂ ಎಲ್ಲಾ ಸಂಸ್ಕೃತಿಯನ್ನು ಅರ್ಥ ಮಾಡಿಕೊಂಡು ಒಂದೇ ತಾಯಿ ಮಕ್ಕಳಂತೆ ವಿಶ್ವಾಸದಿಂದ ಬದುಕುವ ಮೂಲಕ ಬಲಿಷ್ಠ ಭಾರತ ನಿರ್ಮಾಣ ಮಾಡಬೇಕಿದೆ. ಎಲ್ಲಾ ಧಾರ್ಮಿಕ ಕೇಂದ್ರಗಳಿಗೆ ಹೋಗುವ ಅಭ್ಯಾಸ ನನಗೆ ಸಣ್ಣ ವಯಸ್ಸಿನಿಂದಲೂ ರೂಢಿಗತವಾಗಿದೆ. ಶಾಸಕರಾಗಿದ್ದ ನನ್ನ ತಂದೆಗೆ ಎಲ್ಲರೊಂದಿಗೆ ಒಡನಾಟವಿತ್ತು. ನನ್ನ ತಾಯಿ ಪಕ್ಕದ ಮನೆ ರಾಧಕ್ಕ, ಯಮುನಕ್ಕ ಅವರೊಂದಿಗೆ ನನ್ನನ್ನು ಯಕ್ಷಗಾನ, ಹರಿಕತೆಗೆ ಕಳುಹಿಸುತ್ತಿದ್ದರು. ದಾರಿಯಲ್ಲಿ ಹೋಗುವಾಗ ಅವರೆಲ್ಲಾ ಕತೆ ಹೇಳುತ್ತಿದ್ದರು. ಆ ಸಂಸ್ಕೃತಿ ನನ್ನ ವ್ಯಕ್ತಿತ್ವದಲ್ಲಿ ಬಲವಾಗಿ ಬೇರು ಬಿಟ್ಟಿದೆ. ಇದು ತಂದೆ–ತಾಯಿ, ನೆರೆ ಹೊರೆಯವರ ದೊಡ್ಡ ಕೊಡುಗೆ ಎಂದು ಸ್ಪೀಕರ್ ಯು.ಟಿ.ಖಾದರ್ ತಿಳಿಸಿದರು.

ರಾಜಕಾರಣಿಗಳ ಗಲಾಟೆ 10 ನಿಮಿಷ ಮಾತ್ರ...

ಮೈಸೂರು: ಸ್ಪೀಕರ್ ಸ್ಥಾನದ ಸವಾಲಿನ ಬಗ್ಗೆ ಸ್ಪೀಕರ್ ಯು.ಟಿ.ಖಾದರ್ ಹಾಸ್ಯ ಮಿಶ್ರಿತವಾಗಿ ತಿಳಿಸಿದರು. ಸ್ಪೀಕರ್ ಎಂದರೆ ನಾಟ್ ಯು ಸ್ಪೀಕ್, ಮೇಕ್ ಅದರ್ ಸ್ಪೀಕ್. ಅಂದರೆ ತಾವು ಮಾತನಾಡದೆ ಬೇರೆಯವರು ಮಾತನಾಡಲು ಅವಕಾಶ ನೀಡುವುದು ಸ್ಪೀಕರ್ ಕೆಲಸ. ಸ್ಪೀಕರ್ ಯಾವಾಗಲೂ ಪ್ರತಿಪಕ್ಷದವರ ಮಿತ್ರ. ಪ್ರತಿಪಕ್ಷದವರಿಗೆ ಹೆಚ್ಚು ಮಾತನಾಡಲು ಅವಕಾಶ ಕೊಡುವ ಮೂಲಕ ಸರ್ಕಾರದಿಂದ ಮತ್ತಷ್ಟು ಚೆನ್ನಾಗಿ ಕೆಲಸ ಮಾಡಿಸುವ ಜವಾಬ್ದಾರಿ. ಆದರೂ ಪ್ರತಿಪಕ್ಷದವರಿಗೆ ಸ್ಪೀಕರ್ ಮೇಲೆ ಸಂಶಯ ಜಾಸ್ತಿ. ಆಡಳಿತ ಹಾಗೂ ವಿರೋಧ ಪಕ್ಷದವರು ಪರಸ್ಪರ ವಾದ–ಪ್ರತಿವಾದ ನಡೆಸಿ ಸಾಕಾದಾಗ ಸ್ಪೀಕರ್ ಕಡೆಗೆ ತಿರುಗುತ್ತಾರೆ. ಎಲ್ಲವನ್ನೂ ಸರಿದೂಗಿಸುವುದು ದೊಡ್ಡ ಸಾಹಸ. ಸದನದಲ್ಲಿ ಭಯಂಕರ ಚರ್ಚೆ, ಗಲಾಟೆ ಮಾಡ್ತಾರೆ. ಅದೆಲ್ಲಾ 10 ನಿಮಿಷ ಮಾತ್ರ. ಹೊರಗೆ ಬಂದಾಗ ಎಲ್ಲರೂ ಖುಷಿಯಿಂದ ಕಾಫಿ ಕುಡಿಯುತ್ತಾರೆ. ಹಾಗಾಗಿ ಟಿವಿ ನೋಡಿಕೊಂಡು ನೀವಿಲ್ಲಿ ಗಲಾಟೆ ಮಾಡಲು ಹೋಗಬೇಡಿ ಎಂದು ಹಾಸ್ಯಮಯವಾಗಿ ವಾಸ್ತವ ತೆರೆದಿಟ್ಟರು.

ನಕ್ಕರೆ ಅದೇ ಸ್ವರ್ಗ

ಶಿಕ್ಷಕ : "ಜಗತ್ತಿನ ಏಳು ಅದ್ಭುತಗಳಲ್ಲಿ ಚೀನಾದ ಮಹಾಗೋಡೆ ಏಕೆ ಸ್ಥಾನ ಪಡೆದುಕೊಂಡಿದೆ?"

ಗುಂಡ : "ಇದೊಂದೇ ಚೀನಾ ಪ್ರಾಡಕ್ಟ್ ಇಷ್ಟು ದಿನಗಳವರೆಗೆ ಬಾಳಿಕೆ ಬಂದಿರುವುದು. ಅದಕ್ಕೆ ಆ ಪಟ್ಟಿಯಲ್ಲಿದೆ ಸರ್!!"

ಮೈಸೂರು ಮಿತ್ರ

ಶುಕ್ರವಾರ, 22 ಸೆಪ್ಟೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಜನರು ನಿಮ್ಮ ಕಡೆ ಎಸೆಯುವ ಕಲ್ಲುಗಳನ್ನು ತೆಗೆದುಕೊಂಡು ನಿಮ್ಮ ಕೋಟೆಯನ್ನು ನಿರ್ಮಿಸಿ. –ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕಾಸಿಗೆ ತಕ್ಕ ಕಜ್ಜಾಯ

ನಿಮ್ಮ ಪತ್ರಗಳು

ಮೈಸೂರು ರೈಲ್ವೆ ಸ್ಟೇಷನ್ನಿನ Back Gate ಬಳಸುವವರ ಅಳಲು

ಮಾನ್ಯರೆ,

ಮೈಸೂರಿನ ಮುಖ್ಯ ರೈಲ್ವೆ ಸ್ಟೇಷನ್ ಪ್ರವೇಶಿಸಲು, ಆಕಾಶವಾಣಿ ಬಳಿಯ Back Gate ಅನ್ನು ತೆರೆದದ್ದು ಗೋಕುಲಂ, ವಿಜಯನಗರ, ಹೆಬ್ಬಾಳು, ಬೃಂದಾವನ ಬಡಾವಣೆಯ ನಿವಾಸಿಗಳಿಗೆ ಬಹಳ ಅನುಕೂಲವಾಗುತ್ತಿದೆ ನಿಜ.

ಆದರೆ ಇಲ್ಲಿ ನಾವು ರೈಲ್ವೆ ಸ್ಟೇಷನ್ ಪ್ರವೇಶಿಸಿದ ಕೂಡಲೇ ನಮಗೆ 6ನೇ ಪ್ಲಾಟ್ ಫಾರಂ ಎದುರಾಗುತ್ತದೆ. ಅಂತೆಯೇ ತೀರಾ ಇತ್ತೀಚೆಗೆ ಪ್ರಯಾಣಿಕರ ಅನುಕೂಲಕ್ಕಾಗಿ ಈ 6ನೇ ಪ್ಲಾಟ್ ಫಾರಂನಿಂದ ಮೇಲೆ ಸಾಗಿ ಉದಾಹರಣೆಗೆ 5,4,3,2,1 ಯಾವುದೇ ಪ್ಲಾಟ್ ಫಾರಂಗೆ ತೆರಳಲು ವಿದ್ಯುತ್ ಚಾಲಿತ ಎಸ್ಕಲೇಟರ್ ಒಂದನ್ನು ರೈಲ್ವೆ ಇಲಾಖೆಯವರು ಅಲ್ಲಿ ಅಳವಡಿಸಿದ್ದಾರೆ. ಈ ಆಧುನಿಕ ಸೌಕರ್ಯವು ಪದೇ ಪದೆ ದಿಢೀರ್ ಎಂದು ಕೆಟ್ಟು ಹೋಗಿ, ಅಗತ್ಯ ಸಮಯದಲ್ಲಿ ಪ್ರಯಾಣಿಕನನ್ನು ವಿನಾಕಾರಣ ಹೈರಾಣಾಗಿಸುತ್ತಿದೆ. ಅಲ್ಲಿ ಈ ಸಮಸ್ಯೆಯನ್ನು ಕುರಿತು ತ್ವರಿತ ಕ್ರಮಕ್ಕಾಗಿ ದೂರೋಣವೆಂದರೆ ಅಲ್ಲಿ ಸಂಬಂಧಿಸಿದ ಸಿಬ್ಬಂದಿ ಯಾರೂ ಸಹಾ ಸಿಗುವುದಿಲ್ಲ. ಮೊನ್ನೆ ನನಗೆ ಮತ್ತೆ ಈ ಅನುಭವವಾಗಿ, ಅದನ್ನು 3ನೇ ಪ್ಲಾಟ್ ಫಾರಂನಲ್ಲಿ ದೊರೆತ TT ಒಬ್ಬರಲ್ಲಿ ಸಮಸ್ಯೆ ಹೇಳಿಕೊಂಡಾಗ, ಆತ ನೀವು ಈ ದೂರುಗಳನ್ನು 1ನೇ ಪ್ಲಾಟ್ ಫಾರಂನಲ್ಲಿರುವ ರಿಜಿಸ್ಟರ್‌ನಲ್ಲಿ ಖುದ್ದಾಗಿ ಹೋಗಿ ಬರೆಯಿರಿ, ಸಮಸ್ಯೆ ಬಗೆಹರಿಯುತ್ತದೆ ಎನ್ನುತ್ತಾರೆ. ಆದರೆ ಪ್ರಯಾಣಿಕನ ಧಾವಂತದಲ್ಲಿ ಇದು ಅಸಾಧ್ಯದ ಮಾತು.

ಈ ಹಿನ್ನೆಲೆಯಲ್ಲಿ ರೈಲ್ವೆ ಇಲಾಖೆ ತತ್‌ಕ್ಷಣದ ಸ್ಪಂದನೆಗಾಗಿ, ಈ ಕೂಡಲೇ 6ನೇ ಪ್ಲಾಟ್ ಫಾರಂನಲ್ಲಿ ಸೂಕ್ತ ತಾಂತ್ರಿಕ ಸಿಬ್ಬಂದಿ ನಿಂಯೋಜಿಸಿ ಅಥವಾ ದೂರು ನಿರ್ವಹಿಸುವ ವ್ಯವಸ್ಥೆ ಕಲ್ಪಿಸಿ, ಬಡಪಾಯಿ ಪ್ರಯಾಣಿಕರ ಹಿತ ಕಾಪಾಡಲಿ.

–ನಾಗಮಂಗಲ ನರಸಿಂಹಮೂರ್ತಿ, ಮೈಸೂರು

ಈ ಸಾವು ನ್ಯಾಯವೇ?

ಮಾನ್ಯರೆ,

ನಂಜನಗೂಡಿನ ಸಂಚಾರ ವಿಭಾಗದ ಠಾಣೆಯಲ್ಲಿ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಯೊಬ್ಬರ ಪುತ್ರನ ಪುಂಡಾಟದ ದುರ್ವರ್ತನೆಗೆ ಅಮಾಯಕ ವ್ಯಕ್ತಿಯೊಬ್ಬರ ಸಾವು ಸಂಭವಿಸಿದೆ. ತನ್ನ ಪಾಡಿಗೆ ದನ ಕಾಯುತ್ತ ಕುಳಿತಿದ್ದ ವ್ಯಕ್ತಿಯೊಬ್ಬನ ಮೇಲೆ ಏಕಾಏಕಿ ಬೈಕ್ ವ್ಹೀಲಿಂಗ್ ಮಾಡುತ್ತ ಬಂದು, ಡಿಕ್ಕಿ ಹೊಡೆದು ಆ ವ್ಯಕ್ತಿಯ ಸಾವಿಗೆ ಕಾರಣವಾಗಿದ್ದಾನೆ. ಈತನ ವಿರುದ್ಧ ಅನೇಕ ವಾಹನ ಉಲ್ಲಂಘನಾ ಪ್ರಕರಣಗಳು ದಾಖಲಾಗಿ ಬುದ್ಧಿವಾದ ಹೇಳಿ ಕಳುಹಿಸಿದರೂ ಮತ್ತೆ ಬೈಕ್ ವ್ಹೀಲಿಂಗ್ ಮಾಡಿ ಜೀವವನ್ನೇ ತಗೆದಿದ್ದಾನೆ. ನಿಜಕ್ಕೂ ಇದು ಕ್ಷಮಿಸಲಾರದ ಸಂಗತಿ. ಈತನಿಗೆ ಯಾವುದೇ ದಯದಾಕ್ಷಿಣ್ಯ ತೋರದೆ ಕಾನೂನಿನ ಛಡಿ ಏಟನ್ನು ನೀಡಿ, ಅಮಾಯಕ ವ್ಯಕ್ತಿಯ ಸಾವಿಗೆ ನ್ಯಾಯ ಸಿಗುವಂತೆ ಮಾಡಬೇಕಾಗಿದೆ.

–ಮೋಹನ್ ಜಯರಾಂ, ಸಿದ್ದಯ್ಯನಪುರ. ಚಾಮರಾಜನಗರ

ಬರಕ್ಕೂ ದಸರಾಕ್ಕೂ ಸಂಬಂಧ ಕಟ್ಟುವಿರೇಕೆ?

ಮಾನ್ಯರೆ,

ಮೈಸೂರಿನ ದಸರಾಕ್ಕೂ ಮಳೆ ಕೊರತೆಯಿಂದಾಗಿ ಉದ್ಭವಿಸುವ ಬರಕ್ಕೂ ಬಿಡಿಸಲಾಗದ ನಂಟು! ಮಳೆ ಕೈಕೊಟ್ಟು ಅನ್ನದಾತನು ಸಂಕಷ್ಟಕ್ಕೆ ತುತ್ತಾಗುವ ಸಂದರ್ಭಗಳಲ್ಲಿ ಕೆಲವರಿಂದ ಹೊರಹೊಮ್ಮುವ ಘೋಷಣೆ "ಅದ್ದೂರಿ ದಸರಾ ಬೇಡ, ಸರಳವಾಗಿ ಸಾಂಪ್ರದಾಯಕ ದಸರಾ ಆಚರಿಸುವುದು ಸೂಕ್ತ". ಈ ಬಾರಿಯೂ ಈಗಾಗಲೇ ಕೆಲವರಿಂದ ಸರಳ ದಸರಾ ಆಚರಿಸಿ ಎಂಬ ಅಭಿಪ್ರಾಯಗಳು ಪತ್ರಿಕೆಗಳಲ್ಲಿ ಬಂದಿವೆ. ಇಲ್ಲಿ ಪ್ರಶ್ನೆ ಇರುವುದು ಬರ ಇದ್ದಾಗ ಸರಳ ದಸರಾ ಆಚರಿಸಿದರೆ ಸಮೃದ್ಧಿ ಮಳೆ ಬಂದು ಕೆರೆಕಟ್ಟೆಗಳು ತುಂಬುವುದೆ? ಅಥವಾ ಇದರಿಂದ ಆರ್ಥಿಕವಾಗಿ ಸರ್ಕಾರಕ್ಕೆ ಲಾಭವಾಗುವುದೆ?

ರಾಜ್ಯದಲ್ಲಿ ಬರ ಇದ್ದಾಗ್ಯೂ ಮಾಲ್‌ಗಳು, ಬಟ್ಟೆ ಅಂಗಡಿಗಳು, ಚಿನ್ನದ ಅಂಗಡಿಗಳು ಮೊಬೈಲ್ ಅಂಗಡಿಗಳು ತುಂಬಿ ತುಳುಕುತ್ತಿವೆ. ನಿತ್ಯದ ಬದುಕಿನಲ್ಲಿ ಏನು ನಡೆಯಬೇಕೋ ಎಲ್ಲವೂ ನಡೆಯುತ್ತಿದೆ. ಮಳೆ ಆಗಿಲ್ಲವೆಂದು ಯಾವುದಕ್ಕೆ ಕಡಿವಾಣವಿದೆ? ಅದ್ದೂರಿ ದಸರೆಗೆ ತಡೆ ಏಕೆ? ಬರದಲ್ಲಿ ಸರಳ ದಸರಾ ಆಚರಿಸಿ ಎನ್ನುವ ಬದಲು ಮಳೆಯ ಕೊರತೆ ಇದ್ದಾಗ ನೀರಿನ ಸದ್ಬಳಕೆ ಹೇಗಿರಬೇಕೆಂಬ ಪರಿಜ್ಞಾನವನ್ನು ಜನರಿಗೆ ತಿಳಿಸುವ ಕಾರ್ಯಕ್ರಮಗಳಾಗಲಿ. ಇದರಿಂದ ಬರದ ಛಾಯೆಯನ್ನು ಒಂದಷ್ಟು ದಿನಗಳವರೆಗೆ ಮುಂದೂಡಬಹುದು. ವಿಶ್ವಕ್ಕೇ ಮೈಸೂರಿನ ಸಂಸ್ಕೃತಿಯನ್ನು ಸಾರುವ ಅದ್ದೂರಿ ದಸರಾ ಆಚರಿಸುವುದರಿಂದ ಯಾರಿಗೂ ನಷ್ಟವಾಗದು. ವಿಜೃಂಭಣೆಯ ದಸರೆಯಿಂದ ಆಗುವ ಲಾಭಗಳು.

* ಲಕ್ಷಾಂತರ ಕಾರ್ಮಿಕರಿಗೆ ಸುಮಾರು ಒಂದು ತಿಂಗಳು ಕೆಲಸ ಸಿಗುವುದು.
* ಪಾಲಿಕೆಯವರು ನಗರದ ರಸ್ತೆಗಳಲ್ಲಿನ ಗುಂಡಿಗಳನ್ನು ಮುಚ್ಚಿ ಅಭಿವೃದ್ಧಿಗೊಳಿಸುವರು.
* ನಗರವು ಸೇರಿದಂತೆ ನೂರು ಕಿಮೀವರೆಗಿನ ಸ್ಥಳಗಳಿಗೆ ದಸರಾಕ್ಕೆ ಬರುವ ಪ್ರವಾಸಿಗರು ಭೇಟಿ ನೀಡುವುದರಿಂದ ಪಕ್ಕದ ಜಿಲ್ಲೆಗಳ ಪ್ರವಾಸೋದ್ಯಮವು ಅಭಿವೃದ್ಧಿಯಾಗುವುದು.
* ಸ್ಥಳೀಯ ಪತ್ರಿಕೆಗಳಿಗೆ ಜಾಹೀರಾತು ಸಿಗುವುದರಿಂದ ಪತ್ರಿಕೋದ್ಯಮಕ್ಕೂ ಸಹಾಯ ಆಗುವುದು.
* ದಸರೆಯಲ್ಲಿ ಕಲೆಗೆ ಹೆಚ್ಚು ಒತ್ತು ನೀಡುವುದರಿಂದ ಕಲಾವಿದರಿಗೆ ಪ್ರೋತ್ಸಾಹ ದೊರೆಯುವುದು.
* ಮೈಸೂರು ಸಾಹಿತಿಗಳು, ಕವಿಗಳು ಹಾಗೂ ಲೇಖಕರ ಆಶ್ರಯತಾಣವಾಗಿದ್ದು, ದಸರಾ ಕವಿಗೋಷ್ಠಿಯಲ್ಲಿ ಭಾಗವಹಿಸುವುದರಿಂದ ಸಾಹಿತ್ಯಾಸಕ್ತರಿಗೆ ಉತ್ತೇಜನವಾಗುವುದು.
* ದೇಶದೆಲ್ಲೆಡೆಯಿಂದ ಪ್ರವಾಸಿಗರು ಆಗಮಿಸಿ ವ್ಯಾಪಾರ ವಹಿವಾಟು ಹೆಚ್ಚು ನಡೆಯುವುದರಿಂದ ವ್ಯಾಪಾರಸ್ತರಿಗೆ ಬಹಳವೇ ಲಾಭವಾಗುವುದು.
* ಎಲ್ಲದಕ್ಕೂ ಮಿಗಿಲಾಗಿ ಅಂದಾಜು ಐದನೂರು ಕೋಟಿಗಿಂತಲೂ ಹೆಚ್ಚು ಆರ್ಥಿಕ ಲಾಭ ಸರ್ಕಾರಕ್ಕೆ ಆಗುವುದು.

ಇವುಗಳಲ್ಲದೆ ಹಲವಾರು ಪರೋಕ್ಷ ಅನುಕೂಲಗಳು ನಮ್ಮ ಮೈಸೂರಿಗೆ ಆಗುವುದು. ಈಗ ಹೇಳಿ ಅದ್ದೂರಿ ದಸರಾ ಇಲ್ಲ, ಸರಳ ದಸರಾ ಬೇಕಾ? ದಯಮಾಡಿ ಸಾಕು ನಿಲ್ಲಿಸಿ ಸರಳ ದಸರಾ ಎಂಬ ಕೂಗನ್ನು. ಬರಗಾಲದಲ್ಲಿ ನಡೆಯುವ ಅದ್ದೂರಿ ದಸರಾವು ಜನರಿಗೆ ಎಲ್ಲಾ ದೃಷ್ಟಿಕೋನದಿಂದಲೂ ಬರಪರಿಹಾರ ಕಾಮಗಾರಿಗಿಂತಲೂ ಹೆಚ್ಚು ಫಲಪ್ರದವಾಗುವುದರಲ್ಲಿ ಸಂದೇಹವೇ ಇಲ್ಲ.

–ಮಿರ್ಲೆ ಚಂದ್ರಶೇಖರ, ಲೇಖಕರು, ಮೈಸೂರು.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು

ಸಂಸ್ಕೃತಿ ಚಿಂತನಾ

ಬುದ್ಧನು ತೋರಿಸಿದ ಅಷ್ಟಾಂಗಮಾರ್ಗ

ಭಾರತದ ಭೂಮಿಯ ಮೇಲೆ ನಡೆದಾಡಿದ ಕೋಟ್ಯಂತರ ವ್ಯಕ್ತಿಗಳಲ್ಲಿ ಅತ್ಯಂತ ಶ್ರೇಷ್ಠನು ಭಗವಾನ್ ಬುದ್ಧನೆಂದು ತೋರುತ್ತದೆ. ಎಲ್ಲಾ ಜೀವಿಗಳಲ್ಲಿ ದಯೆಯನ್ನು ಹೊಂದಿದ್ದ ಗೌತಮ ಬುದ್ಧನು ಮನುಷ್ಯರ ಬದುಕಿನ ದುಃಖಗಳನ್ನು ಕಂಡು ನೊಂದು ಅವುಗಳಿಂದ ಅವರು ಮುಕ್ತಿಯನ್ನು ಪಡೆಯಲು ಮಾರ್ಗವನ್ನು ಹುಡುಕಬೇಕೆಂದು ಅರಮನೆಯ ಸಕಲ ಸುಖ ಭೋಗಗಳನ್ನು ತ್ಯಜಿಸಿ ಕಷಾಯವಸ್ತ್ರವನ್ನು ಧರಿಸಿ ಸಂನ್ಯಾಸಿಯಾದನು. ಬೋಧಿವೃಕ್ಷದ ಕೆಳಗೆ ಕುಳಿತು ಜ್ಞಾನೋದಯವನ್ನು ಪಡೆದುಕೊಂಡನು. ಅವನು ಕಂಡುಕೊಂಡುದನ್ನು ಆರ್ಯಸತ್ಯಗಳು ಎನ್ನುತ್ತಾರೆ. ದುಃಖ, ದುಃಖದ ಕಾರಣ, ಅದರ ನಿರೋಧ ಮತ್ತು ಆ ದುಃಖ ನಿರೋಧಕ್ಕಾಗಿ ಅನುಸರಿಸಬೇಕಾದ ಮಾರ್ಗ –ಇವು ನಾಲ್ಕು ಆರ್ಯ ಸತ್ಯಗಳು. ಮುಪ್ಪು, ಸಾವು, ವ್ಯಾಧಿ, ಇಷ್ಟವಾದವರ ವಿಯೋಗ, ಅನಿಷ್ಟವಾದುದರ ಸಮಾಗಮ, ಆಕಾಂಕ್ಷಿತವಾದುದರ ಅಸಿದ್ಧಿ ಮುಂತಾದ ದುಃಖ ಯಾರಿಗೆ ಇಲ್ಲ? ಯಾರಿಗೆ ತಿಳಿದಿಲ್ಲ? ಅದನ್ನು ನಿವಾರಿಸಿಕೊಳ್ಳಬೇಕೆಂಬ ಇಚ್ಛೆ ಎಲ್ಲರಲ್ಲೂ ಇದೆ. ಅದರ ನಿವಾರಣೆಯೇ ಇಲ್ಲಿ ದುಃಖ ನಿರೋಧ ಎನಿಸಿಕೊಂಡಿದೆ. ಅದಕ್ಕಾಗಿ ಬುದ್ಧನು ಉಪದೇಶಿಸಿದ ದಾರಿಯೇ ಅಷ್ಟಾಂಗಮಾರ್ಗ.

ಸಮ್ಯಗ್‌ದೃಷ್ಟಿ, ಸಮ್ಯಕ್ ಸಂಕಲ್ಪ, ಸಮ್ಯಗ್ ವಚನ, ಸಮ್ಯಕ್‌ಕರ್ಮ, ಸಮ್ಯಗಾಜೀವ, ಸಮ್ಯಗ್ ವ್ಯಾಯಾಮ, ಸಮ್ಯಕ್ ಸ್ಮೃತಿ, ಸಮ್ಯಕ್ ಸಮಾಧಿ ಎಂಬ ಎಂಟು ಅಂಗಗಳನ್ನುಳ್ಳದ್ದು ಅಷ್ಟಾಂಗ ಮಾರ್ಗ. ಇದನ್ನು ಅಶ್ವಘೋಷ ವೆಂಬ ಕವಿಯು ಬುದ್ಧ ಚರಿತವೆಂಬ ಸಂಸ್ಕೃತ ಮಹಾಕಾವ್ಯದಲ್ಲಿ ಹೀಗೆ ಚಿತ್ರಿಸಿದ್ದಾನೆ –

ಸಂದರ್ಶನಾದಿತ್ಯ ರುಚಿಪ್ರಕಾಶಃ
ವಿಶುದ್ಧ ಸಂಕಲ್ಪ ರಥೋಪನೀತಃ॥
ಸಮ್ಯಕ್ ಸಮಾವಾದಿತವಾಗ್ವಿಹಾರಃ
ಶುಭ ಕ್ರಿಯಾರಾಮ ಸಭಾಭಿರಾಮಃ॥
ಅಗರ್ಹಿತಾ ಜೀವ ಮಹಾಸುಭಿಕ್ಷಃ
ಸಮ್ಯಕ್ ಪ್ರಯೋಗ ಪ್ರಬಲಾನುಯಾತ್ರಃ॥
ಸರ್ವತ್ರ ಸಮ್ಯಕ್ ಸ್ಮೃತಿಗುಪ್ತಿ ಗುಪ್ತಃ
ಸಮಾಧಿ ಶಯ್ಯಾಸನ ವಾಸಭೂಮಿಃ॥
ಇತ್ಯುತ್ತಮೋಷ್ಟಾಂಗ ಇಹೈಷ ಪಂಥಾಃ
ನಿರ್ವಾಹಕೋ ಮೃತ್ಯುಜರಾಮಯೇಭ್ಯ॥

ಸಂದರ್ಶನ ಎಂದರೆ ಸಮ್ಯಗ್ ದರ್ಶನ ಅಥವಾ ಸಮ್ಯಗ್‌ದೃಷ್ಟಿ. ಅದೇ ಸೂರ್ಯನಂತೆ ಬೆಳಕನ್ನು ಕೊಟ್ಟರೆ ಅದರಿಂದ ಅಷ್ಟಾಂಗ ಮಾರ್ಗವು ಪ್ರಕಾಶಿತವಾಗಿ ಕಣ್ಣಿಗೆ ಗೋಚರವಾಗುತ್ತದೆ.

ವಿಶುದ್ಧ ಸಂಕಲ್ಪ ಎಂದರೆ ಸಮ್ಯಕ್ ಸಂಕಲ್ಪ. ಅದು ರಥದಂತೆ ಮುಕ್ತಿ ಮಾರ್ಗವನ್ನು ಸಾಧಕನ ಬಳಿಗೆ ತರುತ್ತದೆ. ಸಮ್ಯಗ್ ವಚನ ಎಂದರೆ ಒಳ್ಳೆಯ ಮಾತು. ಅದರಿಂದಲೇ ವಾಗ್‌ವ್ಯವಹಾರವನ್ನು ನಡೆಸಬೇಕು. ಶುಭ ಕ್ರಿಯಾ ಎಂದರೆ ಸಮ್ಯಕ್ ಕರ್ಮ. ಅದರಿಂದ ಎಲ್ಲರಿಗೂ ವ್ಯಕ್ತಿಯು ಪ್ರಿಯನಾಗುತ್ತಾನೆ. ಸಮ್ಯಗಾಜೀವ ಎಂದರೆ ಯೋಗ್ಯವಾದ ವೃತ್ತಿಯನ್ನು ಆಶ್ರಯಿಸುವುದು. ಸಮ್ಯಕ್ ಪ್ರಯೋಗವೇ ಸಮ್ಯಗ್ ವ್ಯಾಯಾಮ. ಇದು ದೇಹದ ಸುಸ್ಥಿತಿಗೆ ಕಾರಣ. ಸಮ್ಯಕ್ ಸ್ಮೃತಿಯು ಸಾಧಕನನ್ನು ಬೇಲಿಯಂತೆ ಕಾಯುತ್ತದೆ. ಸಮ್ಯಕ್ ಸಮಾಧಿ ಮಾರ್ಗದ ಅಂತಿಮ ಘಟ್ಟ ಎಂಬುದು ಅಶ್ವಘೋಷನು ಹೇಳಿದ ಶ್ಲೋಕಗಳ ತಾತ್ಪರ್ಯ.

ಬುದ್ಧನು ಉಪದೇಶಿಸಿದ ಅಷ್ಟಾಂಗ ಮಾರ್ಗವು ಕೇವಲ ಬೌದ್ಧರಿಗೆ ಅನ್ವಯಿಸುವುದಲ್ಲ. ನಾವು ಯಾವ ಧರ್ಮದ ಅನುಯಾಯಿಗಳಾದರೂ ಈ ತತ್ತ್ವಗಳು ಹಿತಕರವೇ ಆಗಿವೆ. ಸಮ್ಯಗ್ ದೃಷ್ಟಿ ಅಥವಾ ಸಮ್ಯಗ್ ದರ್ಶನವೆಂದರೆ ವಿಶ್ವವು ಯಥಾರ್ಥವಾಗಿ ಹೇಗಿದೆಯೋ ಹಾಗೆ ಅದನ್ನು ಕಂಡುಕೊಳ್ಳಬೇಕು.ನಮ್ಮ ಎಲ್ಲಾ ನೋವುಗಳಿಗೆ ಮತ್ತು ತೊಂದರೆಗಳಿಗೆ ಅಯಥಾರ್ಥ ಜ್ಞಾನವೇ ಕಾರಣ. ಇದನ್ನೇ ಶಾಸ್ತ್ರಕಾರರು ಅವಿದ್ಯೆ ಎಂದು ಕರೆದಿದ್ದಾರೆ. ಆಸ್ತಿಕರಾಗಲಿ ನಾಸ್ತಿಕರಾಗಲಿ, ಯಾರೂ ಅವಿದ್ಯೆಯಿಂದ ನಮಗೆ ಒಳ್ಳೆಯದಾಗುವುದೆಂದು ಹೇಳುವುದಿಲ್ಲ. ಅವಿದ್ಯಾನಾಶೋ ಮೋಕ್ಷಃ (ತಪ್ಪು ತಿಳಿವಳಿಕೆಯನ್ನು ಹೋಗಲಾಡಿಸಿ ಕೊಳ್ಳುವುದೇ ಮೋಕ್ಷ) ಎಂಬುದು ಎಲ್ಲರಿಗೂ ಸಮ್ಮತವಾದ ತತ್ತ್ವ. ಜೈನ ದರ್ಶನದಲ್ಲೂ ಸಮ್ಯಗ್ ದರ್ಶನವನ್ನು ರತ್ನತ್ರಯದಲ್ಲಿ ಒಂದೆಂದು ಹೇಳಿದ್ದಾರೆ. ಒಳ್ಳೆಯ ಕಾರ್ಯಗಳು ಯಾವುವು, ಕೆಟ್ಟ ಕಾರ್ಯಗಳು ಯಾವುವು ಎಂಬುದನ್ನು ಸರಿಯಾಗಿ ಅರಿತುಕೊಳ್ಳುವುದು ಸಮ್ಯಗ್‌ದೃಷ್ಟಿ. ಹಿಂಸೆ ಕೆಟ್ಟದ್ದು, ಅಹಿಂಸೆ ಒಳ್ಳೆಯದು, ಕ್ರೌರ್ಯ ಕೆಟ್ಟದ್ದು, ದಯೆ ಒಳ್ಳೆಯದು ಎಂಬ ಬಗೆಗೆ ಯಾವ ಧರ್ಮದಲ್ಲೂ ಭಿನ್ನಾಭಿಪ್ರಾಯವಿಲ್ಲ.

ಸಮ್ಯಕ್ ಸಂಕಲ್ಪ ಎಲ್ಲರಿಗೂ ಆವಶ್ಯಕ. ನಮ್ಮ ಬದುಕು ನಮ್ಮ ಸಂಕಲ್ಪಗಳನ್ನು ಅವಲಂಬಿಸಿದೆ. ನಾನು ಡಾಕ್ಟರ್ ಆಗಿ ಜನ ಸೇವೆಯನ್ನು ಮಾಡುತ್ತೇನೆ ಎಂದು ಒಬ್ಬನು ನಿಶ್ಚಯ ಮಾಡಿಕೊಂಡು ಅದಕ್ಕಾಗಿ ದುಡಿದರೆ ಆ ನಿಶ್ಚಯ ಸಮ್ಯಕ್ ಸಂಕಲ್ಪ. ಯಾವುದೇ ಮಾರ್ಗವಾದರೂ ಸರಿ, ಅದರಿಂದ ನಾನು ಶ್ರೀಮಂತನಾಗುತ್ತೇನೆ ಎಂದು ನಿಶ್ಚಯ ಮಾಡಿದರೆ ಅದು ಸಮ್ಯಕ್ ಸಂಕಲ್ಪ ಅಲ್ಲ, ತನಗೂ ಇತರರಿಗೂ ಹಿತವಾಗುವ ಕಾರ್ಯಗಳನ್ನು ಮಾಡುವ ಸಂಕಲ್ಪಗಳನ್ನು ಮಾಡಬೇಕು.

ಸಮ್ಯಗ್ ವಚನ ಎಂದರೆ ಒಳ್ಳೆಯ ಮಾತು. ಇದನ್ನು ಸಂಸ್ಕೃತದಲ್ಲಿ ಸೂನೃತ ಎನ್ನುತ್ತಾರೆ. ಸತ್ಯವಾದ ಮತ್ತು ಪ್ರಿಯವಾದ ಮಾತು ಸೂನೃತ. ಸತ್ಯವನ್ನು ಹೇಳುವಾಗಲೂ ಅದು ಕೇಳುವವರಿಗೆ ಅಪ್ರಿಯವಾಗುವಂತೆ ಹೇಳಬಾರದು. ಯಾರಿಗೋ ಪ್ರಿಯವಾಗುವುದೆಂದು ಅಸತ್ಯವನ್ನು ನುಡಿಯಬಾರದು. ಈ ಸಮ್ಯಗ್‌ವಚನವನ್ನೇ ಭಗವದ್ಗೀತೆಯು ವಾಙ್ಮಯ ತಪಸ್ಸು ಎಂದು ಕರೆದಿದೆ. ಇದನ್ನು ಎಲ್ಲರೂ ಪಾಲಿಸಿದರೆ ಶಾಂತಿ ನೆಲೆಸುತ್ತದೆ.

ಸಮ್ಯಕ್ ಕರ್ಮ ಎಂದರೆ ಯಾವ ಜೀವಕ್ಕೂ ಹಿಂಸೆಯಾಗದ ಕೆಲಸವನ್ನು ಮಾತ್ರ ಮಾಡುವುದು. ಕಳ್ಳತನವನ್ನೇ ತನ್ನ ಕೆಲಸವನ್ನು ಮಾಡಿಕೊಂಡರೆ ಅದು ಸಮ್ಯಕ್‌ಕರ್ಮ ಆಗಲಾರದು. ಅನೇಕ ಕಾರ್ಯಗಳು ತಪ್ಪೆಂದು ಎಲ್ಲರಿಗೂ ಗೊತ್ತು. ಲಂಚ ತೆಗೆದುಕೊಳ್ಳುವುದು ತಪ್ಪೆಂದು ಯಾರಿಗೆ ಗೊತ್ತಿಲ್ಲ? ವಂಚನೆ ಮಾಡುವುದು ಸರಿ ಎಂದು ಯಾರು ಹೇಳಿದ್ದಾರೆ? ಆದರೂ ಆಶಾಪ್ರೇರಿತರಾಗಿ ಅನೇಕರು ಈ ರೀತಿಯಾದ ಕಾರ್ಯಗಳನ್ನು ಮಾಡುತ್ತಾರೆ. ಅವುಗಳನ್ನು ವರ್ಜಿಸುವುದು ಮತ್ತು ಧರ್ಮಾನುಗುಣವಾದ ಕೆಲಸಗಳನ್ನು ಮಾತ್ರ ಮಾಡುವುದು ಸಮ್ಯಕ್ ಕರ್ಮ. ಧೂಮಪಾನ, ಮದ್ಯಪಾನ, ವ್ಯಭಿಚಾರ ಮುಂತಾದವು ಸಮ್ಯಕ್ ಕರ್ಮಗಳಲ್ಲ. ಇದು ಎಲ್ಲರಿಗೂ ತಿಳಿದಿದ್ದರೂ ದುರಭ್ಯಾಸಕ್ಕೆ, ದುರಾಶೆಗೆ ವಶರಾದವರು ಇವುಗಳಲ್ಲಿ ತೊಡಗಿರುತ್ತಾರೆ. ಇವೆಲ್ಲ ಶೀಲಕ್ಕೆ ವಿರುದ್ಧವಾದವು. ಶೀಲಕ್ಕೆ ಅನುಗುಣವಾದ ಕರ್ಮಗಳು ಸಮ್ಯಕ್‌ಕರ್ಮ. ನಾವು ಮಾಡಿದ ಕರ್ಮಗಳಿಗೆ ತಕ್ಕ ಫಲವನ್ನು ಮುಂದೆ ನಾವೇ ಅನುಭವಿಸುತ್ತೇವೆ ಎಂಬುದನ್ನು ಬುದ್ಧನು ಒಪ್ಪಿದ್ದಾನೆ.

ಸಮ್ಯಗಾಜೀವ ಎಂಬುದು ಅಷ್ಟಾಂಗಗಳಲ್ಲಿ ಮುಖ್ಯವಾದುದು. ಬದುಕಿನ ನಿರ್ವಹಣೆಗಾಗಿ ಮನುಷ್ಯನು ಹಿಡಿಯುವ ವೃತ್ತಿಗೆ ಆಜೀವ ಎನ್ನುತ್ತಾರೆ. ಅದನ್ನು ಆರಿಸಿಕೊಳ್ಳುವಾಗಲೂ ಎಚ್ಚರಿಕೆ ಇರಬೇಕು. ಹಿಂಸೆ, ವಂಚನೆ, ದುಷ್ಟ ವರ್ತನೆ ಕೆಲವು ವೃತ್ತಿಗಳಲ್ಲಿ ಅವಿನಾಭಾವ ಸಂಬಂಧದಿಂದ ಸೇರಿಕೊಂಡಿರುತ್ತವೆ. ರೇಷ್ಮೆ ನೂಲನ್ನು ಉತ್ಪಾದಿಸುವ ವೃತ್ತಿಯಲ್ಲಿ ದಿನವೂ ನೂರಾರು ಹುಳುಗಳನ್ನು ಕುದಿಯುವ ನೀರಿನಲ್ಲಿ ಹಾಕಿ ಕೊಲ್ಲುವ ಕಾರ್ಯ ಸೇರಿಕೊಂಡೇ ಇರುತ್ತದೆ. ಜೇನನ್ನು ಸಂಗ್ರಹಿಸುವ ವೃತ್ತಿಯಲ್ಲಿ ಕಳ್ಳತನ ಅನಿವಾರ್ಯವಲ್ಲವೆ? ಅಂತಹ ವೃತ್ತಿಗಳನ್ನು ಆರಿಸಿಕೊಳ್ಳದೆ ನಿರ್ದೋಷವಾದ ವೃತ್ತಿಗಳನ್ನು ಆರಿಸಿಕೊಂಡು ಜೀವಿಸುವುದು ಸಮ್ಯಗಾಜೀವ. ಯಾವುದೋ ಉದ್ಯೋಗ ಸಿಕ್ಕಿದರೆ ಸಾಕು ಎಂಬ ಭಾವನೆ ಇರುವ ಈ ಕಾಲದಲ್ಲಿ ಸಮ್ಯಗಾಜೀವ ಯಾರಿಗೆ ಸಿಕ್ಕಿರುವುದೋ ಅವರು ಅದೃಷ್ಟವಂತರೆನ್ನಬೇಕು.

ಮುಂದಿನದು ಸಮ್ಯಗ್ ವ್ಯಾಯಾಮ. ಇದು ಕೇವಲ ಶಾರೀರಕ್ರಿಯೆ ಎಂದು ತಿಳಿದುಕೊಳ್ಳಬಾರದು. ಮಾನಸಿಕವಾಗಿ ಮತ್ತು ಬೌದ್ಧಿಕವಾಗಿ ಮಾಡುವ ಸತತ ಪ್ರಯತ್ನವನ್ನಿಲ್ಲಿ ವ್ಯಾಯಾಮವೆಂದು ಕರೆದಿದ್ದಾರೆ. ಸಾಧನೆಯನ್ನು ಮಾಡುತ್ತಿದ್ದರೂ ಒಳಗೆ ನುಗ್ಗುವ ಪರಹಿಂಸಾದಿಗಳನ್ನು ತಡೆಯಲು ಮತ್ತು ತೊಡೆದು ಹಾಕಲು ಇಂತಹ ಪ್ರಯತ್ನ ಆವಶ್ಯಕ. ಇರುವ ದೋಷಗಳನ್ನು ನಿವಾರಿಸಿಕೊಳ್ಳಬೇಕು, ಹೊಸ ದೋಷಗಳು ಬರದಂತೆ ಎಚ್ಚರಿಕೆ ವಹಿಸಬೇಕು, ಒಳ್ಳೆಯ ಭಾವನೆಗಳು ದೃಢವಾಗಿ ಒಲಿಯುವಂತೆ ಮಾಡಬೇಕು. ಇದಕ್ಕಾಗಿ ಮಾಡುವ ಸತತ ಪ್ರಯತ್ನ ಸಮ್ಯಗ್ ವ್ಯಾಯಾಮ.

ಮುಂದಿನದು (ಏಳನೆಯದು ಸಮ್ಯಕ್ ಸ್ಮೃತಿ, ವಸ್ತುಗಳ ವಾಸ್ತವ ರೂಪವನ್ನು ಸದಾ ಸ್ಮರಿಸಿಕೊಳ್ಳುವುದು ಸಮ್ಯಕ್ ಸ್ಮೃತಿ. ದೇಹವು ಕಣ್ಣಿಗೆ ಸುಂದರವಾಗಿ, ಆಕರ್ಷಕವಾಗಿ ಕಾಣಿಸಬಹುದು. ಆದರೆ ಅದು ರಕ್ತ, ಮಾಂಸ, ಎಲುಬುಗಳ ರಾಶಿ. ಅಧ್ಯಾತ್ಮ ಸಾಧಕನು ಅದನ್ನು ಸದಾ ಸ್ಮರಿಸುತ್ತಿರಬೇಕು. ಆಗಲೇ ವೈರಾಗ್ಯ ದೃಢವಾಗುವುದು. ಇದನ್ನು ಕಾಯಾನುಪಶ್ಯನಾ ಎನ್ನುತ್ತಾರೆ. ಸುಖ, ದುಃಖ, ಇವೆರಡೂ ಅಲ್ಲದ ಸ್ಥಿತಿ–ಎಂಬ ಮೂರನ್ನು ಸ್ಮರಿಸಿಕೊಳ್ಳುವ ಕ್ರಿಯೆಯನ್ನು ವೇದಾನಾನುಪಸ್ಯನಾ ಎನ್ನುತ್ತಾರೆ. ಚಿತ್ತದಲ್ಲಿ ಆಗಾಗ ಮೋಹ ಉಂಟಾಗ ಬಹುದು. ಕೆಲವೊಮ್ಮೆ ನಿರ್ಮೋಹತ್ವ ಬರಬಹುದು. ಹೀಗೆ ಸ್ವಚಿತ್ತದ ನಾನಾವಸ್ಥೆಗಳನ್ನು ತಿಳಿದುಕೊಳ್ಳುವುದು ಚಿತ್ತನುಪಶ್ಯನಾ. ನಾನಾ ಪ್ರಕಾರವಾದ ಧರ್ಮದ ಜ್ಞಾನವು ಧರ್ಮಾನುಪಶ್ಯನಾ ಇವುಗಳನ್ನೆಲ್ಲ ಸದಾ ಸ್ಮರಿಸಿಕೊಳ್ಳುತ್ತಿರುವುದು ಸಮ್ಯಕ್‌ಸ್ಮೃತಿ.

ಅಷ್ಟಾಂಗಗಳಲ್ಲಿ ಕೊನೆಯದು (ಎಂಟನೆಯದು) ಸಮ್ಯಕ್ ಸಮಾಧಿ. ಮೊದಲನೆಯ ಏಳು ಸಾಧನಾವಸ್ಥೆಯನ್ನು ಸೂಚಿಸಿದರೆ ಕೊನೆಯದು ಸಿದ್ಧಿಯನ್ನು ಸೂಚಿಸುತ್ತದೆ. ಯೋಗಶ್ಚಿತ್ತ ವೃತ್ತಿ ನಿರೋಧ ಎಂದು ಮಹರ್ಷಿ ಪತಂಜಲಿ ಹೇಳಿದರೆ ಭಾಷ್ಯಕಾರ ವ್ಯಾಸನು ಯೋಗಃ ಸಮಾಧಿ ಎಂದು ವ್ಯಾಖ್ಯಾನಿಸಿದ್ದಾನೆ. ಸಮ್ಯಕ್ ಸಮಾಧಿಯನ್ನು ಹೊಂದಿದವನು ಅರ್ಹನ್. ಅವನಿರುವ ಸ್ಥಿತಿಯೇ ನಿರ್ವಾಣ.

ಜಗತ್ತಿನ ಪ್ರತಿಯೊಬ್ಬ ಮಾನವನೂ ನಿರ್ವಾಣವನ್ನು ಹೊಂದಲಿ ಎಂಬುದು ಬುದ್ಧನ ಆಶೀರ್ವಾದ. ಪ್ರತಿಯೊಬ್ಬನಿಗೂ ಅರ್ಹನ್ ಆಗಲು ಅರ್ಹತೆಯಿದೆ. ಆದರೆ ಕೋಟಿಗೆ ಒಬ್ಬನಾದರೂ ಹಾಗೆ ಆಗುವನೆ? ಎಂಬುದು ಪ್ರಶ್ನೆಯೇ ಆಗಿ ಉಳಿಯುತ್ತದೆ. ಬೌದ್ಧಮತವೇ ನಮ್ಮ ಧರ್ಮ ಎಂದು ಹೇಳಿಕೊಳ್ಳುವ, ಬುದ್ಧನನ್ನೇ ಪೂಜಿಸುವ ದೇಶಗಳಲ್ಲಿಯೂ ಮನುಷ್ಯರ ಸ್ವಾರ್ಥ, ಹಿಂಸಾಕಾರ್ಯ, ನಿಷಿದ್ಧ ಕಾರ್ಯಾಚರಣೆ ಇತ್ಯಾದಿ ಯಾವುದೂ ನಿಂತಿಲ್ಲ. ಬೌದ್ಧನಾಗುವುದೆಂದರೆ ಬುದ್ಧನನ್ನು ಪೂಜಿಸುವುದು, ಬುದ್ಧವಿಹಾರಗಳಿಗೆ ಹೋಗುವುದು ಮಾತ್ರವಲ್ಲ. ಬುದ್ಧನು ಹೇಳಿದ ಅಷ್ಟಾಂಗ ಮಾರ್ಗವನ್ನು ಬದುಕಿನಲ್ಲಿ ಪ್ರಾಮಾಣಿಕವಾಗಿ ಅಳವಡಿಸಿಕೊಳ್ಳುವುದೂ ಅದರಲ್ಲಿ ಸೇರಿದೆ. ಹಾಗೆ ಮಾಡಿದರೆ ಆ ಮಹಾನುಭಾವನಿಗೆ ನಾವು ಯೋಗ್ಯ ಅನುಯಾಯಿಗಳಾಗಬಹುದು.

ಬುದ್ಧಂ ಶರಣಂ ಗಚ್ಛಾಮಿ ।
ಸಂಘಂ ಶರಣಂ ಗಚ್ಛಾಮಿ ।
ಧರ್ಮಂ ಶರಣಂ ಗಚ್ಛಾಮಿ ॥

ಕೊಲ್ಕತ್ತಾದ ಸೇವಂತಿಗೆಯಿಂದ ರೂಪುಗೊಳ್ಳಲಿದೆ 'ಚಂದ್ರಯಾನ–3'

● ದಸರಾ ಫಲಪುಷ್ಪ ಪ್ರದರ್ಶನದಲ್ಲಿ ಮೇಳೈಸಲಿದೆ ಪುಷ್ಪಲೋಕದ ವೈಭವ ● ವಿಶ್ವಕಪ್ ಕ್ರಿಕೆಟ್‌ಗಾಗಿ ಗೆದ್ದು ಬಾ ಇಂಡಿಯಾ ಆಕೃತಿ ನಿರ್ಮಾಣ ● ಸಂವಿಧಾನ ಪೀಠಿಕೆ, ಕರ್ನಾಟಕ–50 ಸೆಲ್ಫಿ ಪಾಯಿಂಟ್

■ ಎಂ.ಟಿ.ಯೋಗೇಶ್‌ಕುಮಾರ್

ಮೈಸೂರು, ಸೆ.21– ದಸರಾ ಮಹೋತ್ಸವದ ಮತ್ತೊಂದು ಪ್ರಮುಖ ಆಕರ್ಷಣೆ ದಸರಾ ಫಲಪುಷ್ಪ ಪ್ರದರ್ಶನ. ಈ ಬಾರಿ ಗಾಜಿನ ಮನೆಯಲ್ಲಿ 3 ಲಕ್ಷ ಕೊಲ್ಕತ್ತಾ ಸೇವಂತಿ ಹೂವಿನಿಂದ ರಾಕೆಟ್ ಹಾಗೂ ಪ್ರಜ್ಞಾನ್ ರೋವರ್‌ನೊಂದಿಗೆ 'ಚಂದ್ರಯಾನ–3' ರೂಪುಗೊಳ್ಳಲಿದೆ.



ದಸರಾ ಫಲಪುಷ್ಪ ಪ್ರದರ್ಶನಕ್ಕೆ ಈಗಾಗಲೇ ಸಿದ್ಧತೆ ಭರದಿಂದ ಸಾಗಿದ್ದು, ಈ ಬಾರಿ 1.35 ಕೋಟಿ ರೂ.ಗೆ ಫಲಪುಷ್ಪ ಪ್ರದರ್ಶನದ ಟೆಂಡರ್ ಕರೆಯಲಾಗಿದೆ. ತೋಟಗಾರಿಕಾ ಇಲಾಖೆ ಹಾಗೂ ತೋಟಗಾರಿಕಾ ಸಂಘದ ಸಹಯೋಗದಲ್ಲಿ ಪ್ರತಿ ವರ್ಷದಂತೆ ಈ ಬಾರಿಯೂ ಫಲಪುಷ್ಪ ಪ್ರದರ್ಶನ ನಡೆಯುತ್ತಿದ್ದು, ಆಕರ್ಷಣೆಯೊಂದಿಗೆ ಶೈಕ್ಷಣಿಕ ಮಹತ್ವವನ್ನು ಈ ಬಾರಿಯ ಫಲಪುಷ್ಪ ಪ್ರದರ್ಶನ ಸಾರುವ ನಿಟ್ಟಿನಲ್ಲಿ ರೂಪಿಸಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.

ಕೊಲ್ಕತ್ತಾ ಸೇವಂತಿಯಿಂದ ಚಂದ್ರಯಾನ: ದಸರಾ ಫಲಪುಷ್ಪ ಪ್ರದರ್ಶನದಲ್ಲಿ ಗಾಜಿನಮನೆಯಲ್ಲಿ ಪ್ರತಿ ವರ್ಷವೂ ಒಂದೊಂದು ಆಕೃತಿಗಳು ಹೂವಿನಿಂದಲೇ ಅರಳುವುದು ವಿಶೇಷ. ಈ ಬಾರಿ ಚಂದ್ರಲೋಕದ ಭಾರತಯಾನ ಬಿಂಬಿಸುವ 'ಚಂದ್ರಯಾನ–3' ಗಾಜಿನ ಮನೆಯಲ್ಲಿ ಅರಳುವುದರೊಂದಿಗೆ ಆಕರ್ಷಣೀಯ ಕೇಂದ್ರ ಬಿಂದುವಾಗಲಿದೆ. ಇದಕ್ಕಾಗಿ ಕೊಲ್ಕತ್ತಾದ ಸೇವಂತಿ ಹೂವನ್ನೇ ಬಳಸಲು ಉದ್ದೇಶಿಸಿರುವುದು ಮತ್ತೊಂದು ವಿಶೇಷ. ಹೆಚ್ಚು ದಿನ ತಾಜಾತನ ಕಾಪಾಡಿಕೊಳ್ಳುವ ಏಕೈಕ ಕಾರಣದಿಂದ ಕೊಲ್ಕತ್ತಾದ ಸೇವಂತಿ ಹೂವಿನಿಂದ ಚಂದ್ರಯಾನ ಆಕೃತಿ ಈ ಬಾರಿ ದಸರಾ ಫಲಪುಷ್ಪ ಪ್ರದರ್ಶನದಲ್ಲಿ ಮೈದಳೆಯಲಿದೆ.

ಬಿಳಿ ಬಣ್ಣದ ಹೂವಿನಿಂದ ಚಂದ್ರಯಾನದ ದೃಶ್ಯ ಬಿಂಬಿಸಲಾಗುತ್ತದೆ. ಅದರ ಪಕ್ಕ 18 ಅಡಿ ಎತ್ತರ ರಾಕೆಟ್, ಪ್ರಜ್ಞಾನ್ ರೋವರ್ ಲ್ಯಾಂಡ್ ಆಗಿರುವಂತೆ ಹೂವುಗಳಿಂದಲೇ ರೂಪುಗೊಳಿಸಲಾಗುತ್ತದೆ. ಫಲಪುಷ್ಪ ಪ್ರದರ್ಶನ ಕೇವಲ ಮನರಂಜನೆಗೆ ಮಾತ್ರ ಸೀಮಿತಗೊಳ್ಳದೆ, ಮಾಹಿತಿ ಕೇಂದ್ರವಾಗಿಸುವ ನಿಟ್ಟಿನಲ್ಲಿ ಇಸ್ರೋ ವಿಜ್ಞಾನಿಗಳ ಸಾಧನೆಯ ಮಹತ್ವವನ್ನು ಬಿಂಬಿಸಲಾಗುತ್ತದೆ. ಒಟ್ಟು ಮೂರು ಲಕ್ಷ ಹೂವುಗಳನ್ನು ಬಳಸಿ ಚಂದ್ರಯಾನ–3 ಸೃಷ್ಟಿಸಲಾಗುತ್ತಿದ್ದು, ಗಾಜಿನ ಮನೆಯಲ್ಲಿ ಅರಳುವ ಚಂದ್ರಯಾನ ವೀಕ್ಷಣೆಗೆ ಮೈಸೂರಿಗರು ತುದಿಗಾಲಲ್ಲಿ ನಿಲ್ಲುವಂತೆ ಮಾಡಿದೆ. ಅಲ್ಲದೆ, ಫಲಪುಷ್ಪ ಪ್ರದರ್ಶನಕ್ಕೆ ಬೇಕಾದ ಕೊಲ್ಕತ್ತಾ ಸೇವಂತಿಗೆ ಸರಬರಾಜು ಮಾಡಲು ಕೊಲ್ಕತ್ತಾದ ಕೆಲವು ಸಂಸ್ಥೆಗಳು ಮುಂದೆ ಬಂದಿದ್ದರೂ, ಇ–ಹರಾಜು ಮೂಲಕ ಟೆಂಡರ್ ನೀಡಲು ಸಮ್ಮತಿಸಲಾಗಿದೆ.

ಸಂವಿಧಾನ ಪೀಠಿಕೆ: ಈ ಬಾರಿ ರಾಜ್ಯದಲ್ಲಿ ಪ್ರಜಾಪ್ರಭುತ್ವದ ದಿನದ ಕಾರ್ಯಕ್ರಮದಲ್ಲಿ ಎಲ್ಲೆಡೆ ಸಂವಿಧಾನ ಪೀಠಿಕೆ ಓದುವ ಕಾರ್ಯಕ್ರಮ ದಾಖಲೆ ಬರೆದ ಹಿನ್ನೆಲೆಯಲ್ಲಿ ಈ ಬಾರಿ ದಸರಾ ಫಲಪುಷ್ಪ ಪ್ರದರ್ಶನದಲ್ಲಿ ಕನ್ನಡ ಮತ್ತು ಇಂಗ್ಲೀಷ್ ಭಾಷೆಯಲ್ಲಿ ಸಂವಿಧಾನ ಪೀಠಿಕೆಯುಳ್ಳ ಸೆಲ್ಫಿ ಪಾಯಿಂಟ್ ನಿರ್ಮಾಣಕ್ಕೂ ನಿರ್ಧರಿಸಲಾಗಿದೆ. ಇದರಿಂದ ಸಂವಿಧಾನ ಪೀಠಿಕೆ ಮಹತ್ವ ಜನರಿಗೆ ಸಾರಲು ಸಹಕಾರಿಯಾಗಲಿದೆ.

ಗೆದ್ದು ಬಾ ಇಂಡಿಯಾ: ಭಾರತ ಆತಿಥ್ಯ ವಹಿಸಿರುವ 13ನೇ ವಿಶ್ವಕಪ್ ಕ್ರಿಕೆಟ್ ಪಂದ್ಯಾವಳಿ ಅ.5ರಿಂದ ನ.19ರವರೆಗೆ ನಡೆಯಲಿದ್ದು, ಈ ಹಿನ್ನೆಲೆಯಲ್ಲಿ ಭಾರತ ತಂಡವನ್ನು ಹುರಿದುಂಬಿಸುವ ನಿಟ್ಟಿನಲ್ಲಿ ದಸರಾ ಫಲಪುಷ್ಪ ಪ್ರದರ್ಶನದಲ್ಲಿ 'ಗೆದ್ದು ಬಾ ಇಂಡಿಯಾ' ಶೀರ್ಷಿಕೆಯಡಿ ಹೂವಿನಿಂದಲೇ ಕೆಲವು ಆಕೃತಿ ನಿರ್ಮಿಸಲಾಗುತ್ತದೆ. ಕ್ರಿಕೆಟ್ ಬ್ಯಾಟ್, ಬಾಲ್, ವಿಕೆಟ್‌ಗಳನ್ನು ಹೂವಿನಿಂದಲೇ ನಿರ್ಮಿಸಿ, ಕುಪ್ಪಣ್ಣ ಪಾರ್ಕ್‌ನಲ್ಲಿಡಲಾಗುತ್ತದೆ. ಕ್ರೀಡೆಗೆ ಉತ್ತೇಜನ ನೀಡುವುದರೊಂದಿಗೆ ವಿಶ್ವಕಪ್‌ನಲ್ಲಿ ಭಾರತ ಸಾಧನೆ ಮಾಡಲೆಂದು ಶುಭ ಕೋರಲು ಹೂವಿನ ಆಕೃತಿ ತಲೆ ಎತ್ತಲಿದೆ.

20 ಅಡಿ ಎತ್ತರದ ಚಾಮುಂಡೇಶ್ವರಿ ವಿಗ್ರಹ: ಫಲಪುಷ್ಪ ಪ್ರದರ್ಶನ ಹೆಬ್ಬಾಗಿಲಲ್ಲಿ ಈ ಬಾರಿ 20 ಅಡಿ ಎತ್ತರದ ಚಾಮುಂಡೇಶ್ವರಿ ಮೂರ್ತಿಯನ್ನು ಹೂವಿನಿಂದಲೇ ಪ್ರತಿಷ್ಠಾಪಿಸಲಾಗುತ್ತದೆ. ಫಲಪುಷ್ಪ ಪ್ರದರ್ಶನ ವೀಕ್ಷಣೆಗೆ ಬರುವ ಪ್ರವಾಸಿಗರಲ್ಲಿ ಚಾಮುಂಡೇಶ್ವರಿ ಮೂರ್ತಿ ಭಕ್ತಿಯನ್ನು ಇಮ್ಮಡಿಗೊಳಿಸಲಿದೆ.

ಅ.3ಕ್ಕೆ ಫೈನಾನ್ಸಿಯಲ್ ಬಿಡ್ ಓಪನ್: ಈ ಬಾರಿ ದಸರಾ ಮಹೋತ್ಸವ ಅ.15ರಿಂದ 24ರವರೆಗೆ ನಡೆಯಲಿದ್ದು, ಫಲಪುಷ್ಪ ಪ್ರದರ್ಶನ ಟೆಂಡರ್ ಕರೆಯಲಾಗಿದೆ. ಸೆ.29ರವರೆಗೆ ಟೆಂಡರ್ ಪಡೆಯಲು ಅರ್ಜಿ ಸಲ್ಲಿಸಬಹುದಾಗಿದೆ. ತೋಟಗಾರಿಕಾ ಇಲಾಖೆ 1.35 ಕೋಟಿ ರೂ. ಮೊತ್ತಕ್ಕೆ ಟೆಂಡರ್ ಕರೆದಿದೆ. ಅ.3ರಂದು ಟೆಂಡರ್ ತೆರೆಯಲು ದಿನಾಂಕ ನಿಗದಿ ಮಾಡಿದ್ದು, ಯಾರು ಹೆಚ್ಚು ಮೊತ್ತಕ್ಕೆ ಟೆಂಡರ್ ಬಿಡ್ ಕೂಗಿರುತ್ತಾರೋ ಅವರಿಗೆ ಫಲಪುಷ್ಪ ಪ್ರದರ್ಶನ ಉಸ್ತುವಾರಿ ಲಭಿಸಲಿದೆ. ಅಲ್ಲದೆ, ಅ.12 ಅಥವಾ 13ರೊಳಗೆ ಫಲಪುಷ್ಪ ಪ್ರದರ್ಶನ ಪೂರ್ಣ ಪ್ರಮಾಣದ ಸಿದ್ಧತೆ ನಡೆಸುವುದಕ್ಕಾಗಿ ಈಗಾಗಲೇ ಸಿದ್ಧತಾ ಕಾರ್ಯ ಭರದಿಂದ ನಡೆಸಲಾಗುತ್ತಿದೆ.

ಫ್ರೀ ಬಸ್ ಎಫೆಕ್ಟ್, ಹೆಚ್ಚು ಜನರ ನಿರೀಕ್ಷೆ: ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಗಳಲ್ಲಿ ಒಂದಾದ ಮಹಿಳೆಯರಿಗೆ ಸಾರಿಗೆ ಸಂಸ್ಥೆಗಳ ಬಸ್‌ನಲ್ಲಿ ಉಚಿತ ಪ್ರಯಾಣದ ಶಕ್ತಿ ಯೋಜನೆಯಿಂದಾಗಿ ಈ ಬಾರಿ ದಸರಾ ಮಹೋತ್ಸವಕ್ಕೆ ಹೆಚ್ಚಿನ ಜನರ ಆಗಮನದ ನಿರೀಕ್ಷೆಯಿದ್ದು, ಫಲಪುಷ್ಪ ಪ್ರದರ್ಶನವೂ ತುಂಬಿ ತುಳುಕುವುದು ಖಚಿತ. ಈ ಕಾರಣದಿಂದ ಈ ಬಾರಿ ಹೆಚ್ಚುವರಿ ಭದ್ರತಾ ಸಿಬ್ಬಂದಿಗಳನ್ನು ನಿಯೋಜಿಸಲಾಗುತ್ತಿದೆ. ಜಿಲ್ಲಾ ತೋಟಗಾರಿಕಾ ಸಂಘದ ಅಧ್ಯಕ್ಷರೂ ಹಾಗೂ ಜಿ.ಪಂ ಸಿಇಓ ಗಾಯತ್ರಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸಂಘದ ಕಾರ್ಯದರ್ಶಿ ವಿಜಯಕುಮಾರಿ, ಖಜಾಂಚಿ ಶಶಿಕಲಾ ನಾಗರಾಜ್, ಹಿರಿಯ ಸಹಾಯಕ ನಿರ್ದೇಶಕಿ ಬಿ.ಎನ್. ಸುವೇಧ, ಸಹಾಯಕ ನಿರ್ದೇಶಕ ನವೀನ್ ಕುಮಾರ್ ಹಾಗೂ ಇನ್ನಿತರರು ಇದ್ದ ಸಭೆಯಲ್ಲಿ ಹೆಚ್ಚಿನ ಭದ್ರತಾ ಸಿಬ್ಬಂದಿ ನಿಯೋಜನೆಗೆ ನಿರ್ಧರಿಸಲಾಗಿದೆ.



ದಸರಾ ಫಲಪುಷ್ಪ ಪ್ರದರ್ಶನಕ್ಕಾಗಿ ಕುಪ್ಪಣ್ಣ ಪಾರ್ಕ್‌ನಲ್ಲಿರುವ ಗಾಜಿನ ಮನೆ ಬಳಿ ಸ್ವಚ್ಛತಾ ಕಾರ್ಯ ನಡೆಸುತ್ತಿರುವುದು.

ಸಿದ್ಧತಾ ಕಾರ್ಯ ತ್ವರಿತಗತಿಯಲ್ಲಿ ಸಾಗಿದೆ

"ದಸರಾ ಫಲಪುಷ್ಪ ಪ್ರದರ್ಶನಕ್ಕೆ ಸಿದ್ಧತೆ ಕಾರ್ಯ ತ್ವರಿತಗತಿಯಲ್ಲಿ ಸಾಗಿದೆ. ಈಗಾಗಲೇ ವಿವಿಧ ನರ್ಸರಿಗಳಲ್ಲಿ 65 ಸಾವಿರ ಕುಂಡಗಳಲ್ಲಿ ಗಿಡ ಬೆಳೆಸಲಾಗಿದೆ. ಈ ಬಾರಿ ಹೆಚ್ಚು ಜನ ಬರುವ ನಿರೀಕ್ಷೆಯಿಂದ ಭದ್ರತಾ ಸಿಬ್ಬಂದಿ ನೇಮಕ ಮಾಡಿಕೊಳ್ಳಲಾಗುತ್ತಿದೆ. ಕುಪ್ಪಣ್ಣ ಪಾರ್ಕ್‌ಗೆ 3 ಗೇಟ್ ಇದ್ದರೂ, ಕಳೆದ ಬಾರಿ ಎರಡು ಗೇಟ್ ಬಳಸಲಾಗಿತ್ತು. ಈ ಬಾರಿ ಹೆಚ್ಚಿನ ಜನ ಬಂದರೆ ಮೂರೂ ಗೇಟ್ ಬಳಸಲಾಗುತ್ತದೆ. ಜಿ.ಪಂ ಸಿಇಓ ಕೆ.ಎಂ.ಗಾಯತ್ರಿ ಅವರ ಮಾರ್ಗದರ್ಶನದಲ್ಲಿ ಗಾಜಿನ ಮನೆಯಲ್ಲಿ ಚಂದ್ರಯಾನದ ಆಕೃತಿಯನ್ನು ಕೊಲ್ಕತ್ತಾದ ಸೇವಂತಿ ಹೂವಿನಿಂದ ನಿರ್ಮಿಸಲಾಗುತ್ತದೆ. ಈ ಹೂವು ಒಂದು ವಾರವಾದರೂ ಬಾಡುವುದಿಲ್ಲ. ಅದಕ್ಕಾಗಿ ಈ ಹೂವನ್ನೇ ಬಳಸಲು ನಿರ್ಧರಿಸಲಾಗಿದೆ. ವಾರದ ನಂತರ ಎರಡನೇ ಬಾರಿಗೆ ಹೂವನ್ನು ಬದಲಿಸಲಾಗುತ್ತದೆ.

–ಬಿ.ಎನ್.ಸುವೇಧ, ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರು, ರಾಜ್ಯವಲಯ

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ ಶುಕ್ರವಾರ 22 ಸೆಪ್ಟೆಂಬರ್ 2023

ಕಾವೇರಿ ವಿಚಾರದಲ್ಲಿ ರಾಜ್ಯದ ಹಿತ ಕಾಪಾಡಲು ಸರ್ಕಾರ ತೀರ್ಮಾನಿಸಲಿದೆ

ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಸ್ಪಷ್ಟನೆ



ಮೈಸೂರು, ಸೆ.21(ಬಿಎಲ್‌ಯು)– ಕಾವೇರಿ ವಿಚಾರವಾಗಿ ರಾಜ್ಯದ ಹಿತ ಕಾಪಾಡುವ ನಿಟ್ಟಿನ'ಲ್ಲಿ ಸರ್ಕಾರ ಕಾನೂನಾತ್ಮಕವಾಗಿ ಎಲ್ಲಾ ರೀತಿಯ ಪ್ರಯತ್ನ ಮಾಡಲಿದೆ ಎಂದು ವಿಧಾನಸಭೆಯ ಸ್ಪೀಕರ್ ಯು.ಟಿ.ಖಾದರ್ ತಿಳಿಸಿದರು.

ಮೈಸೂರಿನ ಬಿಷಪ್ ಹೌಸ್‌ನಲ್ಲಿ ಗುರುವಾರ ಪತ್ರಕರ್ತರ ಜೊತೆ ಮಾತನಾಡಿದ ಅವರು, ಕಾವೇರಿ ವಿಚಾರದಲ್ಲಿ ರಾಜ್ಯಕ್ಕೆ ಯಾವುದೇ ರೀತಿಯಲ್ಲೂ ಧಕ್ಕೆ ಆಗದಂತೆ ಆಡಳಿತ ಹಾಗೂ ವಿರೋಧ ಪಕ್ಷಗಳು ಒಗ್ಗಟ್ಟಾಗಿವೆ. ಇವರ ಜೊತೆಗೆ ರಾಜ್ಯದ ಜನತೆಯೂ ಒಗ್ಗಟ್ಟಾಗಿದ್ದಾರೆ ಎಂದರು.

ಕರ್ನಾಟಕದ ಜನರು ಶಾಂತಿ ಪ್ರಿಯರಾಗಿದ್ದಾರೆ. ಕಾವೇರಿ ವಿಚಾರವಾಗಿ ಶಾಂತಿಯುತ ಹೋರಾಟ ಮಾಡುತ್ತಿದ್ದಾರೆ. ಈಗ ಸರ್ಕಾರ ರಾಜ್ಯದ ಹಿತ ಕಾಪಾಡುವ ನಿಟ್ಟಿನಲ್ಲಿ ಕಾನೂನಾತ್ಮಕವಾಗಿ ತೀರ್ಮಾನ ಕೈಗೊಳ್ಳಲಿದೆ ಎಂದು ತಿಳಿಸಿದರು.

ಲೋಕಸಭೆ ಹಾಗೂ ರಾಜ್ಯ ವಿಧಾನ ಸಭೆಗಳಲ್ಲಿ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ನೀಡುತ್ತಿರುವುದು ಮಹಿಳೆಯರಿಗಷ್ಟೆ ಅಲ್ಲದೆ ಸಾಮಾನ್ಯ ಜನರಿಗೂ ಸಂತಸ ತಂದಿದೆ ಎಂದರು.

ಇದರಿಂದ ಮಹಿಳಾ ಸಬಲೀಕರಣಕ್ಕೆ ಹೆಚ್ಚಿನ ಉತ್ತೇಜನ ನೀಡಿದಂತಾಗುತ್ತದೆ. ಈ ಅವಕಾಶದಿಂದ ಮಹಿಳೆಯರು ರಾಜಕೀಯ ಕ್ಷೇತ್ರದಲ್ಲಿ ಹೆಚ್ಚಿನ ಸೇವೆ ಸಲ್ಲಿಸಲು ಸಹಕಾರಿಯಾಗಿದೆ ಎಂದು ಅಭಿಪ್ರಾಯಪಟ್ಟರು. ಸಮಾಜದಲ್ಲಿ ಶೇ.50ರಷ್ಟಿರುವ ಮಹಿಳೆಯರನ್ನು ದೂರವಿಟ್ಟು ಅಭಿವೃದ್ಧಿ ಮಾಡಲು ಸಾಧ್ಯವಿಲ್ಲ. ಮಹಿಳೆಯರನ್ನು ಮುಖ್ಯ ವಾಹಿನಿಗೆ ಕೊಂಡೊಯ್ಯಲು ಈ ಮಸೂದೆ ಅನುಕೂಲಕರವಾಗಲಿದೆ. ಈ ಮೂಲಕ ಮಹಿಳೆಯರು ರಾಜಕೀಯ ಇಚ್ಛಾಶಕ್ತಿ ಪ್ರದರ್ಶಿಸಿದರೆ ದೇಶ ಮತ್ತಷ್ಟು ಅಭಿವೃದ್ಧಿಯಾಗುತ್ತದೆ ಎಂದರು.

ಮುಕ್ತ ವಿವಿ ಬಿಕಾಂ ಪ್ರಶ್ನೆ ಪತ್ರಿಕೆ ಮಾರಾಟ



ಇಬ್ಬರು ವಿದ್ಯಾರ್ಥಿಗಳ ಸೆರೆ, ಜಯಲಕ್ಷ್ಮೀಪುರಂ ಠಾಣೆ ಪೊಲೀಸರಿಂದ ತನಿಖೆ

ಮೈಸೂರು, ಸೆ.21(ಆರ್‌ಕೆ)–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಂತಿಮ ಬಿಕಾಂ ಪದವಿ ಪರೀಕ್ಷಾ ಪ್ರಶ್ನೆ ಪತ್ರಿಕೆ ಮಾರಾಟ ಮಾಡುತ್ತಿದ್ದ ಇಬ್ಬರು ವಿದ್ಯಾರ್ಥಿಗಳನ್ನು ಮೈಸೂರಿನ ಜಯಲಕ್ಷ್ಮೀಪುರಂ ಠಾಣೆ ಪೊಲೀಸರು ಇಂದು ಬಂಧಿಸಿದ್ದಾರೆ.

ಮೈಸೂರಿನ ನವೀನ್ ಮತ್ತು ಮುರಳೀಧರ ಎಂಬುವರು ಬಂಧಿತರಾಗಿದ್ದು, ಅವರಿಗೆ ಪ್ರಶ್ನೆ ಪತ್ರಿಕೆ ಮಾರಾಟ ಮಾಡಿದ ಆರೋಪಿಗಾಗಿ ಪೊಲೀಸರು ಬಲೆ ಬೀಸಿದ್ದಾರೆ. ಮುಕ್ತ ವಿಶ್ವವಿದ್ಯಾನಿಲಯದ ಅಂತಿಮ ಬಿಕಾಂ ಅಂತಿಮ ವರ್ಷದ ಕಂಪ್ಯೂಟರ್ ಇನ್ ಬ್ಯುಸಿನೆಸ್ ವಿಷಯದ ಪರೀಕ್ಷೆ ಇಂದು ಮುಕ್ತ ಗಂಗೋತ್ರಿ ಆವರಣದ ವಿಜ್ಞಾನ ಭವನದಲ್ಲಿ ನಡೆಯಿತು. ಇಂದಿನ ಪರೀಕ್ಷಾ ಪ್ರಶ್ನೆ ಪತ್ರಿಕೆಯನ್ನು ಹಣಕ್ಕಾಗಿ ಮಾರಾಟ ಮಾಡಲಾಗುತ್ತಿದೆ ಎಂಬ ಮಾಹಿತಿ ತಿಳಿದ ಚಂದ್ರು ಎಂಬ ಅಂತಿಮ ಬಿಕಾಂ ವಿದ್ಯಾರ್ಥಿ ಕಷ್ಟಪಟ್ಟು ಓದುವ ತನ್ನಂತಹ ಹಲವು ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತದೆ ಎಂದು ನೊಂದು, ಅದನ್ನು ತಡೆಯುವ ಸಲುವಾಗಿ ಬುಧವಾರ ಬೆಳಗ್ಗೆ ನವೀನ್ ಮತ್ತು ಮುರಳಿಗೆ ತನಗೂ ಪ್ರಶ್ನೆ ಪತ್ರಿಕೆ ಕೊಡುವಂತೆ ಕೇಳಿದ್ದ.

ಆದರೆ, ಅವರಿಗೆ ಚಂದ್ರು ಬಗ್ಗೆ ನಂಬಿಕೆ ಬಾರದ ಕಾರಣ ನಿರಾಕರಿಸಿದ್ದರು. ಆದರೂ, ನಂಬಿಕೆ ಹುಟ್ಟಿಸಿ, 3,000 ರೂ. ಹಣ ನೀಡಿ ಬುಧವಾರ ರಾತ್ರಿ 9 ಗಂಟೆಗೆ ತನ್ನ ಮೊಬೈಲ್‌ಗೆ ವಾಟ್ಸಾಪ್ ಮೂಲಕ ಕಂಪ್ಯೂಟರ್ ಇನ್ ಬ್ಯುಸಿನೆಸ್ ವಿಷಯದ ಪ್ರಶ್ನೆ ಪತ್ರಿಕೆ ಪ್ರತಿ ತರಿಸಿಕೊಂಡ. ಇಂದು ಬೆಳಗ್ಗೆ 7 ಗಂಟೆಗೆ ನೇರವಾಗಿ ಜಯಲಕ್ಷ್ಮೀಪುರಂ ಠಾಣೆಗೆ ತೆರಳಿದ ಚಂದ್ರು, ನವೀನ್ ಮತ್ತು ಮುರಳಿ ಕಳುಹಿಸಿದ ಪ್ರಶ್ನೆ ಪತ್ರಿಕೆ ಸಮೇತ ಲಿಖಿತ ದೂರು ನೀಡಿ, ನಂತರ ಇಂದು ವಿಜ್ಞಾನ ಭವನದಲ್ಲಿ ನಡೆದ ಪರೀಕ್ಷೆಗೂ ಹಾಜರಾಗಿದ್ದ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದ ಜಯಲಕ್ಷ್ಮೀಪುರಂ ಠಾಣೆ ಇನ್ಸ್‌ಪೆಕ್ಟರ್ ಕುಮಾರ್ ಹಾಗೂ ಸಿಬ್ಬಂದಿ, ಪರೀಕ್ಷೆ ನಡೆಯುತ್ತಿದ್ದ ವೇಳೆ ಕಾರ್ಯಾಚರಣೆ ನಡೆಸಿ ಪರಿಶೀಲಿಸಿದಾಗ ಕಂಪ್ಯೂಟರ್ ಇನ್ ಬ್ಯುಸಿನೆಸ್ ವಿಷಯದ ಪ್ರಶ್ನೆಪತ್ರಿಕೆಯು, ಚಂದ್ರು ವಾಟ್ಸಾಪ್‌ಗೆ ಬಂದಿದ್ದ ಪ್ರಶ್ನೆಪತ್ರಿಕೆಗೆ ಶೇ.100ರಷ್ಟು ಹೋಲಿಕೆಯಾಯಿತು. ಪ್ರಶ್ನೆ ಪತ್ರಿಕೆ ಮಾರಾಟವಾಗಿರುವುದು ದೃಢಪಟ್ಟ ಹಿನ್ನೆಲೆಯಲ್ಲಿ ಇಂದು ಪರೀಕ್ಷೆ ಬರೆಯಲೆಂದು ಬಂದಿದ್ದ ನವೀನ್ ಮತ್ತು ಮುರಳಿ ಎಂಬುವರನ್ನು ಪೊಲೀಸರು ಬಂಧಿಸಿ ವಿಚಾರಣೆಗೊಳಪಡಿಸಿದ್ದಾರೆ. ಅವರಿಬ್ಬರಿಗೆ ಪ್ರಶ್ನೆ ಪತ್ರಿಕೆ ನೀಡಿದ ಮೂಲ ವ್ಯಕ್ತಿ ಯಾರೆಂಬುದು ಖಚಿತವಾಗದ ಕಾರಣ ಪೊಲೀಸರು ತೀವ್ರ ತನಿಖೆ ನಡೆಸುತ್ತಿದ್ದಾರೆ.



"ಪ್ರಶ್ನೆ ಪತ್ರಿಕೆ ಮಾರಾಟ ಮಾಡಿದ ಪ್ರಕರಣ ಸಂಬಂಧ ಪೊಲೀಸರು ತನಿಖೆ ಮಾಡುತ್ತಿದ್ದಾರೆ. ಪ್ರತಿಗಳು ಹೇಗೆ ಬಯಲಾಯಿತು, ಯಾರು ಇದರ ಮೂಲ ಕಾರಣಕರ್ತರು ಎಂಬುದು ಈಗ ತಿಳಿದಿಲ್ಲ. ಪೊಲೀಸರಿಗೆ ಅಗತ್ಯ ಮಾಹಿತಿ ನೀಡಿ ಸಹಕರಿಸುತ್ತಿದ್ದೇವೆ. ಪ್ರಶ್ನೆಪತ್ರಿಕೆ ಹೋಲಿಕೆಯಾಗಿರುವುದರಿಂದ ಇಂದು ನಡೆದ ಕಂಪ್ಯೂಟರ್ ಇನ್ ಬ್ಯುಸಿ ನೆಸ್ ವಿಷಯದ ಪರೀಕ್ಷೆ ರದ್ದುಪಡಿಸಿ ಮುಂದೂಡ ಬೇಕೇ ಬೇಡವೇ ಎಂಬುದರ ಬಗ್ಗೆ ಇನ್ನೂ ನಿರ್ಧರಿಸಿಲ್ಲ. ಕುಲಪತಿಗಳೊಂದಿಗೆ ಸಮಾಲೋಚಿಸಿ ತೀರ್ಮಾನ ಕೈಗೊಳ್ಳುತ್ತೇವೆ.

–ಕೆಎಲ್‌ಎನ್ ಮೂರ್ತಿ, ಕುಲಸಚಿವ, ಮುಕ್ತ ವಿವಿ.

ಪಾಕಿಸ್ತಾನದಲ್ಲಿ ಮುಂದಿನ ಜನವರಿ ಕೊನೇ ವಾರದಲ್ಲಿ ಸಾರ್ವತ್ರಿಕ ಚುನಾವಣೆ

ಇಸ್ಲಾಮಾಬಾದ್,ಸೆ.21–ಪಾಕಿಸ್ತಾನದ ಚುನಾವಣಾ ಆಯೋಗ ಗುರುವಾರ ದೇಶದಲ್ಲಿ ಸಾರ್ವತ್ರಿಕ ಚುನಾವಣೆಗಳು 2024ರ ಜನವರಿ ಕೊನೆಯ ವಾರದಲ್ಲಿ ನಡೆಯಲಿವೆ ಎಂದು ಘೋಷಿಸಿದೆ.

ಕ್ಷೇತ್ರಗಳ ಮರು ವಿಂಗಡಣೆಯ ಕೆಲಸವನ್ನು ಪರಿಶೀಲಿಸಿದ್ದು, ಕ್ಷೇತ್ರಗಳ ವಿಂಗಡಣೆಯ ಆರಂಭಿಕ ಪಟ್ಟಿಯನ್ನು ಸೆ.27ರಂದು ಪ್ರಕಟಿಸಲಾಗುವುದು ಎಂದು ಚುನಾವಣಾ ಆಯೋಗ ಪ್ರಕಟಣೆಯಲ್ಲಿ ತಿಳಿಸಿದೆ. ಪಟ್ಟಿಗೆ ಸಂಬಂಧಿಸಿದಂತೆ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಲಿಸಿದ ನಂತರ ನ.30ರಂದು ಅಂತಿಮ ಪಟ್ಟಿಯನ್ನು ಪ್ರಕಟಿಸ ಲಾಗುವುದು ಎಂದು ಆಯೋಗ ಹೇಳಿದೆ. 2024ರ ಜನವರಿ ಕೊನೆಯ ವಾರದಲ್ಲಿ ಸಾರ್ವತ್ರಿಕ ಚುನಾವಣೆ ನಡೆಯಲಿದೆ ಎಂದು ಆಯೋಗ ತಿಳಿಸಿದೆ. ಆಗಸ್ಟ್ 9ರಂದು ರಾಷ್ಟ್ರೀಯ ಅಸೆಂಬ್ಲಿಯನ್ನು ವಿಸರ್ಜನೆ ಮಾಡಿದ ನಂತರ, 90 ದಿನಗಳಲ್ಲಿ ಪಾಕಿಸ್ತಾನದಲ್ಲಿ ಸಾರ್ವತ್ರಿಕ ಚುನಾವಣೆಗಳು ನಡೆಯಲಿವೆ.

ಕರ್ನಾಟಕವೆಂದು ಮರು ನಾಮಕರಣಕ್ಕೆ ಸುವರ್ಣ ಸಂಭ್ರಮ ಆಚರಣೆ

ಕನ್ನಡ ನಾಡು–ನುಡಿ–ಸಂಸ್ಕೃತಿ ಬಿಂಬಿಸುವ ವಿಶಿಷ್ಟ ಲಾಂಛನದ ಮಾದರಿಗಳ ಆಹ್ವಾನ

ಮೈಸೂರು,ಸೆ.21(ಪಿಎಂ)– ಮೈಸೂರು ರಾಜ್ಯಕ್ಕೆ 'ಕರ್ನಾಟಕ' ಎಂದು ಮರು ನಾಮಕರಣವಾಗಿ 50 ವರ್ಷಗಳು ಪೂರ್ಣಗೊಳ್ಳಲಿರುವ ಸುವರ್ಣ ಮಹೋತ್ಸವದ ಸುಸಂದರ್ಭದಲ್ಲಿ 'ಕರ್ನಾಟಕ ಸಂಭ್ರಮ–50; ಹೆಸರಾಗಲಿ ಕರ್ನಾಟಕ ಉಸಿರಾಗಲಿ ಕನ್ನಡ' ಶೀರ್ಷಿಕೆಯಡಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ರಾಜ್ಯಾದ್ಯಂತ ವರ್ಷಪೂರ್ತಿ ಕಾರ್ಯಕ್ರಮ ಆಯೋಜಿಸುತ್ತಿದ್ದು, ಇದಕ್ಕಾಗಿ ಆಸಕ್ತರಿಂದ ಸುಂದರವಾದ ಲಾಂಛನದ ಮಾದರಿಗಳನ್ನು ಆಹ್ವಾನಿಸಲಾಗಿದೆ.

ಇಡೀ ರಾಜ್ಯದಲ್ಲಿ ವರ್ಷಪೂರ್ತಿ ವೈವಿಧ್ಯಮಯ, ವರ್ಣಮಯ ಹಾಗೂ ಅರ್ಥಪೂರ್ಣವಾಗಿ ಕಾರ್ಯಕ್ರಮ ಆಚರಿಸುವ ಮೂಲಕ ಇದಕ್ಕೊಂದು ವಿಶೇಷ ಮೆರುಗು ನೀಡಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉದ್ದೇಶಿಸಿದೆ. ಕಾರ್ಯಕ್ರಮದ ಸಂಭ್ರಮ ಹೆಚ್ಚಿಸಲು ಕನ್ನಡ ನಾಡು–ನುಡಿ–ಸಂಸ್ಕೃತಿ ಬಿಂಬಿಸುವ ವಿಶಿಷ್ಟ ಲಾಂಛನ (ಲೋಗೋ) ಬಳಸಲು ತೀರ್ಮಾನಿಸಲಾಗಿದೆ. ಹಾಗಾಗಿ ಆಸಕ್ತರಿಂದ ಸುಂದರವಾದ ಲಾಂಛನದ ಮಾದರಿಗಳನ್ನು ಆಹ್ವಾನಿಸಲಾಗಿದೆ. ಆಯ್ಕೆಯಾಗುವ ಮಾದರಿ ಲಾಂಛನಕ್ಕೆ 25 ಸಾವಿರ ರೂ. ನಗದು ಬಹುಮಾನ ನಿಗದಿಪಡಿಸಲಾಗಿದೆ. ಸೆ.30ರೊಳಗೆ ಲಾಂಛನದ ಮಾದರಿಗಳನ್ನು ಸಲ್ಲಿಸಬೇಕಿದ್ದು, ಆಸಕ್ತರು ಮಾಹಿತಿಗೆ ಇಲಾಖೆ ಜಾಲತಾಣಕ್ಕೆ (https://www.kannadasiri.karnataka.gov.in) ಭೇಟಿ ನೀಡಬಹುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು, ನಾಳೆ ಪ್ರಾಥಮಿಕ, ಪ್ರೌಢಶಾಲಾ ವಿಭಾಗದ ರಾಜ್ಯ ಮಟ್ಟದ ವಾಲಿಬಾಲ್ ಪಂದ್ಯಾವಳಿ

ಮೈಸೂರು.ಸೆ.21– ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯಿತಿ ಮೈಸೂರು. ಉಪನಿರ್ದೇಶಕರ ಕಚೇರಿ ಶಾಲಾ ಶಿಕ್ಷಣ ಇಲಾಖೆ ಮೈಸೂರು. ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಉತ್ತರ ವಲಯ ದೈಹಿಕ ಶಿಕ್ಷಣ ಶಿಕ್ಷಕರ ಸಂಘ ಉತ್ತರ ವಲಯ ಮೈಸೂರು ಇವರ ಸಂಯುಕ್ತ ಆಶ್ರಯದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆ ವಿಭಾಗದ 2023–24ನೇ ಸಾಲಿನ ರಾಜ್ಯಮಟ್ಟದ ವಾಲಿಬಾಲ್ ಪಂದ್ಯಾವಳಿಯನ್ನು ಸೆ.22 ಮತ್ತು 23ರಂದು ಮೈಸೂರಿನ ಬೃಂದಾವನ ಬಡಾವಣೆಯ ಶ್ರೀ ಕುವೆಂಪು ಬೃಂದಾವನ ಪ್ರೌಢಶಾಲೆ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.



ಸೆ.22ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಉಪಸ್ಥಿತಿಯಲ್ಲಿ, ಸಮಾಜ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸುವರು. ಪಶುಸಂಗೋಪನೆ ಮತ್ತು ರೇಷ್ಮೆ ಸಚಿವ ವೆಂಕಟೇಶ್ ಕ್ರೀಡಾ ಧ್ವಜಾರೋಹಣವನ್ನು ನಡೆಸಲಿದ್ದು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಸಕಾಲ ಸಚಿವ ಮಧು ಬಂಗಾರಪ್ಪ ಕ್ರೀಡಾ ಜ್ಯೋತಿ ಸ್ವೀಕಾರವನ್ನು ನಡೆಸುವರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಚಾಮರಾಜ ವಿಧಾನಸಭಾ ಕ್ಷೇತ್ರದ ಕೆ.ಹರೀಶ್ ಗೌಡ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಮೈಸೂರು ಮೇಯರ್ ಶಿವಕುಮಾರ್, ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ, ಚಾಮರಾಜನಗರ ಸಂಸದ ಶ್ರೀನಿವಾಸ್‌ಪ್ರಸಾದ್, ಮಂಡ್ಯ ಸಂಸದೆ ಸುಮಲತಾ ಅಂಬರೀಶ್ ಭಾಗವಹಿಸುವರು. ಸಮಾರಂಭದ ಅತಿಥಿಗಳಾಗಿ ವಿಧಾನಸಭಾ ಶಾಸಕರಾದ ತನ್ವೀರ್ ಸೇಠ್, ಜಿ.ಟಿ.ದೇವೇಗೌಡ, ಅನಿಲ್‌ಕುಮಾರ್.ಸಿ, ರವಿಶಂಕರ್.ಡಿ, ಜಿ.ಡಿ.ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ, ಟಿ.ಎಸ್ ಶ್ರೀವತ್ಸ ವಿಧಾನಪರಿಷತ್ತಿನ ಶಾಸಕರಾದ ಮರಿತಿಬ್ಬೆಗೌಡ, ಹೆಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಮಧು ಜಿ.ಮಾದೇಗೌಡ, ಸಿ.ಎನ್.ಮಂಜೇಗೌಡ, ಉಪಮೇಯರ್ ಡಾ.ಜಿ.ರೂಪ, ನಗರಪಾಲಿಕೆ ಸದಸ್ಯ ಬಿ.ಎಂ.ಮಂಜು ಭಾಗವಹಿಸುವರು ಎಂದು ಶಾಲಾ ಶಿಕ್ಷಣ ಇಲಾಖೆ ಮೈಸೂರು ಉಪನಿರ್ದೇಶಕರ ಕಚೇರಿಯ ಜಿಲ್ಲಾ ದೈಹಿಕ ಶಿಕ್ಷಣ ಶಿಕ್ಷಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಿವಶಕ್ತಿ ಪಾಯಿಂಟ್‌ನಲ್ಲಿ ಹಗಲು; ವಿಕ್ರಂ, ಪ್ರಜ್ಞಾನ್‌ಗೆ ಮರುಜೀವ



ಬೆಂಗಳೂರು, ಸೆ.21– ಚಂದ್ರನ ದಕ್ಷಿಣ ಧ್ರುವದಲ್ಲಿ ಇಳಿದು ಯಶಸ್ವಿಯಾಗಿ ಓಡಾಡಿದ ನಂತರ ನಿದ್ರಾವಸ್ಥೆಗೆ ತೆರಳಿದ ಚಂದ್ರಯಾನ–3ರ ಲ್ಯಾಂಡರ್ ವಿಕ್ರಂ ಹಾಗೂ ರೋವರ್ ಪ್ರಜ್ಞಾನ್ ಶುಕ್ರವಾರದಿಂದ ಮತ್ತೆ ಕಾರ್ಯಾಚರಣೆ ನಡೆಸುವ ನಿಟ್ಟಿನಲ್ಲಿ ಇಸ್ರೊ ಸನ್ನದ್ಧವಾಗಿದೆ. 15 ದಿನಗಳ ಚಂದ್ರನ ಹಗಲು ಶುಕ್ರವಾರದಿಂದ ಆರಂಭವಾಗಲಿದ್ದು, ಮೊದಲ ಕಿರಣ ಬಿದ್ದ ನಂತರ ವಿಕ್ರಂ ಹಾಗೂ ಪ್ರಜ್ಞಾನ್ ನಲ್ಲಿ ಜಾಗೃತಾವಸ್ಥೆಗೆ ತರುವ ಯತ್ನವನ್ನು ವಿಜ್ಞಾನಿಗಳು ನಡೆಸಲಿದ್ದಾರೆ ಎಂದು ಇಸ್ರೊ ಅಧ್ಯಕ್ಷ ಎಸ್.ಸೋಮನಾಥ್ ಹೇಳಿದ್ದಾರೆ. ಗುರುವಾರ ಚಂದ್ರನಲ್ಲಿ ಸೂರ್ಯೋದಯದ ನಂತರ ಈ ಪ್ರಕ್ರಿಯೆ ಶುಕ್ರವಾರವೂ ಮುಂದುವರಿಯಲಿದೆ. ಈ ಎರಡು ಪ್ರಮುಖ ಸಾಧನಗಳು ಮರಳಿ ಜಾಗೃತಾವಸ್ಥೆಗೆ ಬರುವ ನಿರೀಕ್ಷೆ ಇದೆ. ಇದು ಸೆ.22ರಂದು ಗೊತ್ತಾಗಲಿದೆ ಎಂದಿದ್ದಾರೆ. ಚಂದ್ರನ ಅಂಗಳದಲ್ಲಿನ ಸೂರ್ಯಾಸ್ತದ ಸಂದರ್ಭದಲ್ಲಿ ಸೆ.2ರಂದು ಈ ಎರಡು ಸಾಧನಗಳನ್ನು ಹಂತಹಂತವಾಗಿ ನಿದ್ರಾವಸ್ಥೆಗೆ ಕಳುಹಿ ಸಲಾಗಿತ್ತು. ಇದಕ್ಕೂ ಪೂರ್ವದಲ್ಲಿ ಈ ಸಾಧನಗಳಲ್ಲಿರುವ ಬ್ಯಾಟರಿಗಳನ್ನು ಮರುಪೂರಣಗೊಳಿಸಲಾಗಿತ್ತು. ಜತೆಗೆ ಸೂರ್ಯಾಸ್ತದಲ್ಲೂ ಸೂರ್ಯನ ಕಿರಣಗಳು ಲಭ್ಯವಾಗುವಂತೆ ಸೌರ ಫಲಕಗಳನ್ನು ಸಜ್ಜುಗೊಳಿಸಲಾಗಿತ್ತು ಎಂದು ವಿಜ್ಞಾನಿಗಳು ಹೇಳಿದ್ದಾರೆ. ಚಂದ್ರನ ಸೂರ್ಯಾಸ್ತ ವೇಳೆ ಮೈನಸ್ 200 ಡಿಗ್ರಿ ಸೆಲ್ಸಿಯಸ್‌ಗೆ ಕುಸಿಯುವ ತಾಪಮಾನ ಎದುರಿಸಿ ಈ ಸಾಧನಗಳು ಜಾಗೃತಾವಸ್ಥೆಗೆ ಹೇಗೆ ಮರಳಲಿವೆ ಎಂಬ ಕುತೂಹಲ ಮೂಡಿದೆ. ಹೀಗೆ ಜಾಗೃತಗೊಂಡ ನಂತರ ಮುಂದಿನ 14 ದಿನಗಳ ಕಾಲ ಇವು ಭೂಮಿಗೆ ಚಂದ್ರನ ಅಂಗಳದ ಮಾಹಿತಿ ಕಳುಹಿಸಲಿವೆ.



ಮೈಸೂರಿನ ಗಾಂಧಿನಗರದ ಶ್ರೀ ಉರಿಲಿಂಗ ಪೆದ್ದಿಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ಅವರನ್ನು ವಿಧಾನಸಭೆ ಸ್ಪೀಕರ್ ಯು.ಟಿ.ಖಾದರ್ ಭೇಟಿ ಮಾಡಿ, ಆಶೀರ್ವಾದ ಪಡೆದರು.

ಕೇಂದ್ರೀಕೃತ ಅಪ್ರೆಂಟಿಸ್‌ಷಿಪ್ ಮೇಳ

ಮೈಸೂರು, ಸೆ. 21– ಬೋರ್ಡ್ ಆಫ್ ಅಪ್ರೆಂಟಿಸ್‌ಷಿಪ್ ಟ್ರೈನಿಂಗ್ (ಸೌತ್ ರೀಜನ್), ಉನ್ನತ ಶಿಕ್ಷಣ ಇಲಾಖೆ, ಭಾರತ ಸರ್ಕಾರ, ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಸಹಯೋಗದೊಂದಿಗೆ ಕೇಂದ್ರಿ ಕೃತ ಅಪ್ರೆಂಟಿಸ್‌ಷಿಪ್ ಮೇಳವನ್ನು ಅ.6ರಂದು ಬೆಳಗ್ಗೆ 10ರಿಂದ ಸಂಜೆ 5.30ರವರೆಗೆ ಜೆಎಸ್‌ಎಸ್ ಮಹಿಳಾ ಪಾಲಿಟೆಕ್ನಿಕ್, ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಸಮುಚ್ಚಯದಲ್ಲಿ ಆಯೋ ಜಿಸಲಾಗಿದೆ. ಈ ಮೇಳವು ಕೈಗಾರಿಕೆಗಳು ಹಾಗೂ ಇನ್ನಿತರ ಉದ್ಯಮಗಳು, ಅಭ್ಯರ್ಥಿಗಳನ್ನು ಆರಿಸಲು ಅನುವಾಗುವುದರ ಜೊತೆಗೆ ಮಾನವ ಸಂಪನ್ಮೂಲವನ್ನು ಸದುಪಯೋಗಪಡಿಸಿಕೊಳ್ಳಲು ಸಹಾಯಕವಾಗಿರುತ್ತದೆ. ಈ ಮೇಳದಲ್ಲಿ ಡಿಪ್ಲೊಮಾ, ಇಂಜಿನಿಯರಿಂಗ್, ಬಿ.ಎ, ಬಿ.ಸಿ.ಎ, ಬಿ.ಎಸ್‌ಸಿ, ಬಿ.ಕಾಂ, ಬಿ.ಬಿ.ಎ ಇತ್ಯಾದಿ ಪದವಿಯನ್ನು 2019, 2020, 2021, 2022 ಮತ್ತು 2023ರಲ್ಲಿ ಪಡೆದಿರುವ ಅಭ್ಯರ್ಥಿಗಳು ಪಾಲ್ಗೊಂಡು ಸದುಪಯೋಗ ಪಡೆದುಕೊಳ್ಳಬಹುದಾಗಿದೆ. ಮಾಹಿತಿಗಾಗಿ 9886062074 ಇ–ಮೇಲ್: iipcelljsspw@gmail.com ಸಂಪರ್ಕಿಸಬಹುದು.

ಒಕ್ಕಲಿಗರ ಸಂಘದಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಸೆ.21– ರಾಜ್ಯ ಒಕ್ಕಲಿಗರ ಸಂಘದ ವತಿಯಿಂದ ಒಕ್ಕಲಿಗ ಜನಾಂಗದ ಪ್ರತಿಭಾವಂತ ವಿದ್ಯಾರ್ಥಿಗಳಿಂದ 2022–23ನೇ ಸಾಲಿನ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಶೇ.95ಕ್ಕಿಂತ ಹೆಚ್ಚು ಅಂಕ ಗಳಿಸಿರುವ ಸರ್ಕಾರಿ ಶಾಲಾ–ಕಾಲೇಜು ವಿದ್ಯಾರ್ಥಿಗಳು ಹಾಗೂ ಶೇ.98ಕ್ಕಿಂತ ಹೆಚ್ಚು ಅಂಕ ಗಳಿಸಿರುವ ಖಾಸಗಿ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಹರು ಸ್ವ–ವಿವರ, ಶಿಕ್ಷಣ ಸಂಸ್ಥೆ ಹೆಸರು, ಅಂಕಪಟ್ಟಿ ದೃಢೀಕೃತ ನಕಲು, ಜಾತಿ ಪ್ರಮಾಣ ಪತ್ರ, ಸಂಘದ ಗುರುತಿನ ಚೀಟಿ ದೃಢೀಕೃತ ನಕಲು ಪ್ರತಿ, ಬ್ಯಾಂಕ್ ಖಾತೆ ವಿವರವನ್ನೊಳಗೊಂಡ ಅರ್ಜಿಯನ್ನು 'ಪ್ರತಿಭಾ ಪುರಸ್ಕಾರ ವಿಭಾಗ, ನಾಡಪ್ರಭು ಕೆಂಪೇಗೌಡ ಭವನ, ರಾಜ್ಯ ಒಕ್ಕಲಿಗರ ಸಂಘ, ಕೆ.ಆರ್.ರಸ್ತೆ, ವಿವಿ ಪುರ, ಬೆಂಗಳೂರು–04'ಕ್ಕೆ ಅಕ್ಟೋಬರ್ 7ರ ಒಳಗಾಗಿ ಸಲ್ಲಿಸಬೇಕು. ಸಂಘದ ಕೇಂದ್ರ ಕಚೇರಿಯ ಪ್ರತಿಭಾ ಪುರಸ್ಕಾರ ವಿಭಾಗ ಅಥವಾ ರಾಜ್ಯ ಒಕ್ಕಲಿಗರ ಸಂಘದ ವೆಬ್‌ಸೈಟ್ rvsangha.orgನಲ್ಲಿ ಅರ್ಜಿ ಪಡೆಯಬಹುದು. ಪರಿಶೀಲನೆ ನಂತರ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು ಎಂದು ಪ್ರಧಾನ ಕಾರ್ಯದರ್ಶಿ ಹೆಚ್.ಸಿ.ಜಯಮುತ್ತು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮೈಸೂರಿನ ಡಿ.ದೇವರಾಜ ಅರಸ್ ರಸ್ತೆಯಲ್ಲಿ ಮೈ ಟಾರ್ಪಲಿನ್ಸ್‌ನ ವಿಶೇಷ ಶಾಖೆ ಲೇಡಿಸ್ ಹ್ಯಾಂಡ್ ಬ್ಯಾಗ್‌ಗಳ ಮಳಿಗೆಯನ್ನು ಸ್ಪೀಕರ್ ಯು.ಟಿ.ಖಾದರ್ ಉದ್ಘಾಟಿಸಿದರು. ಈ ವೇಳೆ ಶಾಸಕ ಕೆ.ಹರೀಶ್‌ಗೌಡ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಅಬ್ದುಲ್ ಅಜೀಜ್(ಅಬ್ದುಲ್ಲಾ), ಮೈ ಟಾರ್ಪಲಿನ್ಸ್ ಮಾಲೀಕರಾದ ಕೆ.ಪ್ರದೀಪ್ ಸಿಂಗ್, ಎಂ.ಮಹೇಶ್, ಹೆಚ್.ಕೆ.ಹರ್ಷದ್, ಚಂದ್ರು, ಕಿಶೋರ್ ಮತ್ತಿತರರು ಉಪಸ್ಥಿತರಿದ್ದರು.

ಅಡ್ಡಂಡ ಸಿ.ಕಾರ್ಯಪ್ಪ ಅವರ 'ಕರಿನೀರ ವೀರ' ನಾಟಕ ಕೃತಿ ಬಿಡುಗಡೆ

ಸಾವರ್ಕರ್‌ಗೆ ಕರ್ನಾಟಕದ ನಿಕಟ ಸಂಬಂಧವಿತ್ತು; ಕನ್ನಡವೂ ಗೊತ್ತಿತ್ತು

ಸಾಹಿತಿ ರೋಹಿತ್ ಚಕ್ರತೀರ್ಥ ಅಭಿಮತ

ಮೈಸೂರು,ಸೆ.21(ಪಿಎಂ)–ವೀರ ಸಾವರ್ಕರ್ ಅವರಿಗೆ ನಮ್ಮ ರಾಜ್ಯದ ಜೊತೆ ನಿಕಟ ಸಂಬಂಧವಿದೆ. ಅವರು ಕನ್ನಡ ಮಾತನಾಡುತ್ತಿದ್ದರಲ್ಲದೆ, ಅವರ ಮನೆಯಲ್ಲಿ ಕನ್ನಡದ ವಾತಾವರಣವಿತ್ತು. ಅವರನ್ನು ಕರ್ನಾಟಕದ ಹೊರಗಿನವರು ಎಂಬ ಕಾರಣಕ್ಕೆ ವಿರೋಧಿಸುವವರಿಗೆ ಇದು ಗೊತ್ತಿರಲಿ ಎಂದು ಸಾಹಿತಿ ಹಾಗೂ ಅಯೋಧ್ಯಾ ಪಬ್ಲಿಕೇಷನ್ಸ್‌ನ ರೋಹಿತ್ ಚಕ್ರತೀರ್ಥ ಮಾರ್ಮಿಕವಾಗಿ ನುಡಿದರು.

ಮೈಸೂರಿನ ಎಂಜಿ ರಸ್ತೆಯಲ್ಲಿರುವ ಹೋಟೆಲ್ ಸಿಪಾಯಿ ಗ್ರಾಂಡ್‌ನ ಸಭಾಂಗಣದಲ್ಲಿ ಸಾವರ್ಕರ್ ಪ್ರತಿಷ್ಠಾನ ಮತ್ತು ಅಯೋಧ್ಯಾ ಪಬ್ಲಿಕೇಷನ್ಸ್ ಜಂಟಿ ಆಶ್ರಯದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಅಡ್ಡಂಡ ಸಿ.ಕಾರ್ಯಪ್ಪ ಅವರ 'ಕರಿನೀರ ವೀರ' ನಾಟಕ ಕೃತಿ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಸಾವರ್ಕರ್ ಅವರನ್ನು ಕರ್ನಾಟಕದ ಹೊರಗಿನವರು, ಹಾಗಾಗಿ ಅವರನ್ನು ವಿರೋಧಿಸಬೇಕೆಂಬ ಹೊಸ ಥಿಯೆರಿಯೂ ಇದೆ. ಸಾವರ್ಕರ್ ಅವರು ಕನ್ನಡ ಮಾತನಾಡುತ್ತಿದ್ದರು. ಅವರ ಮನೆಯಲ್ಲಿ ಕನ್ನಡದ ವಾತಾವರಣ ಇತ್ತು. ಆಲೂರು ವೆಂಕಟರಾಯರ ಜೊತೆಗೆ ನಿಕಟವಾದ ಸಂಬಂಧವಿತ್ತು. ಆಲೂರು ವೆಂಕಟರಾಯರು ಬರೆದ ಒಂದು ನಾಟಕದಲ್ಲಿ ಸಾವರ್ಕರ್ ಪಾತ್ರ ಮಾಡಿದ್ದರು. ಅವರಿಗೆ ದೈಹಿಕ ಕ್ಷಮತೆ ಉತ್ತಮ ವಾಗಿತ್ತು. ವ್ಯಾಯಾಮ ಮಾಡುವಾಗ ಆಲೂರು ವೆಂಕಟರಾಯರನ್ನು ತಮ್ಮ ಬೆನ್ನ ಮೇಲೆ ನಿಲ್ಲಿಸಿಕೊಳ್ಳುತ್ತಿದ್ದರು ಎಂದು ಹೇಳಿದರು.

ಸಾವರ್ಕರ್ ಹೆಸರಿನಲ್ಲೇ ಒಂದು ಶಕ್ತಿ ಇದೆ. ಯಾವುದಾದರೂ ಸಂಸ್ಥೆ ಅಥವಾ ಫ್ಲೈಓವರ್‌ಗೆ ಅವರ ಹೆಸರು ನಾಮಕರಣ ಮಾಡಲು ಮುಂದಾದರೆ, ದೇಶದ್ರೋಹಿಗಳು ಪ್ರತಿಭಟನೆ ಮಾಡುತ್ತಾರೆ. ಹಲವು ದೇಶದ್ರೋಹಿಗಳನ್ನು ದೇಶಪ್ರೇಮಿ ಮತ್ತು ಸ್ವಾತಂತ್ರ್ಯ ಹೋರಾಟಗಾರರು ಎಂದು ಬಿಂಬಿಸಿ ಅವರ ಪರ ಪ್ರಚಾರ ಮಾಡಲಾಗುತ್ತಿದೆ ಎಂದು ಕಿಡಿಕಾರಿದರು.

ಟಿಪ್ಪು ನಿಜಕನಸುಗಳು ನಾಟಕ ಬರೆದು ಪ್ರಕಟಿಸಿದ ನಂತರ ಎದುರಾದ ಕಷ್ಟ ನಷ್ಟಗಳ ಬಗ್ಗೆ ಅಡ್ಡಂಡ ಕಾರ್ಯಪ್ಪನವರಿಗೆ ಗೊತ್ತಿದೆ. ಈ ವಿಚಾರದಲ್ಲಿ ನ್ಯಾಯ ಕೊನೆಗೂ ನಮ್ಮ ಪರವಾಗಿ ಸಿಕ್ಕಿತು. ಹೈಕೋರ್ಟ್‌ನಲ್ಲಿ ಸತ್ಯಾಂಶ ನಿರೂಪಿಸಿ ಗೆದ್ದಿದ್ದೇವೆ. ಟಿಪ್ಪು ನಿಜಕನಸುಗಳು ನಾಟಕ ಕೃತಿಯ 15 ಸಾವಿರ ಪ್ರತಿಗಳನ್ನು ರಾಜ್ಯದಲ್ಲಿ ಮಾರಾಟ ಮಾಡಿದ್ದೇವೆ. ಇದೊಂದು ದಾಖಲೆ. ಅಂತಹ ಅದ್ಭುತ ಕೃತಿ ಕೊಟ್ಟಿರುವ ಕಾರ್ಯಪ್ಪನವರು ಇದೀಗ ಐತಿಹಾಸಿಕ ಮಹತ್ವವಿರುವ 'ಕರಿನೀರ ವೀರ' ನಾಟಕ ಬರೆದಿದ್ದಾರೆ. ಸಾವರ್ಕರ್ ವ್ಯಕ್ತಿತ್ವದ ಬಗ್ಗೆ ರಂಗ ಕೃತಿಯಾಗಿ ಹೊರಬಂದಿರುವ ಮೊದಲ ಕನ್ನಡ ಕೃತಿ ಇದು ಎಂಬುದು ಹೆಮ್ಮೆ. ಆದರೂ ಕಳೆದ 75 ವರ್ಷಗಳಲ್ಲಿ ಈ ಪ್ರಯತ್ನ ಆಗದೇ ಇರುವುದು ಬೇಸರದ ಸಂಗತಿ. ಕರಿನೀರ ಶಿಕ್ಷೆ ಎಂದಾಕ್ಷಣ ಮೊತ್ತಮೊದಲಿಗೆ ನೆನಪಾಗುವುದು ಸಾವರ್ಕರ್ ಹೆಸರು ಎಂದರು.

ಇತಿಹಾಸ ನಿರ್ಮಿಸಿದ ಇತಿಹಾಸಕಾರ: ನಾನು ದಲಿತರಿಂದಲೇ ದೇವಸ್ಥಾನ ನಿರ್ಮಾಣ ಹಾಗೂ ಶಂಕುಸ್ಥಾಪನೆ ಮಾಡಿಸುತ್ತೇನೆ ಎನ್ನುವ ಕ್ರಾಂತಿಕಾರಕ ಯೋಚನೆ ಮಾಡಿದವರು ಸಾವರ್ಕರ್. ತಮ್ಮ ಜೀವನದ ಉದ್ದಕ್ಕೂ ಸಾಮಾಜಿಕ ಕ್ರಾಂತಿ ಮಾಡಿದ ಸ್ವಾತಂತ್ರ್ಯ ಹೋರಾಟಗಾರ. ಅವರು ಲೇಖಕರೂ ಹೌದು. ಈ ದೇಶದಲ್ಲಿ 1857ರಲ್ಲಿ ನಡೆದದ್ದು ಸಿಪಾಯಿ ದಂಗೆಯಲ್ಲ, ಬದಲಿಗೆ ಅದು ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಎಂಬುದನ್ನು ಬೆಳಕಿಗೆ ತಂದರು. ಸಾವರ್ಕರ್ ಇತಿಹಾಸ ನಿರ್ಮಿಸಿದ ಇತಿಹಾಸಕಾರ. ಇಂತಹ ಸಾವರ್ಕರ್ ಅವರು ಸ್ವಾತಂತ್ರ್ಯ ಹೋರಾಟದಲ್ಲಿ ಹಣ್ಣುಗಾಯಿ ನೀರುಗಾಯಿಯಾದರೂ ಸ್ವಾತಂತ್ರ್ಯ ನಂತರದಲ್ಲಿ ಅವರನ್ನು ಈ ದೇಶದಲ್ಲಿ ಬಂಧನಕ್ಕೊಳಪಡಿಸಲಾಯಿತು. ಇದು ನಾಚಿಕೆಗೇಡಿನ ವಿಚಾರ ಎಂದು ಬೇಸರ ವ್ಯಕ್ತಪಡಿಸಿದರು.



ಮೈಸೂರಿನ ಎಂಜಿ ರಸ್ತೆಯಲ್ಲಿರುವ ಹೋಟೆಲ್ ಸಿಪಾಯಿ ಗ್ರಾಂಡ್‌ನ ಸಭಾಂಗಣದಲ್ಲಿ ಗುರುವಾರ ಅಡ್ಡಂಡ ಸಿ.ಕಾರ್ಯಪ್ಪ ಅವರ 'ಕರಿನೀರ ವೀರ' ನಾಟಕ ಕೃತಿಯನ್ನು ಬಿಡುಗಡೆ ಮಾಡಲಾಯಿತು.

ಈ ಕೃತಿ ನಿಷೇಧಿಸಲು ತುದಿಗಾಲು: ಈ ಕೃತಿಯನ್ನೂ (ಕರಿನೀರ ವೀರ) ನಿಷೇಧಿಸಲು ತುದಿಗಾಲಿನಲ್ಲಿ ನಿಂತಿರುತ್ತಾರೆ. ಅದು ನಮಗೆ ಗೊತ್ತಿದೆ. ಕಾರ್ಯಪ್ಪನವರ 'ಟಿಪ್ಪು ನಿಜಕನಸುಗಳು' ಹಾಗೂ 'ಕರಿನೀರ ವೀರ' ಕೃತಿಗಳನ್ನು ಮುಂದಿನ ಆರು ತಿಂಗಳ ಒಳಗೆ ಇಂಗ್ಲಿಷ್, ಹಿಂದಿ ಮತ್ತು ಮರಾಠಿ ಭಾಷೆಗಳಿಗೆ ಅನುವಾದ ಮಾಡಿಸಿ, ಪ್ರಕಟಿಸುತ್ತೇವೆ ಎಂದರು. ಇದಕ್ಕೂ ಮುನ್ನ ಕರಿನೀರ ವೀರ ನಾಟಕ ಕೃತಿಯನ್ನು ಆದಿತ್ಯ ಆಸ್ಪತ್ರೆ ಅಧ್ಯಕ್ಷ ಡಾ.ಚಂದ್ರಶೇಖರ್ ಬಿಡುಗಡೆ ಮಾಡಿದರು. ಕರಿನೀರ ವೀರ ನಾಟಕದ ಪೋಸ್ಟರ್ ಅನ್ನು ಉದ್ಯಮಿ ಜಗನ್ನಾಥ ಶೆಣೈ ಬಿಡುಗಡೆ ಮಾಡಿದರು. ಕೃತಿ ಕರ್ತೃಗಳೂ ಆದ ಮೈಸೂರು ರಂಗಾಯಣದ ಮಾಜಿ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ, ಸಾವರ್ಕರ್ ಪ್ರತಿಷ್ಠಾನದ ಅಧ್ಯಕ್ಷೆ ಡಾ.ಎಸ್. ಯಶಸ್ವಿನಿ ವೇದಿಕೆಯಲ್ಲಿದ್ದರು. ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಎಂಎಲ್‌ಸಿ ತೋಂಟದಾರ್ಯ, ಮೇಯರ್ ಶಿವಕುಮಾರ್, ಮುಡಾ ಮಾಜಿ ಅಧ್ಯಕ್ಷ ಯಶಸ್ವಿ ಸೋಮಶೇಖರ್ ಮತ್ತಿತರರು ಹಾಜರಿದ್ದರು.

ವೀರ ಸಾವರ್ಕರ್ ಇಲ್ಲದೇ ಹೋಗಿದ್ದರೆ 60 ವರ್ಷ ಆಳುವ ಸುಖವೇ ಸಿಗುತ್ತಿರಲಿಲ್ಲ!

ರಂಗಾಯಣದ ಮಾಜಿ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ವ್ಯಂಗ್ಯೋಕ್ತಿ

ಮೈಸೂರು,ಸೆ.21(ಪಿಎಂ)–ವೀರ ಸಾವರ್ಕರ್ ಇಲ್ಲದೇ ಹೋಗಿದ್ದರೆ ಕಳೆದ 60 ವರ್ಷಗಳಿಂದ ಯಾರು ದೇಶದಲ್ಲಿ ಅಧಿಕಾರದ ಸುಖವನ್ನು ಅನುಭವಿಸುತ್ತಾ ಬಂದಿದ್ದರೋ ಅವರಿಗೆ ಆ ಸುಖ ಸಿಗುತ್ತಿರಲಿಲ್ಲ ಎಂದು ಮೈಸೂರು ರಂಗಾಯಣದ ಮಾಜಿ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಕುಟುಕಿದರು.

ಬಹಳ ವರ್ಷಗಳಿಂದ ನನಗೆ ಇಬ್ಬರು ಕಾಡುತ್ತಿದ್ದರು. ಅದರಲ್ಲಿ ಒಬ್ಬರು ಜನರಲ್ ಕೆ.ಎಸ್.ತಿಮ್ಮಯ್ಯ, ಮತ್ತೊಬ್ಬರು ಸಾವರ್ಕರ್. ಭಾರತೀಯ ಸೇನೆಗೆ ಜನರಲ್ ತಿಮ್ಮಯ್ಯನವರ ಕೊಡುಗೆ ಅಪಾರ. ಕಾಶ್ಮೀರ ಒಂದು ತರದಲ್ಲಿ ಸಂಕಷ್ಟದಲ್ಲಿತ್ತು. ಈಗ ಅದು ಸುಧಾರಣೆಯಾಗಿದೆ. ಕಾಶ್ಮೀರದ ಬಹುಭಾಗ ಪಾಕ್ ಆಕ್ರಮಿತ ಪ್ರದೇಶವಾಗಲು ಕಾರಣರಾದವರ ವಿರುದ್ಧ ಸಿಡಿದೆದ್ದ ಮಹಾನ್ ಯೋಧ ಜನರಲ್ ತಿಮ್ಮಯ್ಯ ಎಂದರು.

ಈ ಇಬ್ಬರನ್ನು ನಾನು ಸಮಾನಾಂತರ ರೇಖಿಯಿಂದ ನೋಡುತ್ತೇನೆ. ಜನರಲ್ ತಿಮ್ಮಯ್ಯ ಮಿಲಿಟರಿಯವರು. ಸಾವರ್ಕರ್ ಮಿಲಿಟರೀಕರಣ ಮಾಡಿದವರು. ವೀರ ಸಾವರ್ಕರ್ ಇಲ್ಲದೇ ಹೋಗಿದ್ದರೆ ಭಾರತ ಚೂರು ಚೂರು ಆಗುತ್ತಿತ್ತು ಎಂದು ಹೇಳಿದರು.


ರಾಜ್ಯ ಸರ್ಕಾರದ ನಾಟಕ: ನನಗೆ ನಾಟಕ ಮಾಡಲಿಕ್ಕೆ ಮಾತ್ರ ಗೊತ್ತು. ನಾಟಕ ಮಾಡುವುದು ಎಂದರೆ ಬೇರೆ ಅರ್ಥದಲ್ಲಿ ಅಲ್ಲ. ಈಗ ಒಂದು ನಾಟಕ ನಡೆಯುತ್ತಿದೆ ರಾಜ್ಯ ಸರ್ಕಾರದ್ದು. ರಂಗಾಯಣದಲ್ಲಿ ನಿರ್ದೇಶಕನಾಗಿ ಟಿಪ್ಪು ನಿಜ ಕನಸುಗಳು ನಾಟಕ ಮಾಡುವ ಮೊದಲೇ ಸಾವರ್ಕರ್ ಬಗೆಗಿನ ಪುಸ್ತಕಗಳನ್ನು ಓದುತ್ತಿದ್ದೆ. ಅವರನ್ನು ಅವಮಾನ ಮಾಡುವವರು ದೇಶದ್ರೋಹಿಗಳು. ಅವರು ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಕುರಿತು ಬರೆದ ಪುಸ್ತಕವನ್ನು ಎರಡು ರಾಷ್ಟ್ರಗಳಲ್ಲಿ ನಿಷೇಧಿಸಲ್ಪಟ್ಟ ಮೊದಲ ಭಾರತದ ಲೇಖಕ. ಅಂದರೆ ವೀರ ಸಾವರ್ಕರ್ ಮೇಲೆ ಎಷ್ಟು ಭಯ ಇರಬಹುದು ಎಂದರು.

ಗಾಂಧಿ–ನೆಹರು ಇದ್ದ ಜೈಲಿನ ಕೊಠಡಿಗಳು ಲಾಡ್ಜ್‌ಗಳಂತಿದ್ದವು: ರಾಜಕೀಯ ರಂಗದಲ್ಲಿ ಯಾರಿಗಾದರೂ 50 ವರ್ಷಗಳ ಜೀವಾವಧಿ ಶಿಕ್ಷೆ ಕೊಟ್ಟಿದ್ದರೆ ಅದು ಸಾವರ್ಕರ್‌ಗೆ ಹೊರತು ನೆಹರು–ಗಾಂಧಿಗೆ ಅಲ್ಲ. ಸಾವರ್ಕರ್ ಶಿಕ್ಷೆ ಅನುಭವಿಸಿದ ಅಂಡಮಾನ ಜೈಲು ಭಯಂಕರವಾಗಿತ್ತು. ಆದರೆ ಗಾಂಧಿ–ನೆಹರು ಇದ್ದ ಜೈಲಿನ ಕೊಠಡಿಗಳು ಲಾಡ್ಜ್‌ಗಳಂತಿದ್ದವು. ನೆಹರೂ ಸಹೋದರಿ ಕೃಷ್ಣ ಹತಿಸಿಂಗ್ 'ನೆನಪು ಕಹಿಯಲ್ಲ' ಎಂಬ ಪುಸ್ತಕ ಬರೆದಿದ್ದು, ಅದರಲ್ಲಿ ನನ್ನ ಅಣ್ಣ ತುಂಬ ಕಷ್ಟದಲ್ಲಿದ್ದಾರೆ. ಕೇವಲ ಎರಡು ಮಂಚ, ಕೇವಲ ಎರಡು ಸೋಫಾ, ನಾಲ್ಕೇ ನಾಲ್ಕು ಕುರ್ಚಿಗಳು, ದಿನಕ್ಕೆ ಮೂರೇ ಹೊತ್ತು ಚಹಾ. ನನ್ನ ಅಣ್ಣ ಕಷ್ಟದಲ್ಲಿದ್ದಾರೆ ಎಂದು ಉಲ್ಲೇಖಿಸಿದ್ದಾರೆ ಎಂದು ವ್ಯಂಗ್ಯವಾಡಿದರು.

ಭಾರತ ರತ್ನ ಪ್ರಶಸ್ತಿಯನ್ನು ಮೊದಲನೇ ಸಚಿವ ಸಂಪುಟದಲ್ಲಿ ಘೋಷಣೆ ಮಾಡುತ್ತಾರೆ. ಎರಡನೇ ಸಚಿವ ಸಂಪುಟ ಸಭೆಯಲ್ಲಿ ಘೋಷಣೆ ಮಾಡಿದವರೇ ತೆಗೆದುಕೊಳ್ಳುತ್ತಾರೆ. ಅದು ನೆಹರು. ಸಾವರ್ಕರ್ ಇವರಿಂದ ಅವಮಾನಿತರಾದರು. ಅಲ್ಲದೆ, ಇತರರು ಅವಮಾನ ಮಾಡುತ್ತಲೇ ಬಂದರು ಎಂದು ಹೇಳಿದರು.

ಬಿಜೆಪಿಯವರು ಚೆನ್ನಾಗಿ ತಿಂದಿದ್ದಾರೆ!: ಕರಿನೀರಿನ ಶಿಕ್ಷೆ ಎಂದರೆ ತಮಾಷೆಯಲ್ಲ. ಕರಿನೀರ ವೀರ ನಾಟಕ ಬರೆಬೇಕೆಂದು ಅನ್ನಿಸಿ ಬರೆಯುತ್ತಿದ್ದೆ. ಅಷ್ಟರಲ್ಲಿ ನಮ್ಮ ಸರ್ಕಾರ ಬಿದ್ದು ಹೋಯಿತು. ಬಿಜೆಪಿಯವರು ಎಷ್ಟೇ ದುಡ್ಡು ತಿಂದರೂ ಅವರು ಇದಿದ್ದರೆ ಈ ನಾಟಕ ಪ್ರದರ್ಶನಕ್ಕೆ ಅನುಕೂಲವಾಗುತ್ತಿತ್ತು. ಅವರು ಚೆನ್ನಾಗಿ ತಿಂದಿದ್ದಾರೆ. ಪಾಪ ಎಷ್ಟೋ ವರ್ಷಗಳ ಕಾಲ ಅಧಿಕಾರ ಸಿಕ್ಕಿಲ್ಲ, ಹಸಿವು. ಇದೀಗ ಸವಾಲಿಗೆ ಈಗಿನ ಸರ್ಕಾರ ಇಳಿದಿದೆ ಎಂದು ಛೇಡಿಸಿದರು.

ನಮ್ಮ ಸರ್ಕಾರ ಇದ್ದಾಗ ಜಿಲ್ಲಾ ರಂಗಮಂದಿರಗಳು ನಮಗೆ ಸಿಗುತ್ತಿದ್ದವು. ಈಗ ಇಲ್ಲಿ ಸಿಕ್ಕಿಲ್ಲ. ಮುಂದೆ ಯಾವುದೂ ಸಿಕ್ಕಲ್ಲ. ಹಾಗಾಗಿ ನಮ್ಮ ಪರಿವಾರದ ಸ್ನೇಹಿತರ ಸಹಕಾರವಾಗಿ ನಿಲ್ಲಬೇಕಾಗುತ್ತದೆ. ನಾಟಕದ ತಾಲೀಮು ಮುಕ್ತಾಯದ ಹಂತಕ್ಕೆ ಬಂದಿದ್ದು, ಇನ್ನು 25 ದಿನಗಳಲ್ಲಿ ಪ್ರದರ್ಶನಕ್ಕೆ ಅಣಿಯಾಗಲಿದೆ ಎಂದರು.




ಕಾವೇರಿ ವಿಚಾರದಲ್ಲಿ ಸುಗ್ರೀವಾಜ್ಞೆ ತಂದು
ಅಧಿಕಾರ ಕಳೆದುಕೊಂಡಿದ್ದ ಮಾಜಿ ಸಿಎಂ ಎಸ್. ಬಂಗಾರಪ್ಪ

- ಈಗಲೂ ಬಂಗಾರಪ್ಪ ನಿರ್ಧಾರ ಸ್ಮರಿಸುವ ಮಂಡ್ಯ ಜನತೆ
- ಬಂಗಾರಪ್ಪ ರೀತಿ ಸಿದ್ದರಾಮಯ್ಯ ನಿರ್ಧಾರ ಕೈಗೊಳ್ಳುವಂತೆ ಒತ್ತಾಯ

● ಎಂ.ಕೆ.ಮೋಹನ್‌ರಾಜ್

ಮಂಡ್ಯ, ಸೆ.21– ತಮಿಳುನಾಡಿಗೆ 15 ದಿನಗಳ ಕಾಲ ನಿತ್ಯ 5 ಸಾವಿರ ಕ್ಯುಸೆಕ್ ನೀರು ಬಿಡಬೇಕೆಂದು ರಾಜ್ಯ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಆದೇಶ ನೀಡಿರುವ ಹಿನ್ನೆಲೆಯಲ್ಲಿ ಸರ್ಕಾರ ಯಾವುದೇ ಕಾರಣಕ್ಕೂ ತಮಿಳುನಾಡಿಗೆ ನೀರು ಬಿಡಬಾರದು ಎಂಬ ಕೂಗು ಈಗ ರಾಜ್ಯದೆಲ್ಲೆಡೆ ಎದ್ದಿದೆ. 1991ರಲ್ಲಿ ಇಂತಹದ್ದೇ ಸನ್ನಿವೇಶ ಎದುರಾದಾಗ ಅಂದಿನ ಮುಖ್ಯಮಂತ್ರಿ ಎಸ್.ಬಂಗಾರಪ್ಪ ಅವರು ಖಡಕ್ ನಿರ್ಧಾರ ಕೈಗೊಂಡಿದ್ದರು. ಪ್ರಸ್ತುತ ಮುಖ್ಯಮಂತ್ರಿ ಸಿದ್ದರಾಮಯ್ಯ ಸಹ ಅದೇ ನಿರ್ಧಾರ ತೆಗೆದುಕೊಳ್ಳಬೇಕು ಎಂದು ರೈತರು ಹಾಗೂ ಕಾವೇರಿ ಹೋರಾಟಗಾರರು ಆಗ್ರಹಿಸಿದ್ದಾರೆ.



ಬಂಗಾರಪ್ಪ ಸೆಡ್ಡು ಹೊಡೆದದ್ದು ಹೇಗೆ?: 1991ರಲ್ಲಿ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಎಸ್.ಬಂಗಾರಪ್ಪನವರು ಕಾವೇರಿ ತೀರ್ಪಿಗೆ ಸೆಡ್ಡು ಹೊಡೆದಿದ್ದರು. ಆಗ ತಮಿಳುನಾಡು ಮುಖ್ಯಮಂತ್ರಿಯಾಗಿದ್ದ ಜೆ.ಜಯಲಲಿತಾ ಕಾವೇರಿ ವಿಚಾರದಲ್ಲಿ ಕ್ಯಾತೆ ತೆಗೆದು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಆಗ ತಮಿಳುನಾಡಿನ ಪರ ಸುಪ್ರೀಂ ಕೋರ್ಟ್‌ನಲ್ಲಿ ತೀರ್ಪು ಬಂದು ಕರ್ನಾಟಕ ಸರ್ಕಾರ ತಮಿಳುನಾಡಿಗೆ ಕಾವೇರಿ ನೀರು ಹರಿಸುವಂತೆ ಕೋರ್ಟ್ ಆದೇಶ ನೀಡಿತ್ತು. ಆ ಸಂದರ್ಭ ತಮಿಳುನಾಡಿಗೆ ನೀರು ಬಿಡುವುದಿಲ್ಲ ಎಂದು ಸುಗ್ರೀವಾಜ್ಞೆ ಜಾರಿಗೆ ತಂದು ನ್ಯಾಯಾಲಯದ ಆದೇಶಕ್ಕೆ ಸೆಡ್ಡು ಹೊಡೆದವರು ಎಸ್.ಬಂಗಾರಪ್ಪ.

ಅದೇ ರೀತಿ ಕನ್ನಡಿಗರ ಸ್ವಾಭಿಮಾನ, ಕನ್ನಡದ ಅಸ್ಮಿತೆ ಕಾಪಾಡಲು ಈಗಿನ ಸಿಎಂ ಸಿದ್ದರಾಮಯ್ಯ ಸಹ ಅದೇ ರೀತಿಯ ಗಟ್ಟಿ ನಿರ್ಧಾರ ಕೈಗೊಳ್ಳಬೇಕು ಎಂದು ಜಿಲ್ಲೆಯ ರೈತರು ಆಗ್ರಹಿಸಿದ್ದಾರೆ. 1991ರಲ್ಲಿ ಕಾವೇರಿ ನೀರು ಬಿಡದಂತೆ ಸುಗ್ರೀವಾಜ್ಞೆ ಹೊರಡಿಸಿದ್ದ ಬಂಗಾರಪ್ಪನವರು ಸಿಎಂ ಸ್ಥಾನವನ್ನೇ ಕಳೆದುಕೊಂಡಿದ್ದರು. ತಮಿಳುನಾಡಿಗೆ 205 ಟಿಎಂಸಿ ಕಾವೇರಿ ನೀರು ಬಿಡುವಂತೆ ಕಾವೇರಿ ಟ್ರಿಬ್ಯೂನಲ್ ಮಧ್ಯಂತರ ಆದೇಶ ನೀಡಿತ್ತು. ಈ ತೀರ್ಪಿಗೆ ವಿರುದ್ಧವಾಗಿ ಬಂಗಾರಪ್ಪ ಸುಗ್ರೀವಾಜ್ಞೆ ಹೊರಡಿಸಿದ್ದರು. ಡ್ಯಾಂನಲ್ಲಿರುವ ನೀರನ್ನು ಸಂರಕ್ಷಿಸುವಂತೆ ರಾಜ್ಯದ ಅಧಿಕಾರಿಗಳಿಗೆ ಬಂಗಾರಪ್ಪ ಕಟ್ಟಪ್ಪಣೆ ಹೊರಡಿಸಿದ್ದರು. ಕನ್ನಡಪರ ಸಂಘಟನೆಗಳು 1991ರ ಡಿ.13ರಂದು ಕರೆ ನೀಡಿದ್ದ ಕರ್ನಾಟಕ ಬಂದ್‌ಗೆ ಮುಖ್ಯಮಂತ್ರಿ ಬಂಗಾರಪ್ಪನವರು ಪರೋಕ್ಷವಾಗಿ ಸಂಪೂರ್ಣ ಬೆಂಬಲ ನೀಡಿದರು. ಅದು ಒಂದು ರೀತಿ ಸರ್ಕಾರಿ ಪ್ರಾಯೋಜಿತ ಬಂದ್ ಆಗಿತ್ತು. ಕೋಪ ತಾಪದಿಂದ ಕುದಿಯುತ್ತಿದ್ದ ಕನ್ನಡಪರ ಕಾರ್ಯಕರ್ತರು ಬೀದಿಗಿಳಿದು ಹೋರಾಟ ನಡೆಸಿದ್ದರು.

ಬಂಗಾರಪ್ಪರನ್ನು ಸ್ಮರಿಸುವ ಮಂಡ್ಯ ಜನ: ಬಂಗಾರಪ್ಪ ಮೂಲತಃ ಶಿವಮೊಗ್ಗದವರಾದರೂ ಮಂಡ್ಯ ರೈತರು ಈಗಲೂ ಅವರನ್ನು ಸ್ಮರಿಸಿಕೊಳ್ಳುತ್ತಾರೆ. ಕಾವೇರಿ ವಿಚಾರದಲ್ಲಿ ಅವಿಸ್ಮರಣೀಯ ತೀರ್ಮಾನ ಕೈಗೊಂಡು ರಾಜ್ಯದಲ್ಲಿ ಅವರ ನಂತರದ ಮುಖ್ಯಮಂತ್ರಿಗಳಿಗೆ ಮಾದರಿಯಾಗಿದ್ದ ಬಂಗಾರಪ್ಪ ಅವರು, ಕಾವೇರಿ ವಿಚಾರದಲ್ಲಿ ರಾಜ್ಯದ ಪರ ನಿಂತು ಮಂಡ್ಯ ರೈತರ ಹಿತ ಕಾಪಾಡಿದ್ದರು. ಆ ಕಾರಣಕ್ಕಾಗಿ ಬಂಗಾರಪ್ಪ ಅವರನ್ನು ಜನ ಸ್ಮರಿಸಿಕೊಳ್ಳುತ್ತಾರೆ. ಕಾವೇರಿ ವಿವಾದ ಭುಗಿಲೆದ್ದಾಗಲೆಲ್ಲ ರಾಜ್ಯವನ್ನಾಳುವ ಮುಖ್ಯಮಂತ್ರಿಗಳು ಬಂಗಾರಪ್ಪರೀತಿ ದಿಟ್ಟ ನಿರ್ಧಾರ ಕೈಗೊಳ್ಳಬೇಕೆಂದು ಹೋರಾಟಗಾರರು ಒತ್ತಾಯ. ಆದರೆ ಬಂಗಾರಪ್ಪ ಬಳಿಕ ಬಂದ ಯಾವುದೇ ಮುಖ್ಯಮಂತ್ರಿಗಳು ಕಾವೇರಿ ವಿಚಾರದಲ್ಲಿ ದಿಟ್ಟತನ ತೋರಿಸದಿರುವುದು ವಿಷಾದನೀಯ.

ರಾಜ್ಯ ಸರ್ಕಾರ ಬೆಳೆ ಪರಿಹಾರ ಘೋಷಿಸಲಿ
ಸಂಸದೆ ಸುಮಲತಾ ಅಂಬರೀಶ್ ಒತ್ತಾಯ



ಮಂಡ್ಯ, ಸೆ.21– ಪ್ರಸ್ತುತ ಕೆಆರ್‌ಎಸ್ ಪರಿಸ್ಥಿತಿ ಅವಲೋಕಿಸಿ ಕುಡಿಯುವ ನೀರನ್ನು ಹೊರತುಪಡಿಸಿ ಕೃಷಿಗೆ ನೀರು ಬಿಡಲು ಆಗಲ್ಲ ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದು, ಇಂತಹ ಪರಿಸ್ಥಿತಿಯಲ್ಲಿ ನಾವು ರೈತರ ಪರ ನಿಲ್ಲಬೇಕು. ರೈತರು ಈಗಾಗಲೇ ಪ್ರತಿಭಟನೆ ಮಾಡುತ್ತಿದ್ದು, ಬೆಳೆಗೆ ನೀರು ಕೊಡಲಾಗದ ಪರಿಸ್ಥಿತಿ ಇರುವ ಹಿನ್ನೆಲೆಯಲ್ಲಿ ಸರ್ಕಾರ ಕೂಡಲೇ ರೈತರಿಗೆ ಬೆಳೆ ಪರಿಹಾರ ಕೊಡಬೇಕು ಎಂದು ಸಂಸದೆ ಸುಮಲತಾ ಅಂಬರೀಶ್ ಒತ್ತಾಯಿಸಿದರು.

ಗುರುವಾರ ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಜಿಲ್ಲೆಯ ಪ್ರಮುಖ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಜಿಲ್ಲಾಧಿಕಾರಿ ಡಾ.ಕುಮಾರ್ ಹಾಗೂ ಕಾವೇರಿ ನೀರಾವರಿ ನಿಗಮದ ಇಇ ಜಯಂತ್ ಸೇರಿದಂತೆ ಪ್ರಮುಖ ಅಧಿಕಾರಿಗಳಿಂದ ಮಾಹಿತಿ ಪಡೆದು ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರೈತರು ಬೆಳೆಗಳಿಗೆ ವಿಮೆ ಮಾಡಿಸಿಕೊಳ್ಳಬೇಕು. ಇಂತಹ ಸಂದರ್ಭ ನೆರವಾಗುತ್ತದೆ. ಆದರೆ ದುರದೃಷ್ಟವಶಾತ್ ಬಹಳಷ್ಟು ರೈತರು ವಿಮೆಗೆ ಮುಂದೆ ಬರಲ್ಲ. ಮಳೆ ಬಂದಾಗ ಕಷ್ಟದ ದಿನಗಳನ್ನು ಮರೆತು ಬಿಡುತ್ತಾರೆ. ಆದರೆ ಮುನ್ನೆಚ್ಚರಿಕೆ ತೆಗೆದುಕೊಳ್ಳುವುದು ಅನಿವಾರ್ಯ ಎಂದು ಸಲಹೆ ನೀಡಿದರು.

ಸುಪ್ರೀಂ ಕೋರ್ಟ್‌ನಲ್ಲಿ ಈ ಬಾರಿ ತೀರ್ಪು ನಮ್ಮ ಪರ ಬರುವ ವಿಶ್ವಾಸವಿತ್ತು. ಈ ತೀರ್ಪಿನಿಂದ ಮತ್ತೆ ಅನ್ಯಾಯವಾಗಿದೆ. ಯಾಕೆ ಪದೇ ಪದೆ ಹೀಗೆ ಆಗುತ್ತಿದೆ ಗೊತ್ತಿಲ್ಲ. ಸುಪ್ರೀಂ ಕೋರ್ಟ್ ಆದೇಶ ಪಾಲಿಸುವ ಅನಿವಾರ್ಯತೆ ಇದೆ. ಈ ಪರಿಸ್ಥಿತಿಯಲ್ಲಿ ರಾಜಕೀಯ ಮಾತನಾಡಲ್ಲ ಎಂದರು.

ಕಾವೇರಿ ವಿಚಾರದಲ್ಲಿ ಯಾರೂ ಮಧ್ಯ ಪ್ರವೇಶ ಮಾಡಲು ಆಗಲ್ಲ. ಆದರೆ ಅನ್ಯಾಯ ಆದ ರೈತರಿಗೆ ಏನು ಉತ್ತರ ಕೊಡುವುದು? ಏನು ಕ್ರಮ ತೆಗೆದುಕೊಳ್ಳಬೇಕು ಎನ್ನುವುದನ್ನು ನಿರ್ಧಾರ ಮಾಡಬೇಕು. ಅಧಿಕಾರಿಗಳಿಂದ ಮಾಹಿತಿ ಪಡೆದಿದ್ದೇನೆ. ಅಧಿಕಾರಿಗಳ ಮಾತು ಕೇಳಿದರೆ ಮತ್ತಷ್ಟು ಆತಂಕ ಆಗುತ್ತದೆ. ಕೃಷಿಗೆ ಇರಲಿ ಕುಡಿಯುವ ನೀರಿಗೂ ತೊಂದರೆ ಆಗುತ್ತದೆ. ಈ ಪರಿಸ್ಥಿತಿಯಲ್ಲಿ ಏನು ಮಾಡಬೇಕು ಎಂಬುದು ತೋಚುತ್ತಿಲ್ಲ ಎಂದರು.

ಸಿಎಂ ಕರೆದಿದ್ದ 3 ಸಭೆಗೂ ನಾನು ಹೋಗಿದ್ದೇನೆ. ನನಗೆ ಇದ್ದ ಅನುಮಾನಗಳಿಗೆ ಸ್ಪಷ್ಟತೆ ಕೇಳಿದ್ದೇವೆ. ಸುಪ್ರೀಂ ಕೋರ್ಟ್ ಮುಂದೆ ವಾಸ್ತವ ಮನವರಿಕೆ ಮಾಡಲು ವಿಫಲವಾಗಿದ್ದೇವೆ. ಬೇರೆ ರಾಜ್ಯದ ಅಧಿಕಾರಿಗಳು ಪ್ರಾಧಿಕಾರ ಸಭೆಗೆ ಹೋಗುತ್ತಾರೆ. ಆದರೆ ನಮ್ಮ ಅಧಿಕಾರಿಗಳು ವಿಡಿಯೋ ಕಾಲ್ ಮೂಲಕ ಭಾಗವಹಿಸುತ್ತಾರೆ. ಹೀಗೇ ಮಾಡಿದರೆ ಅದರ ಪರಿಣಾಮ ಏನಿರುತ್ತದೆ. ನೀರು ಉಳಿಸಿಕೊಳ್ಳಲು ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಇಂತಹ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ತಿಳಿಸಿದರು. ಕೆಆರ್‌ಎಸ್‌ನಲ್ಲಿ 20 ಟಿಎಂಸಿ ನೀರಿದೆ. ಅದರಲ್ಲಿ 4 ಟಿಎಂಸಿ ಡೆಡ್ ಸ್ಟೋರೇಜ್ ಆಗಿದ್ದು, ಉಳಿದ ನೀರಲ್ಲಿ ತಮಿಳುನಾಡಿಗೂ ನೀರು ನಮಗೂ ನೀರು ಉಳಿಸಿಕೊಳ್ಳಬೇಕು. ಮುಂದಿನ ವಾರ ಮಳೆ ಮುನ್ಸೂಚನೆ ಇದೆ. ಅದೊಂದೇ ನಮ್ಮ ಮುಂದಿರುವ ಮಾರ್ಗ. ಮಳೆಯಾದರೆ ಸಮಸ್ಯೆ ಸ್ವಲ್ಪ ದೂರವಾಗಬಹುದು. ಡ್ಯಾಂಗಳ ಪರಿಶೀಲನೆಗೆ ಕೇಂದ್ರ ಸಚಿವರು ಭರವಸೆ ಕೊಡಲಿದ್ದಾರೆ ಎಂದರು.

ಕೆ.ಆರ್.ಪೇಟೆ ಪಿಎಲ್‌ಡಿ ಬ್ಯಾಂಕ್‌ಗೆ 13 ಲಕ್ಷ ಲಾಭ



ಕೆಆರ್.ಪೇಟೆ ಸೆ21– ತಾಲೂಕು ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್ (ಪಿಎಲ್‌ಡಿ) 2022–23ನೇ ಸಾಲಿನಲ್ಲಿ 13 ಲಕ್ಷ ರೂ. ಲಾಭ ಗಳಿಸಿದೆ ಎಂದು ಬ್ಯಾಂಕ್ ಅಧ್ಯಕ್ಷೆ ಜಯಶೀಲ ರಾಮೇಗೌಡ ತಿಳಿಸಿದರು.

ಪಟ್ಟಣದ ಎಸ್.ಎಂ.ಲಿಂಗಪ್ಪ ಸಹಕಾರ ಭವನದಲ್ಲಿ ನಡೆದ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಂಘ ಪ್ರಸಕ್ತ ಸಾಲಿನಲ್ಲಿ 13 ಲಕ್ಷ ಆದಾಯ ಗಳಿಸಿದ್ದು, 1 ಕೋಟಿ ಸಾಲ ನೀಡಲು ಸಿದ್ಧತೆ ಕೈಗೊಳ್ಳಲಾಗಿದೆ. ರೈತರು ಪಡೆದ ಸಾಲವನ್ನು ಸಕಾಲಕ್ಕೆ ಮರುಪಾವತಿಸುವಂತೆ ಮನವಿ ಮಾಡಿದರು.

ಸಂಘದ ನೂತನ ಕಟ್ಟಡವನ್ನು ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಬಳಿ ನಿರ್ಮಿಸಲು ನಿರ್ಧರಿಸಲಾಗಿದೆ. ಇದಕ್ಕೆ ಬೇಕಾದ ಅನುದಾನ ಕೋರಿ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ. ಅನುದಾನ ಬಿಡುಗಡೆಯಾದ ಕೂಡಲೇ ಕಟ್ಟಡ ನಿರ್ಮಿಸಲು ಕ್ರಮ ವಹಿಸಲಾಗುವುದು ಎಂದರು.

ರಾಜ್ಯ ಸಹಕಾರ ಮಹಾ ಮಂಡಳದ ನಿರ್ದೇಶಕ ಎಸ್.ಎಲ್.ಮೋಹನ್ ಮಾತನಾಡಿ, ಬ್ಯಾಂಕ್ ಅಭಿವೃದ್ಧಿಗೆ ಮಹಾಮಂಡಳದಿಂದ ದೊರೆಯಬಹುದಾದ ಸೌಲಭ್ಯಗಳನ್ನು ಕೊಡಿಸುವ ಭರವಸೆ ನೀಡಿದ ಅವರು, ಸಹಕಾರ ಸಂಘಗಳು ಹಾಗೂ ಬ್ಯಾಂಕುಗಳು ರೈತರ ಜೀವನಾಡಿಗಳಾಗಿವೆ. ಸಹಕಾರ ಸಂಸ್ಥೆಗಳಲ್ಲಿ ಪಡೆದ ಸಾಲವನ್ನು ಉದ್ದೇಶಿತ ಯೋಜನೆಗೆ ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಬ್ಯಾಂಕ್ ಕಾರ್ಯದರ್ಶಿ ರವಿಕುಮಾರ್ ವಾರ್ಷಿಕ ಲೆಕ್ಕಪತ್ರದ ವರದಿ ಮಂಡಿಸಿದರು. ಉಪಾಧ್ಯಕ್ಷ ಚಂದ್ರೇಗೌಡ, ನಿರ್ದೇಶಕರಾದ ಪುಟ್ಟಸ್ವಾಮೀಗೌಡ, ಗೋವಿಂದರಾಜು, ಅಂಜನಿಗೌಡ, ಧನಂಜಯ, ಏಜಾಜ್ ಪಾಷಾ, ಸಿ.ಪಿ. ಶಂಭುಲಿಂಗೇಗೌಡ, ಎ.ಆರ್.ರಾಜಾ ನಾಯಕ್, ಎನ್.ಕೆ.ಚಂದ್ರೇಗೌಡ, ಕಮಲಮ್ಮ, ಬಿ.ಆರ್.ಶಿವಕುಮಾರ್, ನಾಗರಾಜು, ರಾಧಾ, ಸರ್ಕಾರಿ ನಾಮಿನಿ ನಿರ್ದೇಶಕ ನಾಗೇಶ್, ಲೆಕ್ಕಾಧಿಕಾರಿ ಮುಬಿನಾ ಸುರೇಶ್ ಸೇರಿದಂತೆ ಬ್ಯಾಂಕ್ ಷೇರುದಾರರು, ಸಿಬ್ಬಂದಿ ವರ್ಗ ಹಾಗೂ ಸಹಕಾರಿ ಧುರೀಣರು ಸಭೆಯಲ್ಲಿ ಭಾಗವಹಿಸಿದ್ದರು.

ಕಾನೂನು ಚೌಕಟ್ಟಿನಲ್ಲಿ ಸಹಕಾರ ಸಂಘ ಕಾರ್ಯ ನಿರ್ವಹಿಸಲಿ



ಚಿನಕುರಳಿ, ಸೆ.21– ಸಹಕಾರ ಸಂಘಗಳು ರೈತರು ಹಾಗೂ ಷೇರುದಾರರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ರೂಪಿಸಿ, ಕಾನೂನು ಚೌಕಟ್ಟಿನಲ್ಲಿ ಕಾರ್ಯ ನಿರ್ವಹಿಸಬೇಕು ಎಂದು ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ತಿಳಿಸಿದರು.

ಚಿನಕುರಳಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 2022–23ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ನಷ್ಟದಲ್ಲಿ ನಡೆಯುತ್ತಿದ್ದ ಗ್ರಾಮದ ಸಹಕಾರ ಸಂಘ ಈ ವರ್ಷ ಸ್ವಲ್ಪ ಲಾಭ ಗಳಿಸಿದೆ. ಸಹಕಾರ ಸಂಘಗಳು ನಡೆಸುವ ಯಾವುದೇ ವ್ಯವಹಾರ, ವಹಿವಾಟು ರೈತರಿಗೆ ಪೂರಕವಾಗಿರಬೇಕು. ಸಂಘದ ಸೂಪರ್ ಮಾರುಕಟ್ಟೆ ಜನರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆ ಎಂದರು. ಕೇಂದ್ರ ಸರ್ಕಾರ ದೇಶದಲ್ಲಿ ಏಕರೂಪದ ಕಾಯ್ದೆಗಳನ್ನು ಜಾರಿಗೊಳಿಸಿದೆ. ಅದಕ್ಕಾಗಿ ಸಹಕಾರ ಸಂಸ್ಥೆಗಳ ಹಲವು ಬೈಲಾ ತಿದ್ದುಪಡಿ ನಡೆಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಪ್ರತಿ ಗ್ರಾಪಂಗೆ ಒಂದು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಸ್ಥಾಪನೆಯಾಗಲಿವೆ ಎಂದರು.

ಈ ವೇಳೆ ವಿಎಸ್‌ಎಸ್‌ಎನ್‌ಬಿ ಅಧ್ಯಕ್ಷ ಮೊಗಣ್ಣೇಗೌಡ, ಉಪಾಧ್ಯಕ್ಷೆ ಪಾರ್ವತಮ್ಮ, ತಾಪಂ ಮಾಜಿ ಸದಸ್ಯ ಸಿ.ಎಸ್.ಗೋಪಾಲಗೌಡ, ಗ್ರಾಪಂ ಅಧ್ಯಕ್ಷೆ ಗಾಯಿತ್ರಿ, ಗುಮ್ಮನಹಳ್ಳಿ ಗ್ರಾಪಂ ಅಧ್ಯಕ್ಷ ರಾಜೇಗೌಡ, ಟಿಎಪಿಸಿಎಂಎಸ್ ನಿರ್ದೇಶಕ ರಾಮಕೃಷ್ಣೇಗೌಡ, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಸಿ.ಪ್ರಕಾಶ್, ಗ್ರಾಪಂ ಮಾಜಿ ಅಧ್ಯಕ್ಷ ನಾಗಣ್ಣ, ಲಾರಿ ಮಾಲೀಕರ ಸಂಘದ ಅಧ್ಯಕ್ಷ ಸಿ.ಶಿವಕುಮಾರ್, ಡೇರಿ ಅಧ್ಯಕ್ಷ ರಮೇಶ್, ಸಿದ್ದಲಿಂಗೇಗೌಡ, ನಿರ್ದೇಶಕರಾದ ಮಂಜುನಾಥ್, ಸಿ.ಬಿ. ವಾಸುದೇವಯ್ಯ, ಮಹದೇವಪ್ಪ, ರಾಮೇಗೌಡ, ಬಿ.ಶಿವಣ್ಣ, ಎ.ಕುಮಾರ್, ಚಂದ್ರ, ಭವ್ಯಶ್ರೀ, ಗಿರೀಶ್, ಕಾರ್ಯದರ್ಶಿ ಸಿ.ಎಂ. ಕಾಂತರಾಜು ಸೇರಿದಂತೆ ಹಲವರಿದ್ದರು.

ಬಿಡದಿ ಬಳಿ ಅಪಘಾತ: ಯುವಕ ಸಾವು

ಚಿನಕುರಳಿ, ಸೆ.21– ರಾಮನಗರ ಜಿಲ್ಲೆ ಬಿಡದಿ ಬಳಿ ಸಂಭವಿಸಿದ ಕಾರು ಅಪಘಾತದಲ್ಲಿ ಗ್ರಾಮದ ಯುವಕ ಸಾವನ್ನಪ್ಪಿದ್ದಾನೆ.



ಗ್ರಾಮದ ಸ್ವಾಮೀಗೌಡ ಹಾಗೂ ಭಾಗ್ಯಮ್ಮ ದಂಪತಿ ಪುತ್ರ ಲೋಕೇಶ್ (30) ಸಾವನ್ನಪ್ಪಿದವರು. ಈತ ಕಾರ್ಯ ನಿಮಿತ್ತ ಬೆಂಗಳೂರಿಗೆ ತೆರಳುವ ಸಂದರ್ಭ ಅಪಘಾತ ಸಂಭವಿಸಿ, ಸಾವನ್ನಪ್ಪಿದ್ದಾನೆ ಎನ್ನಲಾಗಿದೆ. ಗ್ರಾಮದ ಹೊರವಲಯದ ಮೃತನ ಜಮೀನಿನಲ್ಲಿ ನಡೆದ ಅಂತ್ಯಕ್ರಿಯೆಯಲ್ಲಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಶಾಸಕ ಹೆಚ್.ಟಿ. ಮಂಜು, ಜಿಪಂ ಮಾಜಿ ಸದಸ್ಯ ಸಿ. ಅಶೋಕ್, ಲಾರಿ ಮಾಲೀಕರ ಸಂಘದ ಅಧ್ಯಕ್ಷ ಸಿ.ಶಿವಕುಮಾರ್ ಸೇರಿದಂತೆ ಇನ್ನಿತರ ಗಣ್ಯರು ಭಾಗವಹಿಸಿದ್ದರು.

ಒಂದನೇ ಪುಟದಿಂದ

ಕಾವೇರಿತು ಕಾವೇರಿ ಕೂಗು

ಧೋರಣೆ ಅನುಸರಿಸುತ್ತಿದೆ. ರಾಜ್ಯ ಸರ್ಕಾರ ತಮಿಳುನಾಡಿಗೆ ನೀರು ಬಿಡದೇ ಇರುವ ದಿಟ್ಟ ಕ್ರಮ ಕೈಗೊಳ್ಳದೆ ನೀರು ನಿರ್ವಹಣಾ ಪ್ರಾಧಿಕಾರದ ಆದೇಶ ಪಾಲನೆಗಾಗಿ ನೀರು ಬಿಡುವ ಮೂಲಕ ಜಲಾಶಯ ಬರಿದು ಮಾಡುತ್ತಿದೆ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.

ಮಳೆ ಕೊರತೆಯಿಂದಾಗಿ ಕಾವೇರಿ ಜಲಾನಯನ ಪ್ರದೇಶದ ರೈತರ ಸ್ಥಿತಿ ಹದಗೆಟ್ಟಿದೆ. ರೈತರು ಬೆಳೆದ ಬೆಳೆಗೆ ನೀರು ಪೂರೈಸಲು ಸಾಧ್ಯವಾಗದಂತಹ ಸ್ಥಿತಿ ನಿರ್ಮಾಣವಾಗಿದೆ. ಸುಪ್ರಿಂಕೋರ್ಟ್‌ನಲ್ಲಿ ರಾಜ್ಯದ ವಸ್ತುಸ್ಥಿತಿ, ಜಲಾಶಯಗಳಲ್ಲಿ ನೀರಿನ ಪ್ರಮಾಣ, ಬೆಂಗಳೂರು, ಮೈಸೂರು ಸೇರಿದಂತೆ ವಿವಿಧ ನಗರಗಳಿಗೆ ಕುಡಿಯಲು ಬೇಕಾದ ನೀರಿನ ಪ್ರಮಾಣದ ಮಾಹಿತಿಯನ್ನು ನೀಡಿ, ಸಮರ್ಪಕವಾಗಿ ವಾದ ಮಂಡಿಸಲು ಸರ್ಕಾರ ವಿಫಲವಾಗಿದೆ. ಸಂಸದರಿಗೆ ರಾಜ್ಯದ ಹಿತ ಕಾಯುವ ಮನಸ್ಥಿತಿ ಇಲ್ಲದೆ ಕಾವೇರಿ ವಿಚಾರದಲ್ಲಿ ಮೌನ ವಹಿಸಿದ್ದಾರೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಕಾಡಾ ಕಚೇರಿ ಮುಂದೆ ಪ್ರತಿಭಟನೆ: ಮೈಸೂರಿನ ಕಾಡಾ ಕಚೇರಿ ಮುಂಭಾಗ ಶ್ರೀರಂಗಪಟ್ಟಣದ ಭೂಮಿತಾಯಿ ಹೋರಾಟ ಸಮಿತಿ, ಸಾಮೂಹಿಕ ನಾಯಕತ್ವ ಕರ್ನಾಟಕ ರಾಜ್ಯ ರೈತ ಸಂಘ, ಹಸಿರು ಸೇನೆ ಕಾರ್ಯಕರ್ತರು, ರೈತರು ಹಾಗೂ ವಿವಿಧ ಸಂಘಟನೆಗಳ ಮುಖಂಡರೊಂದಿಗೆ ಬೃಹತ್ ಪ್ರತಿಭಟನೆ ನಡೆಸಿದರು. ಗನ್‌ಹೌಸ್ ವೃತ್ತಕ್ಕೆ ಗುರುವಾರ ಬೆಳಗ್ಗೆ ಆಗಮಿಸಿದ ರೈತರು ಸಮೀಪದ ಕಾಡಾ ಕಚೇರಿಗೆ ಮೆರವಣಿಗೆ ಮೂಲಕ ಬಂದು ಧರಣಿ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ಮಾತಿನ ಚಕಮಕಿ: ಕಾಡಾ ಕಚೇರಿಗೆ ಮುತ್ತಿಗೆ ಹಾಕಿ, ಬೀಗ ಹಾಕಲು ಪ್ರತಿಭಟನಾನಿರತ ರೈತರು ಮುಂದಾದಾಗ ಪೊಲೀಸರು ತಡೆದರು. ಈ ವೇಳೆ ಪೊಲೀಸರು ಹಾಗೂ ರೈತರ ನಡುವೆ ಮಾತಿನ ಚಕಮಕಿ ನಡೆಯಿತು. ಬೀಗ ಹಾಕಲು ಪೊಲೀಸರು ಅವಕಾಶ ನೀಡದ ಕಾರಣ ಕಚೇರಿ ಮುಂಭಾಗದಲ್ಲೇ ಧರಣಿ ಮುಂದುವರೆಸಿದರು.

ಬಾಯಿ ಬಡಿದುಕೊಂಡ ಪ್ರತಿಭಟನಾಕಾರರು: ಕಾಡ ಕಚೇರಿ ಮುಂದೆ ಪ್ರತಿಭಟನೆ ನಡೆಸುತ್ತಿದ್ದ ರೈತರು ಕಾವೇರಿ ನೀರು ಹಂಚಿಕೆ ವಿಚಾರದಲ್ಲಿ ರಾಜ್ಯದ 28 ಸಂಸದರು ಸತ್ತಂತೆ ಇದ್ದಾರೆ ಎಂದು 'ಲಭೋ ಲಬೋ' ಎಂದು ಬಾಯಿ ಬಡಿದುಕೊಂಡು ಆಕ್ರೋಶ ವ್ಯಕ್ತಪಡಿಸಿದರು.

ಊಟ ಮಾಡಿ ಪ್ರತಿಭಟನೆ: ಪ್ರತಿಭಟನಾಕಾರರು ಕಾಡಾ ಕಚೇರಿ ಆವರಣದಲ್ಲೇ ಅಡುಗೆ ಮಾಡಿಕೊಂಡು ಊಟ ಮಾಡುವ ಮೂಲಕ ಪ್ರತಿಭಟನೆ ಮುಂದುವರೆಸಿದರು. ಮಧ್ಯಾಹ್ನ ಬೋಜನದ ಬಳಿಕ ಸಂಜೆ 4 ಗಂಟೆವರೆಗೂ ಪ್ರತಿಭಟನೆ ನಡೆಸಿ, ಕೇಂದ್ರ, ರಾಜ್ಯ ಹಾಗೂ ತಮಿಳುನಾಡು ಸರ್ಕಾರ ಮತ್ತು ರಾಜ್ಯದ ಸಂಸದರ ವಿರುದ್ಧ ಘೋಷಣೆ ಕೂಗಿ ಅಸಮಾದಾನ ವ್ಯಕ್ತಪಡಿಸಿದರು. ಬಳಿಕ ಕಾಡಾ ಇಂಜಿನಿಯರೊಬ್ಬರಿಗೆ ಮನವಿ ಸಲ್ಲಿಸಿ ಪ್ರತಿಭಟನೆ ಹಿಂಪಡೆದರು.

ಸ್ಟಾಲಿನ್‌ಗೆ ರಾಕ್ಷಸ ವೇಷ: ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಕನ್ನಡಪರ ಹೋರಾಟಗಾರ ಶಿವಶಂಕರ್ ಖಾಲಿ ಕೊಡದಿಂದ ಮಾಲೆ ಮಾಡಿಕೊಂಡು ಕೊರಳಿಗೆ ಹಾಕಿಕೊಂಡಿದ್ದರು. ಅಲ್ಲದೆ, ಕತ್ತಿಗೆ ತಮಿಳುನಾಡು ಸಿಎಂ ಸ್ಟಾಲಿನ್ ಭಾವಚಿತ್ರವನ್ನು ರಾಕ್ಷಸನಂತೆ ಮಾರ್ಪಡಿಸಿ ನೇತುಹಾಕಿಕೊಂಡು ವಿನೂತನ ಶೈಲಿಯಲ್ಲಿ ಪ್ರತಿಭಟಿಸಿ, ಗಮನ ಸೆಳೆದರು.

ಪ್ರತಿಭಟನೆಯಲ್ಲಿ ಹಿರಿಯ ರೈತ ಹೋರಾಟಗಾರ ಕೆ.ಎಸ್.ನಂಜುಂಡೇಗೌಡ, ರೈತ ಮುಖಂಡರಾದ ಬಿ.ಸಿ.ಕೃಷ್ಣೇಗೌಡ, ಕೃಷ್ಣ, ದರ್ಶನ್, ಮಹದೇವ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ರೈತ ಸಂಘದಿಂದ ಕಪ್ಪುಪಟ್ಟಿ ಧರಿಸಿ ಪ್ರತಿಭಟನೆ: ಕರ್ನಾಟಕ ರಾಜ್ಯ ರೈತ ಸಂಘದ ಕಾರ್ಯಕರ್ತರು ಮೈಸೂರಿನ ನ್ಯಾಯಾಲಯದ ಮುಂಭಾಗದ ಮಹಾತ್ಮಗಾಂಧಿ ಪುತ್ಥಳಿ ಬಳಿ ಕಣ್ಣಿಗೆ ಕಪ್ಪು ಪಟ್ಟಿ ಧರಿಸಿ ಪ್ರತಿಭಟನೆ ನಡೆಸಿ, ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯದ ಜಲಾಶಯಗಳಲ್ಲಿ ನೀರಿನ ಕೊರತೆ ಎದ್ದು ಕಾಣುತ್ತಿದ್ದರೂ ತಮಿಳುನಾಡಿಗೆ 5 ಸಾವಿರ ಕ್ಯುಸೆಕ್ ನೀರು ಬಿಡುವಂತೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಆದೇಶ ನೀಡಿರುವುದು ಖಂಡನೀಯ. ಕಾವೇರಿ ನೀರುವ ಹಂಚಿಕೆ ವಿಚಾರದಲ್ಲಿ ಮೊದಲಿನಿಂದಲೂ ಕರ್ನಾಟಕಕ್ಕೆ ಅನ್ಯಾಯವಾಗುತ್ತಲೇ ಇದೆ. ಪ್ರಾಧಿಕಾರದ ಆದೇಶ ರಾಜ್ಯ ರೈತರ ಹಿತ ಬಲಿಕೊಡುವಂತೆ ಇದೆ ಎಂದು ಆರೋಪಿಸಿದರು.

ಪ್ರಾಧಿಕಾರವೂ ಕರ್ನಾಟಕದ ವಾಸ್ತವಾಂಶ ಅರಿಯಲು ಪ್ರಯತ್ನಿಸಿ ಪೂರ್ವಾಗ್ರಹ ಪೀಡಿತರಾಗಿ ತೀರ್ಪು ನೀಡಿದೆ. ಈಗಾಗಲೇ ತಮಿಳುನಾಡಿಗೆ ಕಳೆದ ಒಂದು ತಿಂಗಳಿಂದ ನೀರು ಹರಿಸಲಾಗಿದೆ. ಕೆಆರ್‌ಎಸ್ ಜಲಾಶಯದ ನೀರಿನ ಪ್ರಮಾಣ 97 ಅಡಿಗೆ ಕುಸಿದಿದೆ. ಆದರೂ, ಪ್ರತಿದಿನ 5 ಸಾವಿರ ಕ್ಯುಸೆಕ್ ನೀರು ಬಿಡುವಂತೆ ಪ್ರಾಧಿಕಾರ ಆದೇಶಿಸಿರುವುದು ರಾಜ್ಯಕ್ಕೆ ಮರಣ ಶಾಸನವಾದಂತೆ ಆಗಿದೆ. ನೀರಿಲ್ಲದಿದ್ದರೂ ನೀರು ಬಿಡುವಂತೆ ನೀಡುವ ಆದೇಶ ಖಂಡನೀಯ ಎಂದು ಆರೋಪಿಸಿದರು. ಪ್ರತಿಭಟನೆಯಲ್ಲಿ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೊಸಕೋಟೆ ಬಸವರಾಜು, ಮಹಿಳಾ ಘಟಕದ ಪ್ರಧಾನ ಕಾರ್ಯದರ್ಶಿ ನೇತ್ರಾವತಿ, ತಾಲೂಕು ಅಧ್ಯಕ್ಷ ನಾಗನಹಳ್ಳಿ ವಿಜೇಂದ್ರ, ಪಿ.ಮರಂಕಯ್ಯ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಪೊರಕೆ ಪ್ರದರ್ಶನ: ಮೈಸೂರಿನ ಜಿ.ಪಂ. ಕಚೇರಿ ಮುಂದೆ ಕರ್ನಾಟಕ ಸೇನಾ ಪಡೆ ಹಾಗೂ ಅಖಿಲ ಕರ್ನಾಟಕ ಒಕ್ಕಲಿಗರ ಸಂಘದ ಕಾರ್ಯಕರ್ತರು ಪೊರಕೆ ಪ್ರದರ್ಶಿಸಿ ಪ್ರತಿಭಟನೆ ನಡೆಸಿದರು.

ಕರ್ನಾಟಕದ ಆಸ್ತಿಯಾಗಿರುವ ಕಾವೇರಿ ನದಿಯ ನೀರನ್ನು ರಾಜ್ಯ ಜನರಿಗಿಂತ ತಮಿಳುನಾಡಿನ ಜನರೇ ಹೆಚ್ಚಿನ ಪ್ರಯೋಜನ ಪಡೆದುಕೊಳ್ಳುವಂತಹ ದುಸ್ಥಿತಿ ನಿರ್ಮಾಣವಾಗಿದೆ. ರಾಜ್ಯದ ಕಾವೇರಿ ಜಲಾಶಯಗಳಲ್ಲಿ ನೀರಿಲ್ಲದಿದ್ದರೂ, ತಮಿಳುನಾಡಿಗೆ ಬೆಳೆ ಬೆಳೆಯಲು ಪದೇ ಪದೆ ನೀರು ಬಿಡಿ ಎಂದು ಆದೇಶ ಮಾಡುತ್ತಿರುವುದು ಖಂಡನೀಯ. ನಮ್ಮ ನೆಲದಲ್ಲೇ ಇರುವ ಕೆಆರ್‌ಎಸ್ ಅಣೆಕಟ್ಟೆಯಿಂದ ಪ್ರತಿ ಬಾರಿ ನೀರು ತಮಿಳುನಾಡಿಗೆ ಹೆಚ್ಚಿನ ನೀರು ಬಿಡಲಾಗುತ್ತಿದೆ. ಕಾವೇರಿ ನೀರು ನಿರ್ವಹಣಾ ಮಂಡಳಿ ದೇಶದ ಒಕ್ಕೂಟದ ವ್ಯವಸ್ಥೆಗೆ ಅಗೌರವವನ್ನು ತೋರುತ್ತಿದೆ. ತಮಿಳುನಾಡು ಸರ್ಕಾರ ತನ್ನ ರಾಜಕೀಯ ಅಸ್ತಿತ್ವವನ್ನು ಉಳಿಸಿಕೊಳ್ಳಲು ಪದೇ ಪದೆ ನಮ್ಮ ಮೇಲೆ ಕ್ಯಾತೆ ತೆಗೆಯುತ್ತಿದೆ ಎಂದು ಆರೋಪಿಸಿದರು.

ಪ್ರತಿಭಟನೆಯಲ್ಲಿ ಅಖಿಲ ಕರ್ನಾಟಕ ಒಕ್ಕಲಿಗರ ಸಂಘದ ಅಧ್ಯಕ್ಷ ಸಿ.ಜಿ.ಗಂಗಾಧರ್, ಕರ್ನಾಟಕ ಸೇನಾ ಪಡೆ ಅಧ್ಯಕ್ಷ ತೇಜೇಶ್ ಲೋಕೇಶ್ ಗೌಡ, ಪ್ರಭುಶಂಕರ್, ವಿಜಯೇಂದ್ರ, ಕೃಷ್ಣಯ್ಯ, ಶಾಂತ ರಾಜೇಅರಸ್, ನರಸಿಂಹೇಗೌಡ, ಗಿರೀಶ್, ಯಶ್ವಂತ್, ಆರ್ ಮಹಾದೇವ ಸ್ವಾಮಿ, ನೇಹಾ, ಸೋಮಶೇಖರ್, ನಾಗಣ್ಣ, ಎಳನೀರು ರಾಮಣ್ಣ, ದರ್ಶನ್, ಹರೀಶ್, ಕುಮಾರಗೌಡ, ಶ್ರೀನಿವಾಸ ರಾಜ ಕುಮಾರ್, ಅನಿಲ್, ಹನುಮಂತಯ್ಯ, ಗಣೇಶ್ ಪ್ರಸಾದ್, ಬಸವರಾಜು, ಮಿನಿ ಬಂಗಾರಪ್ಪ ಪ್ರದೀಪ್, ದಿಲೀಪ್, ಸುಬ್ಬೇಗೌಡ, ಕೃಷ್ಣಮೂರ್ತಿ ಇತರರು ಪಾಲ್ಗೊಂಡಿದ್ದರು.

ಕುಲಪತಿ

ಪೀಠ ಸೂಚಿಸಿದೆ. ಹೈಕೋರ್ಟ್ ವಿಭಾಗೀಯ ಪೀಠದ ಆದೇಶ ಬರುತ್ತಿದ್ದಂತೆ ಪ್ರೊ.ಲೋಕನಾಥ್ ಅವರು ಮತ್ತೆ ಮೈಸೂರು ವಿಶ್ವ ವಿದ್ಯಾನಿಲಯದ ಕುಲಪತಿಯಾಗಿ ಕರ್ತವ್ಯಕ್ಕೆ ಹಾಜರಾದರು. ಹೈಕೋರ್ಟ್ ವಿಭಾಗೀಯ ಪೀಠದ ಆದೇಶದಿಂದ ಬೇಸರವಾಗಿದೆ ಎಂದು ಪ್ರೊ.ಲೋಕನಾಥ್ ನೇಮಕಾತಿ ಪ್ರಶ್ನಿಸಿ ನ್ಯಾಯಾಲಯದಲ್ಲಿ ಹೋರಾಟ ಮಾಡುತ್ತಿರುವ ಪ್ರೊ.ಶರತ್ ಅನಂತ ಮೂರ್ತಿ ಪ್ರತಿಕ್ರಿಯೆ ನೀಡಿದ್ದಾರೆ.

ಹೈಕೋರ್ಟ್ ವಿಭಾಗೀಯ ಪೀಠ ಅಂತಿಮ ತೀರ್ಪು ನೀಡಿಲ್ಲ. ಇದರಿಂದ ನ್ಯಾಯ ನನಗೆ ಸಿಗುತ್ತದೆ ಎಂಬ ವಿಶ್ವಾಸವಿದೆ ಮುಂದಿನ ವಿಚಾರಣೆ ವೇಳೆ ನಮ್ಮ ವಕೀಲರು ಸಮರ್ಥವಾದ ಮಂಡಿಸಲಿದ್ದಾರೆ ಎಂದು ಪ್ರೊ.ಶರತ್ ಅನಂತಮೂರ್ತಿ ತಿಳಿಸಿದರು.

ಮಂಡಿಸಲು ಸರ್ಕಾರ ವಿಫಲ

ಕೋರ್ಟ್ ಆದೇಶಕ್ಕೂ ಮೊದಲೇ ನೀರು ಬಿಟ್ಟು ತಪ್ಪು ಮಾಡಿದರು. ಈಗ ಕೋರ್ಟ್‌ನಲ್ಲಿ ಸರಿಯಾಗಿ ವಾದ ಮಂಡಿಸದೇ ವಿಫಲರಾದರು. ನಾವು ನೀಡುವ ಅಂಕಿ–ಅಂಶಗಳ ಮೇಲೆ ಕೋರ್ಟ್ ಆದೇಶ ನೀಡುತ್ತದೆ, ಆದರೆ ರಾಜ್ಯ ಕಾಂಗ್ರೆಸ್ ಸರ್ಕಾರ ಸಮರ್ಥವಾಗಿ ವಾದ ಮಾಡದಿರುವುದು ಹಿನ್ನಡೆಗೆ ಕಾರಣವಾಗಿದೆ ಎಂದರು.

ಸರ್ಕಾರ ಮೊದಲಿನಿಂದಲೂ ಕಾವೇರಿ ವಿಚಾರದಲ್ಲಿ ತಪ್ಪು ಮಾಡಿಕೊಂಡು ಬಂದಿದೆ. ಡಿಎಂಕೆ ಹಾಗೂ ಕಾಂಗ್ರೆಸ್ ನಡುವೆ ಹೊಂದಾಣಿಕೆ ಕೂಡಾ ಇದಕ್ಕೆ ಒಂದು ಕಾರಣ ಎಂದು ಯಡಿಯೂರಪ್ಪ ಆಕ್ಷೇಪಿಸಿ ದರು. ಇನ್ನಾದರೂ ಕಾಂಗ್ರೆಸ್ ನಾಯಕರು ತಮಿಳುನಾ ಡಿನ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಜತೆ ಮಾತುಕತೆ ನಡೆಸಿ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನಿಸಬೇಕು ಎಂದು ಹೇಳಿದ್ದಾರೆ. ಸಮಸ್ಯೆಯನ್ನು ಬಗೆಹರಿಸುವಲ್ಲಿ ಕೇಂದ್ರ ಸರ್ಕಾರ ಮಧ್ಯಪ್ರವೇಶ ಮಾಡುವಂತೆ ಒತ್ತಾಯ ಮಾಡುವುದು ಸರಿಯಲ್ಲ, ಕಾಂಗ್ರೆಸ್ ತನ್ನ ಮಿತ್ರ ಪಕ್ಷವಾದ ಡಿಎಂಕೆಯ ನಾಯಕರ ಜೊತೆ ಮಾತ ನಾಡಬೇಕು ಎಂದು ಅವರು ಹೇಳಿದರು.

ಸುಪ್ರೀಂಕೋರ್ಟ್‌ನಲ್ಲಿ ಹಿನ್ನಡೆಯಾಗಿರುವುದರಿಂದ ಡಿಎಂಕೆ ನಾಯಕರ ಜತೆ ಮಾತುಕತೆ ನಡೆಸಿ ಪರಿಹಾರ ಕಂಡುಕೊಳ್ಳಬಹುದು. ಇದನ್ನು ಕಾಂಗ್ರೆಸ್ ನಾಯಕರು ಪ್ರಯತ್ನಿಸಬೇಕು. ಹೋಂ ವರ್ಕ್ ಮಾಡದೆ ಕೋರ್ಟ್ ಮೆಟ್ಟಿಲೇರಿರುವ ಸರಕಾರ ತಕ್ಷಣವೇ ಸುಪ್ರೀಂಕೋರ್ಟ್ ಆದೇಶಕ್ಕೆ ಮೇಲ್ಮನವಿ ಸಲ್ಲಿಸಿ ವಾಸ್ತವಿಕ ಪರಿಸ್ಥಿತಿ ವಿವರಿಸಬೇಕು. ಸುಪ್ರೀಂಕೋರ್ಟ್ ನ್ಯಾಯಾಧೀಶರ ಸಮಿತಿಯನ್ನು ರಾಜ್ಯಕ್ಕೆ ಕಳುಹಿಸಿ ಜಲಾಶಯಗಳಿಗೆ ಭೇಟಿ ಕೊಟ್ಟು ವಾಸ್ತವ ಸ್ಥಿತಿ ಅಧ್ಯಯನ ಮಾಡಲು ಆದೇಶ ನೀಡುವಂತೆ ಮೇಲ್ಮನವಿ ಸಲ್ಲಿಸಬೇಕು. ಪ್ರಾಧಿಕಾರದ ಆದೇಶಕ್ಕೆ ನಾವು ಮಧ್ಯ ಪ್ರವೇಶ ಮಾಡಲ್ಲ ಎಂದು ಸುಪ್ರೀಂಕೋರ್ಟ್ ಹೇಳಿದ್ದರಿಂದ ಸುಪ್ರೀಂ ಕೋರ್ಟ್ ಜಲಾಶಯಗಳ ವೀಕ್ಷಣೆಗೆ ಯಾವುದಾದರೂ ಸಮಿತಿಯನ್ನು ಕಳುಹಿಸಿ ಕೊಡಲಿ. ಇದನ್ನು ಸರ್ಕಾರ ಮೇಲ್ಮನವಿಯಲ್ಲಿ ಮನವಿ ಮಾಡಬೇಕು ಎಂದು ಸಲಹೆ ನೀಡಿದ್ದಾರೆ.

ಜ್ಞಾನ ಇಲ್ಲದವರು ಅಧಿಕಾರದಲ್ಲಿದ್ದಾರೆ

ಬರುವುದಕ್ಕೂ ಮೊದಲೂ ತಾವು ಹೇಳಿದ ಮಾತನ್ನು ಕೇಳಿಸಿಕೊಳ್ಳುವ ಸೌಜನ್ಯ, ಜನಪರ ಕಾಳಜಿ ಸರಕಾರಕ್ಕೆ ಇರಲಿಲ್ಲ. ರಾಜ್ಯ ಸರಕಾರಕ್ಕೆ ಜನಹಿತಕ್ಕಿಂತ ರಾಜಕಾರಣವೇ ಮುಖ್ಯವಾಗಿದೆ, ತಮಿಳುನಾಡಿನ ಆಡಳಿತ ಪಕ್ಷದ ಜೊತೆ ಕಾಂಗ್ರೆಸ್ ಪಕ್ಷ ತಳುಕು ಹಾಕಿಕೊಂಡು ಕರ್ನಾಟಕದ ಕಾವೇರಿ ಹಿತವನ್ನು ವ್ಯವಸ್ಥಿತವಾಗಿ ಬಲಿ ಕೊಟ್ಟಿದೆ ಎಂದು ಟೀಕಿಸಿದರು.

ಆಗಸ್ಟ್ 10ರಂದು ಕಾವೇರಿ ಜಲ ನಿಯಂತ್ರಣ ಸಮಿತಿ ಸಭೆ ನಡೆದು, ಮರುದಿನ ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರ ಸಭೆಯಲ್ಲಿ, ಮುಂದಿನ 15 ದಿನ ತಮಿಳುನಾಡಿಗೆ 5000 ಕ್ಯುಸೆಕ್ ನೀರು ಬಿಡುವಂತೆ ರಾಜ್ಯಕ್ಕೆ ಪ್ರಾಧಿಕಾರ ಸೂಚನೆ ನೀಡಿತು. ಆಗಲೇ ಸುಪ್ರೀಂ ಕೋರ್ಟ್‌ಗೆ ತುರ್ತು ಅರ್ಜಿ ಸಲ್ಲಿಸಿ, ನ್ಯಾಯಾಲಯಕ್ಕೆ ರಾಜ್ಯದಲ್ಲಿನ ನೀರಿನ ವಾಸ್ತವಸ್ಥಿತಿ ಮನವರಿಕೆ ಮಾಡಿಕೊಡಬೇಕಿತ್ತು. ಹಾಗೆ ಮಾಡದೆ, ಸುಪ್ರೀಂಕೋರ್ಟ್ ಕಡೆಯೂ ಮುಖ ಮಾಡದೆ, ಐ.ಎನ್.ಡಿ.ಐ.ಎ. ಮೈತ್ರಿಕೂಟಕ್ಕೆ ಶಕ್ತಿ ತುಂಬಲು ಪ್ರಾಧಿಕಾರದ ಆದೇಶವನ್ನೇ ನೆಪ ಮಾಡಿಕೊಂಡು ತಮಿಳುನಾಡಿಗೆ ನೀರು ಹರಿಸುವಂತೆ ಆದೇಶಿಸುವ ಮೂಲಕ ಸರ್ಕಾರ ತನ್ನ ತಲೆ ಮೇಲೆ ತಾನೇ ಚಪ್ಪಡಿ ಎಳೆದುಕೊಂಡಿದ್ದಲ್ಲದೆ, ಕನ್ನಡಿಗರ ಮೇಲೂ ಚಪ್ಪಡಿ ಎಳೆದುಬಿಟ್ಟಿತು ಎಂದರು.

ಸರಕಾರದ ತಪ್ಪು ಇಷ್ಟಕ್ಕೇ ನಿಲ್ಲದೆ, ನಿಯಂತ್ರಣ ಸಮಿತಿ & ಪ್ರಾಧಿಕಾರದ ಸಭೆಗಳನ್ನು ಬಹಳ ಲಘುವಾಗಿ ಪರಿಗಣಿಸಿತು. ಸರ್ವಪಕ್ಷ ಸಭೆಯಲ್ಲಿ ವಿರೋಧ ಪಕ್ಷಗಳ ನಾಯಕರು ಕೊಟ್ಟ ಸಲಹೆಗಳನ್ನೂ ಗಾಳಿಗೆ ತೂರಿತು. ವಿರೋಧ ಪಕ್ಷಗಳ ನಾಯಕರ ಸಲಹೆಗೆ ಕವಡೆಕಾಸಿನ ಕಿಮ್ಮತ್ತೂ ಕೊಡದೆ ಕನ್ನಡಿಗರ ಹಿತವನ್ನು ತನ್ನ ರಾಜಕೀಯ ಸ್ವಾರ್ಥಕ್ಕೆ ಸರ್ಕಾರ ಬಲಿ ಕೊಟ್ಟಿತು ಎಂದರು.

ಮೀಸಲಾತಿ ಅಂಗೀಕಾರ

ಪರಿಗಣಿಸುವ ಪ್ರಸ್ತಾವನೆಯನ್ನು ರಾಜ್ಯಸಭೆಯು ಸರ್ವಾನುಮತದಿಂದ ಅಂಗೀಕರಿಸಿತು. ಸದನದಲ್ಲಿ ಹಾಜರಿದ್ದ ಎಲ್ಲ 215 ಸದಸ್ಯರು ಮಸೂದೆ ಅಂಗೀಕರಿಸುವ ನಿರ್ಣಯವನ್ನು ಬೆಂಬಲಿಸಿದರು. ಸ್ವಯಂಚಾಲಿತ ಮತದಾನ ತಂತ್ರಜ್ಞಾನವನ್ನು ಬಳಸಿ ಕೊಂಡು ಸಂಸದರು ಮಸೂದೆಯ ಪರವಾಗಿ ತಮ್ಮ ಮತ ಚಲಾಯಿಸಿದರು. ಮತದಾನದ ನಂತರ ಸಭಾಪತಿ ಜಗದೀಪ್ ಧನಕರ್ ಅವರು ಮಸೂದೆ ಪರವಾಗಿ 'ಹೌದು' ಎನ್ನುವವರ ಸಂಖ್ಯೆ 215 ಹಾಗೂ 'ಇಲ್ಲ' ಎನ್ನುವ ವರ ಸಂಖ್ಯೆ ಶೂನ್ಯವಾಗಿದ್ದು, ನಿರ್ಣಯ ಅಂಗೀಕರಿಸಲಾಗಿದೆ. ಇದು ಐತಿಹಾಸಿಕ ಸಾಧನೆ.. ಅಭಿನಂದನೆಗಳು ಎಂದು ಪ್ರಕಟಿಸಿದರು. ಲೋಕಸಭೆಯಲ್ಲೂ ಬುಧವಾರ ಬಹುಮತ ದೊಂದಿಗೆ ಮಸೂದೆಯನ್ನು ಅಂಗೀ ಕರಿಸಲಾಗಿತ್ತು. 454 ಸಂಸದರು ಮಸೂದೆ ಪರವಾಗಿ ಮತ ಚಲಾವಣೆ ಮಾಡಿದ್ದು, ಕೇವಲ ಇಬ್ಬರು ಸದಸ್ಯರು ಮಸೂದೆ ವಿರುದ್ಧ ತಮ್ಮ ಮತ ಹಾಕಿದ್ದರು. ರಾಜ್ಯಸಭೆಯಲ್ಲಿ ಮಹಿಳಾ ಮೀಸಲಾತಿ ಮಸೂದೆಯನ್ನು ಅಂಗೀಕರಿ ಸಿದ್ದಕ್ಕಾಗಿ ಸಂಸದರಿಗೆ ಪ್ರಧಾನಿ ನರೇಂದ್ರ ಮೋದಿ ಧನ್ಯವಾದ ಅರ್ಪಿಸಿದರು. ಈ ಮಸೂದೆಯು ದೇಶದ ಜನರಲ್ಲಿ ಹೊಸ ವಿಶ್ವಾಸಕ್ಕೆ ಕಾರಣವಾಗಲಿದೆ. ಜೊತೆಗೆ ಇದು ಮಹಿಳಾ ಸಬಲೀಕರಣಕ್ಕೆ ಹೊಸ ಶಕ್ತಿ ನೀಡುವ ಎಲ್ಲ ರಾಜಕೀಯ ಪಕ್ಷಗಳ ಸಕಾರಾತ್ಮಕ ಚಿಂತನೆಯನ್ನು ತೋರಿಸುತ್ತದೆ ಎಂದು ಪ್ರಧಾನಿ ಹೇಳಿದರು.

ಉದ್ಯಮಿಗೆ 5 ಕೋಟಿ ವಂಚನೆ ಕೇಸಿನಲ್ಲಿ 2.76 ಕೋಟಿ ರೂ. ಜಪ್ತಿ ಮಾಡಿದ ಸಿಸಿಬಿ

ಬೆಂಗಳೂರು, ಸೆ.21– ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಟಿಕೆಟ್ ಕೊಡಿಸುವ ನೆಪದಲ್ಲಿ ಉದ್ಯಮಿಗೆ 5 ಕೋಟಿ ರೂ. ವಂಚಿಸಿದ ಪ್ರಕರಣದಲ್ಲಿ ಬಂಧಿತರಿಂದ 2.76 ಕೋಟಿ ರೂ.ಗಳನ್ನು ಸಿಸಿಬಿ ಪೊಲೀಸರು ಜಪ್ತಿ ಮಾಡಿದ್ದಾರೆ ಎಂದು ನಗರ ಪೊಲೀಸ್ ಆಯುಕ್ತ ಬಿ. ದಯಾನಂದ್ ತಿಳಿಸಿದರು.

ಗುರುವಾರ ಸುದ್ದಿಗಾರರ ಜತೆ ಮಾತನಾಡಿ, ಪ್ರಕರಣ ಕುರಿತು ಸಮಗ್ರ ತನಿಖೆ ನಡೆಯುತ್ತಿದ್ದು, ಮತ್ತಷ್ಟು ಮಾಹಿತಿ ಹೊರಬರಲಿದೆ. ಇದುವರೆಗೆ ಚೈತ್ರಾ ಕುಂದಾಪುರ ಸೇರಿ 8 ಆರೋಪಿಗಳನ್ನು ಬಂಧಿಸಲಾಗಿದೆ. ಚೈತ್ರಾ ಬಳಿ 2 ಕೋಟಿ ರೂ., ಹಾಲಶ್ರೀಯಿಂದ 56 ಲಕ್ಷ ರೂ., ಮತ್ತೊಬ್ಬ ಆರೋಪಿಯಿಂದ 20 ಲಕ್ಷ ರೂ. ಜಪ್ತಿ ಮಾಡಲಾಗಿದೆ ಎಂದು ತಿಳಿಸಿದರು.

ಹಿರೇಹಡಗಲಿಯ ಹಾಲಶ್ರೀ ಸ್ವಾಮೀಜಿ ಮಠದ ಅಭಿನವ ಹಾಲವೀರಪ್ಪಜ್ಜ ಸ್ವಾಮೀಜಿ ಕಾರು ಚಾಲಕ ರಾಜು ಮೈಸೂರಿನ ವಕೀಲ ಪ್ರಣವ್ ಪ್ರಸಾದ್ ಕಚೇರಿಯಲ್ಲಿ ಹಣದ ಬ್ಯಾಗ್ ಇರಿಸಿದ್ದ. ಬುಧವಾರ ವಕೀಲ ಪ್ರಣವ್ ಪ್ರಸಾದ್, ಖುದ್ದಾಗಿ ಮಠಕ್ಕೆ ಬಂದು 56 ಲಕ್ಷ ರೂ. ಇದ್ದ ಬ್ಯಾಗ್‌ನ್ನು ಇಟ್ಟು ಹೋಗಿದ್ದು, ಸಿಸಿಬಿಗೂ ಪತ್ರ ಬರೆದಿದ್ದಾರೆ. ಈ ಹಣವನ್ನು ಜಪ್ತಿ ಮಾಡಲಾಗಿದೆ. ಮುಂದುವರಿದ ಭಾಗವಾಗಿ ಪ್ರಕರಣ ಸಂಬಂಧ ವಕೀಲ ಪ್ರಣವ್ ಪ್ರಸಾದ್, ತಿಪ್ಪೇಸ್ವಾಮಿ ಸೇರಿ ನಾಲ್ವರಿಗೆ ಸಿಸಿಬಿ ನೋಟಿಸ್ ಕೊಟ್ಟು ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದೆ ಎಂದು ತಿಳಿದು ಬಂದಿದೆ.


ಖಾತೆಗಳ ಮಾಹಿತಿ ಪಡೆದ ಪೊಲೀಸರು: ಹಿರೇಹಡಗಲಿ ಹಾಲಸ್ವಾಮಿ ಮಠಕ್ಕೆ ಬುಧವಾರ ಆರೋಪಿಯೊಂದಿಗೆ ತೆರಳಿದ್ದ ಸಿಸಿಬಿ ಪೊಲೀಸರು ತಡರಾತ್ರಿವರೆಗೆ ಮಹಜರು ಮಾಡಿ, 56.03 ಲಕ್ಷ ರೂ. ವಶಕ್ಕೆ ಪಡೆದರು. ಆರೋಪಿಯನ್ನು ಕುಟುಂಬಸ್ಥರೊಂದಿಗೆ ಮಾತನಾಡಲು ಬಿಡದೆ ವಿಚಾರಣೆ ನಡೆಯಿತು. ಬಳಿಕ ಕುಟುಂಬಸ್ಥರು ಹಾಲಶ್ರೀ ಅವರನ್ನು ಮಾತನಾಡಿಸಿದಾಗ ಉತ್ತರಿಸದೆ ಮೌನವಾಗಿದ್ದರು ಎನ್ನಲಾಗಿದೆ. ಗುರುವಾರ ಬೆಳಗ್ಗೆಯಿಂದ ಹೆಚ್ಚಿನ ವಿಚಾರಣೆ ನಡೆಯಿತು. ಹಿರೆಹಡಗಲಿಯ ಕೆಜಿಬಿ ಬ್ಯಾಂಕ್ ಖಾತೆ ಮತ್ತು ಲಾಕರ್, ಬಿಡಿಸಿಸಿ ಬ್ಯಾಂಕ್ ಖಾತೆ ಹಾಗೂ ಹೂವಿನಹಡಗಲಿಯ ಐಡಿಎಫ್‌ಸಿ ಬ್ಯಾಂಕ್ ಖಾತೆಗಳನ್ನು ಪರಿಶೀಲಿಸಿ ಮಾಹಿತಿ ಪಡೆದಿದ್ದಾರೆ.

ಅ.1, ಸರ್ಕಾರಿ ನೌಕರರ ಸಂಘದ ಮಹಾಸಭೆ

ಮೈಸೂರು.ಸೆ.21– ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ 2022ರ ಉಪವಿಧಿಗಳನ್ನು ತಿದ್ದುಪಡಿ ಮಾಡಲು ಉದ್ದೇಶಿಸಲಾಗಿದ್ದು, ಸರ್ವ ಸದಸ್ಯರ ಮಹಾಸಭೆಯನ್ನು ವರ್ಚುವಲ್, ವಾಸ್ತವ ವಿಧಾನದ ಮೂಲಕ ಅ.1ರಂದು ಬೆಳಗ್ಗೆ 11 ಗಂಟೆಗೆ ಸರ್ಕಾರಿ ರಾಜ್ಯ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್. ಷಡಕ್ಷರಿ ಅಧ್ಯಕ್ಷತೆಯಲ್ಲಿ ಕೊಪ್ಪಳ ಜಿಲ್ಲೆಯ ಹಿರೇ ಸಿಂದೋಗಿ ರಸ್ತೆಯಲ್ಲಿನ ಗೋಶಾಲೆ ಹತ್ತಿ ರದ ಮಹಾವೀರ ಸಮುದಾಯ ಭವನದಲ್ಲಿ ಸರ್ವ ಸದಸ್ಯರ ವಿಶೇಷ ಸಭೆ ಆಯೋಜಿಸಲಾಗಿದೆ. ವರ್ಚುವಲ್ ಸಭೆಯಲ್ಲಿ ಭಾಗವಹಿಸಲು ಮುಕ್ತ ಅವಕಾಶವನ್ನು ಕಲ್ಪಿಸಲಾಗಿದ್ದು, http://www. bit.ly/ksgeasdplgbm ಲಿಂಕ್ ಮೂಲಕ ಸಭೆಯಲ್ಲಿ ಭಾಗವಹಿಸಬಹು ದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೈಸೂರು ಜಿಲ್ಲಾಧ್ಯಕ್ಷ ಜೆ.ಗೋವಿಂದ ರಾಜು ದೂ.ಸಂ: 98457 67004, ಕಾರ್ಯದರ್ಶಿ ರೇವಣ್ಣ ಅವರನ್ನು ಸಂಪ ರ್ಕಿಸಬಹುದು ಎಂದು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯ ಕ್ಷರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾವೇರಿ ವಿವಾದ: ಕರ್ನಾಟಕ ಬಂದ್‌ಗೆ ಚಿಂತನೆ
ತಮಿಳರನ್ನು ವಾಪಸ್ ಕರೆಸಿಕೊಳ್ಳಿ: ವಾಟಾಳ್ ನಾಗರಾಜ್ ಆಗ್ರಹ

ಬೆಂಗಳೂರು, ಸೆ.21– ತಮಿಳುನಾಡಿಗೆ ಕಾವೇರಿ ನೀರು ಹರಿಸುವಂತೆ ಸುಪ್ರೀಂ ಕೋರ್ಟ್ ಆದೇಶ ನೀಡಿರುವ ಬೆನ್ನಲ್ಲೇ, ಕರ್ನಾಟಕ ಬಂದ್‌ಗೆ ಚಿಂತನೆ ನಡೆಸಲಾ ಗುವುದು ಎಂದು ಕನ್ನಡ ಪರ ಹೋರಾಟ ಗಾರ ವಾಟಾಳ್ ನಾಗರಾಜ್ ತಿಳಿಸಿದ್ದಾರೆ.



ವಿಧಾನಸೌಧದಲ್ಲಿ ಸುದ್ದಿ ಗಾರರೊಂದಿಗೆ ಮಾತನಾಡಿದ ಅವರು, ಸುಪ್ರೀಂಕೋರ್ಟ್‌ನಲ್ಲಿ ಸ್ಟಾಲಿನ್‌ಗೆ ಗೆಲುವಾಗಿದೆ. ನಮ್ಮ ವಾದ ಆಲಿಸಬೇಕಿತ್ತು, ಕತ್ತು ಕಡಿದಿದ್ದಾರೆ, ರುಂಡ ಕೆಳಗೆ ಬಿದ್ದಿದ್ದೇ ಸರಿ ಅಂತಾ ಸುಪ್ರೀಂ ಹೇಳಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಪ್ರಾಧಿಕಾರ ನೀಡಿದ ತೀರ್ಪಿನ ಬಗ್ಗೆ ಸುಪ್ರೀಂಕೋರ್ಟ್ ನಮ್ಮ ವಾದ ಕೇಳಬೇಕಿತ್ತು. ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದವರು ನಮ್ಮ ಕತ್ತು ತೆಗೆದಿದ್ದಾರೆ. ಅವರು ದೆಹಲಿ ಯಲ್ಲಿದ್ದಾರೆ. ಪ್ರಾಧಿಕಾರದವರು ಕರ್ನಾಟಕಕ್ಕೆ ಬಂದು ಕಾವೇರಿ ಭಾಗದ ಎಲ್ಲಾ ಜಲಾಶಯ ನೋಡಲಿ. ನ್ಯಾಯ ಕೇಳೋದಕ್ಕೆ ನಾವು ಎಲ್ಲಿಗೆ ಹೋಗಬೇಕು ಎಂದು ಪ್ರಶ್ನಿಸಿದರು. ಕರ್ನಾಟಕ ದಿಕ್ಕಿಲ್ಲದಂತೆ ಆಗಿದೆ. ಮುಖ್ಯಮಂತ್ರಿ ಏನು ನಿರ್ಧಾರ ಮಾಡ್ತಾರೆ ನೋಡೋಣ. ರಾಜ್ಯದ ಎಲ್ಲಾ ಸಂಸದರು ರಾಜೀನಾಮೆ ಕೊಟ್ಟು ನಿಮ್ಮ ಧೈರ್ಯ ತೋರಿಸಿ ಎಂದು ಆಗ್ರಹಿಸಿದರು.

ಮೈಸೂರು ಮಿತ್ರ
ಶುಕ್ರವಾರ 22 ಸೆಪ್ಟೆಂಬರ್ 2023

ಪ್ರಧಾನಿ ಮೋದಿ ಜನ್ಮದಿನದ ಹಿನ್ನೆಲೆಯಲ್ಲಿ ಶಾಲಾ ಮಕ್ಕಳಿಗೆ ಸಮವಸ್ತ್ರ ವಿತರಣೆ



ಮೈಸೂರು, ಸೆ. 21– ಪ್ರಧಾನಿ ಮೋದಿ ಅವರ ಜನ್ಮದಿನ ಅಂಗವಾಗಿ ಚಾಮರಾಜ ಕ್ಷೇತ್ರದ ಬಿಜೆಪಿ ಕಾರ್ಯಕರ್ತರು ಹಾಗೂ ನಾಗೇಂದ್ರ ಅಭಿಮಾನಿ ಬಳಗದ ವತಿಯಿಂದ ಮಂಡಿ ಮೊಹಲ್ಲಾ ಸರ್ಕಾರಿ ಶಾಲೆಯ ಮಕ್ಕಳಿಗೆ ಸಮವಸ್ತ್ರ ವಿತರಿಸಿ ಮಾತನಾಡಿದ ಮಾಜಿ ಶಾಸಕ ಎಲ್ ನಾಗೇಂದ್ರ ಪ್ರಧಾನಿ ಮೋದಿ ಅವರ ಜನ್ಮದಿನದ ಅಂಗವಾಗಿ ದೇಶಾದ್ಯಂತ 15 ದಿನ ವಿವಿಧ ಸಾಮಾಜಿಕ ಜನಪರ ಕಾರ್ಯ ಮಾಡಲಾಗುತ್ತಿದೆ ಎಂದರು.

ಇತ್ತೀಚಿಗೆ ಪ್ರಧಾನಮಂತ್ರಿ ಜಿ–20 ಶೃಂಗಸಭೆಯನ್ನು ಭಾರತದಲ್ಲಿ ಏರ್ಪಡಿಸಿ ಯಶಸ್ವಿಯಾಗಿಸಿದರು. ದೇಶದಲ್ಲಿ ಅಪಾರ ಪ್ರಮಾಣದಲ್ಲಿ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿದ್ದು, ಇದರಿಂದ ಜನರು ಬರುವ ಲೋಕಸಭಾ ಚುನಾವಣೆಯಲ್ಲಿ ಮತ್ತೊಂದು ಬಾರಿಗೆ ನರೇಂದ್ರ ಮೋದಿ ಅವರೇ ಪ್ರಧಾನಿ ಎಂದು ನಿಶ್ಚಯಿಸಿದ್ದಾರೆ ಎಂದು ತಿಳಿಸಿದರು.

ಹಲವು ದಶಕಗಳ ಕಾಲ ಕಾಂಗ್ರೆಸ್ ಪಕ್ಷ ಕೇಂದ್ರದಲ್ಲಿ ಅಧಿಕಾರ ಅನುಭವಿಸಿದ್ದರೂ ಮಹಿಳಾ ಮೀಸಲಾತಿ ಅನುಷ್ಠಾನಕ್ಕೆ ತರಲು ಸಾಧ್ಯವಾಗಿರಲಿಲ್ಲ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಈ ದಿಕ್ಕಿನಲ್ಲಿ ದಿಟ್ಟ ಹೆಜ್ಜೆ ಇಟ್ಟಿರುವುದು ಐತಿಹಾಸಿಕ ನಡೆ' ಎಂದು ಹೇಳಿದರು

ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್ ಮಾತನಾಡಿದರು. ಇದೇ ಸಂದರ್ಭದಲ್ಲಿ ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, 24ನೇ ವಾರ್ಡಿನ ಅಧ್ಯಕ್ಷ ಕೇಬಲ್ ವಿಜಿ, ಹೇಮಾ ಸಂತೋಷ್, ಚಾಮರಾಜ ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ರಮೇಶ್, ಕ್ಷೇತ್ರದ ಒಬಿಸಿ ಅಧ್ಯಕ್ಷರಾದ ಸೂರಜ್, ಸತೀಶ್, ಸದಾಶಿವ, ಕೆಂಪಣ್ಣ, ಗಣೇಶ್ ,ಸಂತೋಷ್, ಹಾಗೂ ಶಾಲೆಯ ಶಿಕ್ಷಕ ವೃಂದ ಹಾಜರಿದ್ದರು.

ರಾಷ್ಟ್ರೀಯ ಹಿಂದೂ ಸಮಿತಿಯಿಂದ ಸಾಮೂಹಿಕ ವಿಷ್ಣು ಸಹಸ್ರನಾಮ ಪಾರಾಯಣ



ಮೈಸೂರು, ಸೆ. 21– ರಾಷ್ಟ್ರೀಯ ಹಿಂದೂ ಸಮಿತಿ ಆಯೋಜಿಸಿದ್ದ ಸಾರ್ವಜನಿಕ ಗಣೇಶೋತ್ಸವದಲ್ಲಿ ಗಾಯಿತ್ರಿ ಮಹಿಳಾ ಸಮಾಜದ ಸಂಯುಕ್ತಾಶ್ರಯದಲ್ಲಿ ಸಾಮೂಹಿಕ ವಿಷ್ಣು ಸಹಸ್ರನಾಮ ಪಾರಾಯಣ ಆಯೋಜಿಸಲಾಗಿತ್ತು.

ಗಾಯತ್ರಿ ಮಹಿಳಾ ಸಮಾಜದ ಮಂಜುಳಾ ಮಾತನಾಡಿ, ವಿಷ್ಣು ಸಹಸ್ರನಾಮ ಭಗವಂತನ ಸಾಕಾರ ಮತ್ತು ನಿರಾಕಾರ ಸ್ವರೂಪಗಳನ್ನು ಗುಣಗಳ ಮೂಲಕ ವರ್ಣಿಸುವ ಒಂದು ಪ್ರಮುಖ ಗ್ರಂಥವಾಗಿದೆ. ಒಂದು ಬಾರಿ ವಿಷ್ಣು ಸಹಸ್ರನಾಮವನ್ನು ಪಠಿಸಿದರೆ ಮನುಷ್ಯನ ದೇಹದಲ್ಲಿರುವ 72,000 ನರಗಳಿಗೂ ಶಕ್ತಿ ಬರುತ್ತದೆ. ವಿಷ್ಣು ಸಹಸ್ರನಾಮವು ವಿಷ್ಣುವಿನ ಸುಪ್ರಸಿದ್ಧ ಸಹಸ್ರ ನಾಮಗಳನ್ನು ಒಳಗೊಂಡಿದೆ. ರಾಷ್ಟ್ರೀಯ ಹಿಂದೂ ಸಮಿತಿಯ ಈ ಕಾರ್ಯ ನಿಜಕ್ಕೂ ಶ್ಲಾಘನೀಯ, ಇಂತಹ ಕಾರ್ಯಗಳು ಮತ್ತಷ್ಟು ಆಗಲಿ ಎಂದರು. ಹಿಂದೂ ಮುಖಂಡ ವರುಣ್ ಶಾಸ್ತ್ರಿ, ಪದಾಧಿಕಾರಿಗಳಾದ ತೇಜಸ್, ಕೌಶಿಕ್, ಗಗನ್, ಪ್ರದೀಪ್, ಅನಿರುದ್, ವಿನಯ್, ಶಶಾಂಕ್, ಮತ್ತಿತರರು ಉಪಸ್ಥಿತರಿದ್ದರು

K-SET, UGC ಉಚಿತ ಕಾರ್ಯಾಗಾರ



ಮೈಸೂರು, ಸೆ. 21– ಮೈಸೂರು ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಮೈಸೂರು ವಿಶ್ವವಿದ್ಯಾನಿಲಯ ಹಿಂದುಳಿದ ವರ್ಗಗಳ ಸಂಶೋಧನಾ ವಿದ್ಯಾರ್ಥಿಗಳ ವೇದಿಕೆ ಸಂಯುಕ್ತ ಆಶ್ರಯದಲ್ಲಿ ಮಾನಸಗಂಗೋತ್ರಿಯ ಆವರಣದಲ್ಲಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ವಿದ್ಯಾರ್ಥಿನಿಲಯದಲ್ಲಿ ಒಂದು ವಾರದ K-SET ಮತ್ತು UGC ಉಚಿತ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವನ್ನು ಮೈಸೂರು ವಿಶ್ವವಿದ್ಯಾನಿಲಯದ ಹಿಂದುಳಿದ ವರ್ಗಗಳ ಘಟಕ ಮಾನಸಗಂಗೋತ್ರಿಯ ಸಂಯೋಜಕರಾದ ಪ್ರೊ ಸಣ್ಣಪ್ಪ ಉದ್ಘಾಟಿಸಿದರು. ಹಾಸ್ಟೆಲ್‌ನಲ್ಲಿರುವ ಎಲ್ಲಾ ವಿಭಾಗಗಳ 50ಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕಾರ್ಯಾಗಾರದಲ್ಲಿ ನಿಲಯಪಾಲಕ ಎಲ್.ನಾಗೇಶ್, ವೇದಿಕೆಯ ಅಧ್ಯಕ್ಷ ಜಿ.ಶಿವಶಂಕರ್, ಉಪಾಧ್ಯಕ್ಷ ಕೆ ವಿವೇಕ್ ಗೌಡ, ಪ್ರಧಾನ ಕಾರ್ಯದರ್ಶಿ ಪ್ರಸನ್ನ ಕುಮಾರ ಚಿಕ್ಕಳ್ಳಿ ಉಪಸ್ಥಿತರಿದ್ದರು.

ಮಹಿಳಾ ಮೀಸಲಾತಿ: ಇತಿಹಾಸದಲ್ಲಿ ಸುದಿನ



ಮೈಸೂರು, ಸೆ.21–ದೇಶದ ಇತಿಹಾಸದಲ್ಲಿಯೇ ಸೆ.19, ಹೆಮ್ಮೆ ಪಡುವಂತಹ ದಿನವಾಗಿದೆ. ನೂತನ ಸಂಸತ್ ಕಟ್ಟಡ (ಸೆಂಟ್ರಲ್ ವಿಸ್ಟಾ)ದಲ್ಲಿ ಪ್ರಪ್ರಥಮ ಸಭೆ ಹಾಗೂ ಮಹಿಳೆಯರಿಗೆ ಶೇ.33 ಮೀಸಲಾತಿ ಪ್ರಸ್ತಾವನೆ ಮಂಡಿಸಿರುವ ಸುದಿನವಾಗಿದೆ.

ಇದಕ್ಕೆ ಪ್ರಧಾನಿ ನರೇಂದ್ರ ಮೋದಿಯವರಿಗೆ ಎಷ್ಟು ಅಭಿನಂದನೆ ಸಲ್ಲಿಸಿದರೂ ಸಾಲದು ಎಂದು ಮೃಗಾಲಯ ಪ್ರಾಧಿಕಾರದ ಮಾಜಿ ಸದಸ್ಯರಾದ ಜ್ಯೋತಿ ರೇಚಣ್ಣ ಸಂತಸ ವ್ಯಕ್ತಪಡಿಸಿದರು.

ಈ ಸಂಬಂಧ ಹೇಳಿಕೆ ನೀಡಿರುವ ಅವರು, ದೇಶಕ್ಕೆ ಸ್ವಾತಂತ್ರ್ಯ ಸಿಕ್ಕ ನಂತರ ಮಹಿಳೆಯರಿಗೆ ಮೀಸಲಾತಿಯನ್ನು ಯಾರೂ ನೀಡಿದ್ದಿಲ್ಲ. ನೂತನ ಸಂಸತ್ ಭವನಕ್ಕೆ ಪ್ರವೇಶ ಮಾಡಿದ ಮೊದಲ ದಿನವೇ ಮಹಿಳಾ ಮೀಸಲಾತಿ ಮಸೂದೆ ಮಂಡನೆಯಾಗಿದೆ. ಇದರಿಂದ ಮಹಿಳೆಯರಿಗೆ ಮೀಸಲಾತಿ ನೀಡುವ ಮೂಲಕ ಸಮಾನತೆಯ ವ್ಯವಸ್ಥೆಗೆ ನಾಂದಿ ಹಾಡಿದಂತಾಗಿದೆ ಎಂದು ಹೇಳಿದರು.

ಇನ್ನು ಮುಂದೆ ಮಹಿಳೆಯರು ಸಾರ್ವಜನಿಕ ವಲಯದಲ್ಲಿ ಸಾಮಾಜಿಕ ಕೊಡುಗೆ ನೀಡಲು ಮೋದಿ ಅವರು ಅವಕಾಶ ಮಾಡಿಕೊಟ್ಟು ಮಹದುಪಕಾರ ಮಾಡಿದ್ದಾರೆ. ಮಹಿಳಾ ಪರ ಇಂತಹ ಕ್ರಾಂತಿಕಾರಿ ಹೆಜ್ಜೆಯಿಂದ ಭಾರತದಲ್ಲಿ ಇನ್ನಷ್ಟು ಮಹಿಳೆಯರಿಗೆ ರಾಜಕೀಯ ಅಧಿಕಾರ ದೊರೆಯಲಿದೆ ಎಂದರು.



ಇತ್ತೀಚೆಗೆ ಡಿಡಿಪಿಯು ವತಿಯಿಂದ ಮಹಾಜನ ಕಾಲೇಜಿನಲ್ಲಿ ನಡೆದ ಜಿಲ್ಲಾ ಮಟ್ಟದ ಹ್ಯಾಂಡ್‌ಬಾಲ್ ಪಂದ್ಯಾವಳಿಯಲ್ಲಿ ಮೈಸೂರಿನ ವಿಜಯನಗರದ ಸದ್ವಿದ್ಯಾ ಸೆಮಿ ರೆಸಿಡೆನ್ಷಿಯಲ್ ಪಿಯು ಕಾಲೇಜು ಪ್ರಥಮ ಬಹುಮಾನ ಪಡೆದುಕೊಂಡಿತು. ಈ ವೇಳೆ ವಿದ್ಯಾರ್ಥಿಗಳೊಂದಿಗೆ ದೈಹಿಕ ಶಿಕ್ಷಣ ಉಪನ್ಯಾಸಕ ಎಂ.ಡಿ. ಜಗನ್ನಾಥ್, ಪ್ರೊ ಎಂ.ಎಸ್.ಕೆ. ನರಹರಿಬಾಬು, ಪ್ರೊ.ಕೆ.ಎಸ್.ಹಿರಿಯಣ್ಣ, ಡಾ.ಜಿ.ಆರ್.ಕವಿತಾ ಅವರನ್ನು ಕಾಣಬಹುದು.



ಒಂದೇ ಕುಟುಂಬದ ಐವರು ಸಹೋದರಿಯರೂ ಮೈಸೂರು ಮೆಡಿಕಲ್ ಕಾಲೇಜಿನ ಹಳೇ ವಿದ್ಯಾರ್ಥಿಗಳು



ಡಾ. ಎನ್.ಎಂ.ಇಂದಿರಾದೇವಿ
1966–1974



ಡಾ. ಎನ್.ಎಂ.ಚಂದ್ರಮಣಿದೇವಿ
1971–1976



ಡಾ. ಎನ್.ಎಂ.ಭಗೀರಥಿ
1975–1980



ಡಾ. ಎನ್.ಎಂ.ತಾರಾ
1980–1985



ಡಾ. ಎನ್.ಎಂ.ಮುಕ್ತಾಂಬ
1981–1986

ಮೈಸೂರು, ಸೆ.21(ಆರ್‌ಕೆ)–ಮೈಸೂರಿನ ಎನ್.ಆರ್.ಮೊಹಲ್ಲಾದ ದಂಪತಿ ತಮ್ಮ ಐವರು ಪುತ್ರಿಯರನ್ನೂ ವೈದ್ಯರನ್ನಾಗಿಸಿದ್ದಾರೆ.

ನಂಜಯ್ಯ ಮರಿಮಾದಯ್ಯ ಮತ್ತು ಶ್ರೀಮತಿ ಜವನಮ್ಮ ಎಂಬುವರ ಪುತ್ರಿಯರಾದ ಡಾ. ಎನ್.ಎಂ.ಇಂದಿರಾದೇವಿ, ಡಾ. ಎನ್.ಎಂ. ಚಂದ್ರಮಣಿ ದೇವಿ, ಡಾ. ಎನ್.ಎಂ. ಭಗೀರಥಿ, ಡಾ. ಎನ್.ಎಂ.ತಾರಾ ಹಾಗೂ ಡಾ. ಎನ್.ಎಂ.ಮುಕ್ತಾಂಬ ಅವರು ಎಂಬಿಬಿಎಸ್ ಪದವಿ ಪಡೆದು ವೈದ್ಯರಾಗಿರುವ ಸಹೋದರಿಯರು.

ಅವರು 100 ವರ್ಷ ಪೂರೈಸಿ ಶತಮಾನೋತ್ಸವ ಆಚರಿಸಿಕೊಳ್ಳುತ್ತಿರುವ ದೇಶದ ಪ್ರತಿಷ್ಠಿತ ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ವ್ಯಾಸಂಗ ಮಾಡಿದವರೆಂಬುದು ಇಲ್ಲಿ ವಿಶೇಷ. ಒಂದೇ ಕುಟುಂಬದ ಐವರು ಸಹೋದರಿಯರೂ ಒಂದೇ ಕಾಲೇಜಿನ ಹಳೇ ವಿದ್ಯಾರ್ಥಿಗಳಾಗಿರುವುದೂ ಇಲ್ಲಿ ಮತ್ತೊಂದು ಗಮನಾರ್ಹ ಅಂಶವಾಗಿದೆ.

1966–1974ರ ತಂಡದಲ್ಲಿ ಡಾ. ಇಂದಿರಾ ದೇವಿ ಓದಿದರೆ, 1971–1978ರ ಬ್ಯಾಚ್‌ನಲ್ಲಿ ಡಾ. ಚಂದ್ರಮಣಿ ದೇವಿ, 1975–1980ರ ಅವಧಿಯಲ್ಲಿ ಡಾ. ಭಗೀರಥಿ, 1980–1985ರಲ್ಲಿ ಡಾ. ತಾರಾ ಹಾಗೂ 1981–1986ರ ತಂಡದಲ್ಲಿ ಡಾ. ಮುಕ್ತಾಂಬ ಅವರು ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಎಂಬಿಬಿಎಸ್ ವ್ಯಾಸಂಗ ಮಾಡಿ ವೈದ್ಯರಾಗಿದ್ದಾರೆ.

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ (ಕೆಇಬಿ)ಯಲ್ಲಿ ಲೆಕ್ಕಾಧಿಕಾರಿಯಾಗಿ ನಿವೃತ್ತಿ ಹೊಂದಿದ್ದ ನಂಜಯ್ಯ ಮರಿಮಾದಯ್ಯ ಕೇವಲ ಎಸ್‌ಎಸ್‌ಎಲ್‌ಸಿ ಪಾಸು ಮಾಡಿದ್ದರು. ಪತ್ನಿ ಶ್ರೀಮತಿ ಜವನಮ್ಮ 3ನೇ ತರಗತಿ ಮಾತ್ರ ಓದಿದವರು. ತಾವು ಹೆಚ್ಚು ವ್ಯಾಸಂಗ ಮಾಡದಿದ್ದರೂ, ತಮ್ಮ ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಟ್ಟು ವೈದ್ಯರನ್ನಾಗಿಸಿದ ಈ ದಂಪತಿಯ ಕಾರ್ಯ ಶ್ಲಾಘನೀಯ.




ನಂಜಯ್ಯ ಮರಿಮಾದಯ್ಯ ಮತ್ತು ಜವನಮ್ಮ

ಡಾ. ಇಂದಿರಾದೇವಿ ಅವರು ಸ್ತ್ರೀರೋಗ ತಜ್ಞರಾಗಿ ಸೇವೆ ಸಲ್ಲಿಸಿ ಚೆಲುವಾಂಬ ಆಸ್ಪತ್ರೆಯಲ್ಲಿ ನಿವೃತ್ತರಾದರೆ, ಡಾ. ಚಂದ್ರಮಣಿ ದೇವಿ ಅವರೂ ಸ್ತ್ರೀರೋಗ ತಜ್ಞೆ ಆಗಿ ಗ್ರಾಮೀಣ ಭಾಗದಲ್ಲಿ ಸೇವೆ ಸಲ್ಲಿಸಿದ್ದಾರೆ. ಮೂರನೇ ಪುತ್ರಿ ಡಾ. ಭಗೀರಥಿ ಸ್ತ್ರೀ ರೋಗ ತಜ್ಞೆಯಾಗಿ ಆಯ್ಕೆ ಮಾಡಿಕೊಂಡು ಚೆಲುವಾಂಬ ಆಸ್ಪತ್ರೆ ಸ್ಥಾನಿಕ ವೈದ್ಯಾಧಿಕಾರಿಯಾಗಿ ನಿವೃತ್ತರಾಗಿದ್ದಾರೆ.

ನಾಲ್ಕನೇ ಪುತ್ರಿ ಡಾ. ತಾರಾ ಅವರು ಮುಂಬೈನಲ್ಲಿ ವಾಸವಾಗಿದ್ದು, ಬಾಂಬೆ ಮುನಿಸಿಪಲ್ ಕಾರ್ಪೊರೇಷನ್‌ನಲ್ಲಿ ಜಿಲ್ಲಾ ಟಿ.ಬಿ.ಆಫೀಸರ್ ಆಗಿ ನಿವೃತ್ತರಾಗಿದ್ದಾರೆ. ಕಡೇ ಪುತ್ರಿ ಡಾ. ಮುಕ್ತಾಂಬ ಅವರು ಬೆಂಗಳೂರಿನಲ್ಲಿ ವಾಸವಾಗಿದ್ದು, ಅಲ್ಲಿನ ಕೇಂದ್ರ ಸರ್ಕಾರಿ ಆಸ್ಪತ್ರೆಯಲ್ಲಿ ಸೀನಿಯರ್ ಚೀಫ್ ಮೆಡಿಕಲ್ ಆಫೀಸರ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ.

ಒಂದೇ ಕುಟುಂಬದ ಐವರು ಸಹೋದರಿಯರೂ ಒಂದೇ ಮೆಡಿಕಲ್ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ವೈದ್ಯರಾಗಿದ್ದಾರೆ. ಹಳೇ ವಿದ್ಯಾರ್ಥಿಗಳಾಗಿರುವುದರಿಂದ ಶತಮಾನೋತ್ಸವದ ಸಂದರ್ಭ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯು ಈ ಹಳೆ ವಿದ್ಯಾರ್ಥಿಗಳನ್ನು ಗುರ್ತಿಸಿ ಗೌರವಿಸಲು ಮುಂದಾಗಿದೆ.

ಮೈಸೂರಲ್ಲಿ ವ್ಯಾಪಕವಾಗಿರುವ ನಾನಾ ನಾಗರಿಕ ಸಮಸ್ಯೆ ನಿವಾರಣೆಗೆ ಪೊಲೀಸ್ ಆಯುಕ್ತರಿಗೆ ಮನವಿ ಸಲ್ಲಿಕೆ



ಮೈಸೂರು, ಸೆ.21(ಜಿಎ)–ಮೈಸೂರಿನ ಪ್ರಮುಖ ರಸ್ತೆಗಳಲ್ಲಿನ ಪಾರ್ಕಿಂಗ್ ಸಮಸ್ಯೆ, ಪಾರ್ಕ್‌ಗಳಲ್ಲಿ ಕುಡುಕರ ಹಾವಳಿ ಮತ್ತು ಸಿಗ್ನಲ್‌ಗಳಲ್ಲಿ ಮಂಗಳಮುಖಿಯರ ಕಿರುಕುಳ ತಪ್ಪಿಸುವಂತೆ ಕನ್ನಡ ಪರ ಸಂಘಟನೆಯ ನಾಗರಿಕ ಹಿತರಕ್ಷಣಾ ವೇದಿಕೆ ವತಿಯಿಂದ ನಗರ ಪೊಲೀಸ್ ಆಯಕ್ತರಿಗೆ ಗುರುವಾರ ಮನವಿ ಸಲ್ಲಿಸಿದರು.

ನಗರದ ದೇವರಾಜ ಅರಸು ರಸ್ತೆ, ಸಯ್ಯಾಜಿರಾವ್ ರಸ್ತೆ, ಅಶೋಕ ರಸ್ತೆಯಲ್ಲಿರುವ ಅಂಗಡಿ ಮಾಲೀಕರು ತಮ್ಮ ಕಾರುಗಳನ್ನು ಬೆಳಿಗ್ಗೆ 10ಗಂಟೆಯಿಂದ ರಾತ್ರಿ 9ರವರೆಗೂ ಪಾರ್ಕಿಂಗ್ ಮಾಡುತ್ತಿದ್ದು, ಇದರಿಂದ ಸಾರ್ವಜನಿಕರು ತಮ್ಮ ಕಾರುಗಳನ್ನು ಪಾರ್ಕಿಂಗ್ ಮಾಡಲು ಸ್ಥಳಾವಕಾಶವಿಲ್ಲದೆ ಪಾರ್ಕಿಂಗ್ ಸಮಸ್ಯೆ ಹೆಚ್ಚಾಗುತ್ತಿದೆ. ಇದನ್ನು ಸರಿಪಡಿಸಬೇಕೆಂದು ಒತ್ತಾಯಿಸಿದರು.

ಮೈಸೂರಿನ ಉದ್ಯಾನವನದಲ್ಲಿ ಕುಡುಕರ ಹಾವಳಿ, ಗಾಂಜಾ ಸೇವನೆ ಮತ್ತು ಹೆಂಗಸರನ್ನು ಚುಡಾಯಿಸಿ, ಅವಾಚ್ಯ ಶಬ್ದಗಳಿಂದ ನಿಂದಿಸುವುದು ಹಲವು ಉದ್ಯಾನವನಗಳಲ್ಲಿ ನಡೆಯುತ್ತಿದ್ದು, ಸಂಜೆ ಆದರೆ ಸಾಕು, ಕುಡುಕರ ಕಾಟ ಹೆಚ್ಚಾಗುತ್ತಿದೆ. ಇದರಿಂದ ಮಹಿಳೆಯರು ವಾಯುವಿಹಾರಕ್ಕೆ ಬರುವುದಕ್ಕೆ ಹೆದರುವ ಪರಿಸ್ಥಿತಿ ನಿರ್ಮಾಣವಾಗಿದೆ. ಮತ್ತೊಂದೆಡೆ ಉದ್ಯಾನವನದಲ್ಲಿ ಕಾಲೇಜು ಯುವಕ–ಯುವತಿಯರು ಹರಟೆ ಹೊಡೆಯುತ್ತಾ ಕುಳಿತರೆ, ಕೆಲವು ಕಿಡಿಗೇಡಿಗಳು ನಿಮ್ಮ ಮನೆಗೆ ಹೇಳುತ್ತೇನೆಂದು ಬೆದರಿಕೆ ಹಾಕಿ ಅವರ ಹತ್ತಿರ ಹಣವನ್ನು ರೋಲ್ ಕಾಲ್ ಮಾಡುವುದು ಮಾಮೂಲಾಗಿದೆ.

ಯಾವುದೋ ಸಮಯದಲ್ಲಿ ಪೊಲೀಸರ ವಾಹನ ಬರುತ್ತದೆ. ಅವರು ಹೋದ ನಂತರ ಇವರ ಕಾಟ ಜಾಸ್ತಿಯಾಗಿದೆ. ಅದರಲ್ಲೂ ನರಸಿಂಹ ರಾಜ ಉದ್ಯಾನವನ, ಉದಯಗಿರಿ ಉದ್ಯಾನವನ, ಕಾಮಾಕ್ಷಿ ಆಸ್ಪತ್ರೆ ಪಕ್ಕದ ಉದ್ಯಾನವನ, ಆಕಾಶವಾಣಿ ಎದುರಿನ ಉದ್ಯಾನವನ, ಒಂಟಿಕೊಪ್ಪಲು ವೆಂಕಟರಮಣಸ್ವಾಮಿ ದೇವಸ್ಥಾನದ ಹಿಂಭಾಗದ ಪಾರ್ಕ್‌ನಲ್ಲಿ ಈ ರೀತಿ ಸಮಸ್ಯೆ ಹೆಚ್ಚಾಗುತ್ತಿದೆ ಎಂದು ತಿಳಿಸಿದರು.

ನಗರದ ಕೆಲವು ಸಿಗ್ನಲ್‌ನಲ್ಲಿ ಮಂಗಳಮುಖಿಯವರು ಹಣಕ್ಕಾಗಿ ಕಾರು, ಸ್ಕೂಟರ್‌ನಲ್ಲಿ ಬರುವ ಸಾರ್ವಜನಿಕರಿಗೆ ಕಿರುಕುಳ ಕೊಟ್ಟು ಹಣವನ್ನು ವಸೂಲಿ ಮಾಡುತ್ತಾರೆ. ಕೊಡದಿದ್ದರೆ ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳಿಂದ ಬೈಯುತ್ತಾರೆ. ಈ ಎಲ್ಲಾ ಸಮಸ್ಯೆಗಳಿಂದ ಮೈಸೂರಿನ ಸಾರ್ವಜನಿಕರಿಗೆ ಮುಕ್ತಿ ಕೊಡಿಸಿ ಎಂದು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಅವರಿಗೆ ಮನವಿ ಸಲ್ಲಿಸಿದರು.

ಈ ವೇಳೆ ಅಧ್ಯಕ್ಷ ಮಂಜುನಾಥ್ (ಮಿಲ್ಕ್ ಮಂಜು) ಪ್ರಧಾನ ಕಾರ್ಯದರ್ಶಿ ವಿ.ಗಿರಿಧರ್ ಕಾರ್ಯದರ್ಶಿ ಮಂಜುನಾಥ್, ವೇದಿಕೆಯ ಮಾರ್ಗದರ್ಶಕ ಮೋಹನ್ ಕುಮಾರ್ ಕುರುಬರಹಳ್ಳಿ, ಪ್ರಕಾಶ್, ಯೋಗೇಶ್, ಲಾಯರ್ ಶಿವರಾಜ್ ಸುಂದರ್, ರಂಗಪ್ಪಗೌಡ ಉಪಸ್ಥಿತರಿದ್ದರು.

108 ಅಡಿ ಎತ್ತರದ ಆದಿ ಶಂಕರಾಚಾರ್ಯರ ಪ್ರತಿಮೆ ಅನಾವರಣಗೊಳಿಸಿದ ಸಿಎಂ ಶಿವರಾಜ್ ಸಿಂಗ್ ಚೌಹಾಣ್



ಮಧ್ಯಪ್ರದೇಶ, ಸೆ.21– 108 ಅಡಿ ಎತ್ತರದ ಶಂಕರಾಚಾರ್ಯರ ಭವ್ಯ ಪ್ರತಿಮೆಯನ್ನು ಮಧ್ಯಪ್ರದೇಶ ಸಿಎಂ ಶಿವರಾಜ್ ಸಿಂಗ್ ಚೌಹಾಣ್ ಇಂದು ಓಂಕಾರೇಶ್ವರದಲ್ಲಿ ಅನಾವರಣಗೊಳಿಸಿದರು.

ಓಂಕಾರೇಶ್ವರದಲ್ಲಿರುವ ಆದಿ ಶಂಕರಾಚಾರ್ಯರ ಭವ್ಯ ಪ್ರತಿಮೆಯನ್ನು ಉದ್ಘಾಟನೆ ಮಾಡಿದ ಶಿವರಾಜ್ ಸಿಂಗ್ ಚೌಹಾಣ್, ಸ್ಥಾಪನಾ ಸ್ಥಳದಲ್ಲಿ ಪ್ರಾರ್ಥನೆ ಸಲ್ಲಿಸಿದರು. ಪ್ರತಿಮೆ ಅನಾವರಣ ಸಮಾರಂಭ ವೀಕ್ಷಿಸಲು ಸಹಸ್ರಾರು ಸಂಖ್ಯೆಯಲ್ಲಿ ಜನರು ಆಗಮಿಸಿದ್ದರು.

ಉದ್ಘಾಟನೆ ಬಳಿಕ ಮಾತನಾಡಿದ ಸಿಎಂ ಚೌಹಣ್, ಆದಿ ಗುರು ಶಂಕರಾಚಾರ್ಯ ಮಹಾರಾಜರು ದೇಶವನ್ನು ಸಾಂಸ್ಕೃತಿಕವಾಗಿ ಸಂಪರ್ಕಿಸಲು ಶ್ರಮಿಸಿದರು. ವೇದಗಳ ಸಾರವನ್ನು ಸಾಮಾನ್ಯ ಜನರಿಗೆ ತಲುಪಿಸುವ ಕೆಲಸವನ್ನು ಅವರು ಮಾಡಿದರು. ದೇಶದ ನಾಲ್ಕು ಮೂಲೆಗಳಲ್ಲಿ ನಾಲ್ಕು ಮಠಗಳನ್ನೂ ಸ್ಥಾಪಿಸಿದರು. ಭಾರತವನ್ನು ಸಾಂಸ್ಕೃತಿಕವಾಗಿ ಒಗ್ಗೂಡಿಸಲು ಇದು ಕೆಲಸ ಮಾಡಿದೆ. ಆ ಕಾರಣದಿಂದ ಭಾರತ ಇಂದು ಒಗ್ಗಟ್ಟಾಗಿದೆ ಎಂದು ಹೇಳಿದರು.



ವಚನ ಸಾಹಿತ್ಯ ರಸಪ್ರಶ್ನೆ: ಎಸ್.ನಿರಂಜನ್‌ಗೆ ಬಹುಮಾನ

ಮೈಸೂರು,ಸೆ.21–ಶರಣು ವಿಶ್ವವಚನ ಫೌಂಡೇಷನ್ ವತಿಯಿಂದ ವಚನ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಅಂತರ್ಜಾಲದ ಮೂಲಕ ನಡೆದ ಥಟ್ ಅಂತ ಉತ್ತರಿಸಿ 69ನೇ ವಚನ ಸಾಹಿತ್ಯ ರಸಪ್ರಶ್ನೆ ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲೆ ಈರಪ್ಪನ ಕೊಪ್ಪಲಿನ ಎಸ್.ನಿರಂಜನ್ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸುವುದರ ಮೂಲಕ ಬಹುಮಾನಕ್ಕೆ ಭಾಜನರಾಗಿದ್ದಾರೆ ಎಂದು ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕಿ ರೂಪ ಕುಮಾರಸ್ವಾಮಿ ತಿಳಿಸಿದ್ದಾರೆ.

ಸೆ.24ರಂದು 100 ಮಂದಿ ಕೃಷಿಕರಿಗೆ ಹಳ್ಳಿಕಾರ್ ರಾಸುಗಳ ಗೋದಾನ



ಮೈಸೂರು,ಸೆ.21(ಎಂಟಿವೈ)– ಬನ್ನೂರಿನ ಹಾಲಿನ ಡೇರಿ ಬಳಿ ಸೆ.24ರಂದು ಸಂಜೆ 4ಕ್ಕೆ 100 ಮಂದಿ ನೈಸರ್ಗಿಕ ಕೃಷಿಕರಿಗೆ ಹಳ್ಳಿಕಾರ್ ರಾಸುಗಳ ಗೋದಾನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಗಂಗಾ ಸೇನೆಯ ಅಧ್ಯಕ್ಷ ಡಾ.ರಾಹುಲ್‌ಗೌಡ ತಿಳಿಸಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬನ್ನೂರಿನ ಗಂಗಾ ಸೇನೆ, ಕರ್ನಾಟಕ ರಾಜ್ಯ ರೈತ ಸಂಘದ ಸಹಯೋಗದಲ್ಲಿ ಹಳ್ಳಿಕಾರ್ ರಾಸುಗಳ ಗೋದಾನ ಕಾರ್ಯಕ್ರಮ ನಡೆಸಲಾಗುತ್ತಿದ್ದು, ಗಂಗರಸರ ಸಂಸ್ಕೃತಿಯಾದ ಹಳ್ಳಿಕಾರ್ ತಳಿಯನ್ನು ಉಳಿಸಿ, ಬೆಳೆಸಲು ಮತ್ತು ಗಂಗರ ಆಡಳಿತ ವೈಭವ ಜನರಿಗೆ ತಿಳಿಸುವ ಪ್ರಯತ್ನ ಮಾಡಲಾಗುತ್ತಿದೆ. ಈ ತಳಿ ವಿತರಣೆಗೆ ಹೊರ ರಾಜ್ಯ ಹಾಗೂ ಅಂತರ ಜಿಲ್ಲೆಯ ಕೃಷಿಕರನ್ನು ಈಗಾಗಲೇ ಗುರುತಿಸಲಾಗಿದೆ. ಮಾರುಕಟ್ಟೆಯಲ್ಲಿ ಹಳ್ಳಿಕಾರ್ ತಳಿಯ ರಾಸುವೊಂದು 25ರಿಂದ 30 ಸಾವಿರ ರೂ. ಬೆಲೆ ಬಾಳಲಿದೆ. ಕೃಷಿಕರಿಗೆ ವಿತರಣೆ ಮಾಡಲು 100 ರಾಸುಗಳನ್ನು ಖರೀದಿಸಲಾಗಿದೆ. ತಳಿ ಸಂರಕ್ಷಣೆಗಾಗಿ ಈ ಕ್ರಮ ಕೈಗೊಂಡಿದ್ದು, ನಾವು 7 ಜೊತೆ ಹಳ್ಳಿಕಾರ್ ತಳಿ ರಾಸುಗಳನ್ನು ಸಾಕುತ್ತಿದ್ದೇವೆ ಎಂದು ತಿಳಿಸಿದರು.

ಕರ್ನಾಟಕ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೊಸಕೋಟೆ ಬಸವರಾಜ ಮಾತನಾಡಿರು.

ಈ ತಳಿಯ ರಾಸುಗಳನ್ನು ಉಳಿಸಿಕೊಳ್ಳಬೇಕಾಗಿದೆ. ಈ ಹಿನ್ನೆಲೆಯಲ್ಲಿ ಕೈಗೊಂಡಿರುವ ಕಾರ್ಯಕ್ರಮವನ್ನು ಪಶುಸಂಗೋಪನೆ, ರೇಷ್ಮೆ ಸಚಿವ ಕೆ.ವೆಂಕಟೇಶ್ ಉದ್ಘಾಟಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ, ನಾಯಕ ನಟ ದರ್ಶನ್, ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ, ಶಾಸಕ ದರ್ಶನ್ ಪುಟ್ಟಣ್ಣಯ್ಯ, ಸ್ವರಾಜ್ಯ ಇಂಡಿಯಾ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಚಾಮರಸಮಾಲಿ ಪಾಟೀಲ್ ಇನ್ನಿತರರು ಪಾಲ್ಗೊಳ್ಳಲಿದ್ದಾರೆ ಎಂದು ಮಾಹಿತಿ ನೀಡಿದರು. ಸಂಘದ ನೈಸರ್ಗಿಕ ಕೃಷಿ ವಿಭಾಗದ ಅಧ್ಯಕ್ಷ ಬನ್ನೂರು ಕೃಷ್ಣಪ್ಪ, ಮಹಿಳಾ ವಿಭಾಗದ ಪ್ರಧಾನ ಕಾರ್ಯ ದರ್ಶಿ ನೇತ್ರಾವತಿ, ಮುಖಂಡರಾದ ಪಿ.ಮರಂಕಯ್ಯ, ಪ್ರಭಾಕರ್, ಚಂದ್ರಶೇಖರ್ ಇನ್ನಿತರು ಇದ್ದರು.



ಮೈಸೂರಿನ ದಿ ಮೈಸೂರು ಕೋ ಆಪರೇಟಿವ್ ಸೊಸೈಟಿಯ 2022–2023 ನೇ ಸಾಲಿನ 117ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ದೊಡ್ಡಕೆರೆ ಮೈದಾನದಲ್ಲಿರುವ ಮೈಸೂರು ವಸ್ತು ಪ್ರದರ್ಶನ ಪ್ರಾಧಿಕಾರದ ಗಾನ ಕೋಗಿಲೆ ಕಾಳಿಂಗ ರಾವ್ ಗಾನ ಮಂಟಪದಲ್ಲಿ ಕಳೆದ ಭಾನುವಾರ ನಡೆಯಿತು. ಈ ವೇಳೆ ಬ್ಯಾಂಕಿನ ಅಧ್ಯಕ್ಷರಾದ ಪಿ.ರಾಜೇಶ್ವರಿ, ಉಪಾಧ್ಯಕ್ಷ ಹೆಚ್. ಹರೀಶ್ ಕುಮಾರ್, ನಿರ್ದೇಶಕರಾದ ಆರ್.ರವಿಕುಮಾರ್(ರಾಜಕೀಯ), ಎಸ್.ಬಿ.ಎಂ ಮಂಜು, ಜೆ. ಯೋಗೇಶ್, ಕೆ.ಉಮಾಶಂಕರ್, ಎಸ್.ಸೋಮಣ್ಣ, ಎಸ್.ಅರವಿಂದ, ಎ.ಮಂಚಪ್ಪ, ಎಂ.ರಾಮಕೃಷ್ಣ, ಸಿ.ರೇವಣ್ಣ, ಆರ್.ರವಿಕುಮಾರ್, ಶ್ರೀಮತಿ ಸವಿತಾ, ವೃತ್ತಿಪರ ನಿರ್ದೇಶಕರಾದ ಎಂ. ವೈ. ರಮೇಶ ಗೌಡ ಮತ್ತು ಸಿ.ಎಸ್. ರಾಮಕೃಷ್ಣಯ್ಯ, CEO ಕೆ..ಹರ್ಷಿತ್‌ಗೌಡ ಉಪಸ್ಥಿತರಿದ್ದರು.

ಸ್ಕೌಟ್ಸ್, ಗೈಡ್ಸ್ ಶಿಕ್ಷಕರಿಗೆ ಪ್ರೋತ್ಸಾಹ ಧನ ಹೆಚ್ಚಳಕ್ಕೆ ಸಿಂಧ್ಯಾ ಆಗ್ರಹ



ಮೈಸೂರು,ಸೆ.21(ಎಂಟಿವೈ)– ಸರ್ಕಾರಿ ಶಾಲೆಗಳಲ್ಲಿರುವ ಸ್ಕೌಟ್ಸ್ ಮತ್ತು ಗೈಡ್ಸ್ ಶಿಕ್ಷಕರಿಗೆ ರಾಜ್ಯ ಸರ್ಕಾರ ಪ್ರೋತ್ಸಾಹ ಧನದ ಮೊತ್ತವನ್ನು ಹೆಚ್ಚಿಸಬೇಕು ಎಂದು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ರಾಜ್ಯ ಮುಖ್ಯ ಆಯುಕ್ತ ಪಿ.ಜಿ.ಆರ್.ಸಿಂಧ್ಯಾ ಒತ್ತಾಯಿಸಿದ್ದಾರೆ.

ಮೈಸೂರಿನ ಚಾಮರಾಜೇಂದ್ರ ಸ್ಕೌಟ್ಸ್ ಮತ್ತು ಗೈಡ್ಸ್ ಶಾಲೆಯ ಸಭಾಂಗಣದಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ವತಿಯಿಂದ ಜಿಲ್ಲಾ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಅಧಿಕಾರಿಗಳಿಗಾಗಿ ಗುರುವಾರ ಆಯೋಜಿಸಿದ್ದ ಒಂದು ದಿನದ ಮಾಹಿತಿ ಶಿಬಿರದಲ್ಲಿ ಮಾತನಾಡಿದ ಅವರು, ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಪ್ರಸ್ತುತ ಸೇವೆ ಸಲ್ಲಿಸುತ್ತಿರುವ ಸ್ಕೌಟ್ಸ್ ಮತ್ತು ಗೈಡ್ಸ್ ಶಿಕ್ಷಕರಿಗೆ ಮಾಸಿಕ 250 ರೂ. ನೀಡಲಾಗುತ್ತಿದೆ. ಇದು ಸಾಲದಾಗಿದೆ. ರಾಜ್ಯದಲ್ಲಿ 6 ಲಕ್ಷ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳಿದ್ದು, ತರಬೇತಿ ಪಡೆದ 40 ಸಾವಿರ ಶಿಕ್ಷಕರು ಸೇವೆ ಸಲ್ಲಿಸುತ್ತಿದ್ದಾರೆ. ಸಾರ್ವಜನಿಕ ಶಿಕ್ಷಣ ಇಲಾಖೆಯ ಕೆಲಸದೊಂದಿಗೆ ನಮ್ಮ ಸಂಸ್ಥೆಯ ಕೆಲಸವನ್ನು ಶಿಕ್ಷಕರು ನಿರ್ವಹಿಸುತ್ತಿದ್ದಾರೆ. ಆದರೆ, ಇವರಿಗೆ ಈಗ ನೀಡುತ್ತಿರುವ ಮಾಸಿಕ ವೇತನ ಸಾಕಾಗುತ್ತಿಲ್ಲ. ಅದನ್ನು ಏರಿಕೆ ಮಾಡಬೇಕೆಂಬ ಬೇಡಿಕೆಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಲಾಗಿದೆ. ರಾಜ್ಯದ ಎಲ್ಲ ಶಾಲಾ–ಕಾಲೇಜಿನಲ್ಲೂ ಸ್ಕೌಟ್ಸ್ ಮತ್ತು ಗೈಡ್ಸ್ ಘಟಕ ತೆರೆಯಲಾಗುವುದು. ಇದಕ್ಕೆ ರಾಜ್ಯ ಸರ್ಕಾರವು ಸಹ ಪೂರಕವಾಗಿ ಸ್ಪಂದಿಸಿದೆ. ಘಟಕ ಸ್ಥಾಪನೆಯ ಉದ್ದೇಶದಿಂದಾಗಿ ಪೂರ್ವ ತಯಾರಿಯಾಗಿ ಶಿಕ್ಷಕರಿಗೆ ತರಬೇತಿ ನೀಡಲಾಗುತ್ತಿದೆ. ಅದಕ್ಕಾಗಿ ಶಿಕ್ಷಣ ಇಲಾಖೆಯ ಅಧಿಕಾರಿಗಳ ಸಭೆಯನ್ನು ಆಯಾ ಜಿಲ್ಲೆಯಲ್ಲಿ ನಡೆಸಿ ಮಾಹಿತಿ ನೀಡಲಾಗುತ್ತಿದೆ ಎಂದರು.

ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆ ಯುವ ಜನರ ಸೇವಾ ಸಂಘಟನೆಗಳಾದ ಎನ್‌ಸಿಸಿ, ಎನ್‌ಎಸ್‌ಎಸ್, ರೆಡ್ ಕ್ರಾಸ್‌ನೊಂದಿಗೆ ಪೈಪೋಟಿಗೆ ಇಳಿಯುವುದಿಲ್ಲ. ಈ ಸಂಘಟನೆಗಳು ಉತ್ತಮ ಕೆಲಸ ಮಾಡುತ್ತಿವೆ. ನಮ್ಮ ಸಂಸ್ಥೆಯು ಸಮಾಜ ಸೇವೆಯೊಂದಿಗೆ ಮನುಷ್ಯತ್ವ ನಿರ್ಮಾಣಕ್ಕೆ ಪೂರಕ ಶಿಕ್ಷಣವನ್ನೂ ನೀಡುತ್ತಿದೆ ಎಂದರು.

ಸಮಾಜಕ್ಕೆ ಅಗತ್ಯ ಇರುವ ಸೇವೆ ನೀಡುವಲ್ಲಿ ನಮ್ಮ ಸಂಸ್ಥೆ ಎಂದಿಗೂ ಹಿಂದೇಟು ಹಾಕುವುದಿಲ್ಲ. ಕೊರೊನಾ ಸಂಕಷ್ಟದ ಸಮಯದಲ್ಲಿ ಆನ್‌ಲೈನ್ ಮೂಲಕ ವಿದ್ಯಾರ್ಥಿಗಳಿಗೆ ತರಗತಿ ಮುಂದುವರಿಸಲಾಯಿತು. ಟಿಎ, ಡಿಎ ಸೌಲಭ್ಯವಿಲ್ಲದೆ ನಮ್ಮ ಸಂಸ್ಥೆಯ 20 ಸಾವಿರ ಶಿಕ್ಷಕರು ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ತೊಡಗಿದ್ದರು. ಒಂದು ಕೋಟಿ ಮಾಸ್ಕ್ ಅನ್ನು ತಯಾರಿಸಿ ವಿತರಿಸಲಾಯಿತು ಎಂದು ತಿಳಿಸಿದರು.

ಬೇರೆ ರಾಜ್ಯಕ್ಕೆ ಹೋಲಿಸಿದರೆ ರಾಜ್ಯದಲ್ಲಿ ಗುಣಮಟ್ಟ ಶಿಕ್ಷಣ ದೊರೆಯುತ್ತಿದೆ. ರಾಜ್ಯದಲ್ಲಿ ಕಲಿತ ಇಂಜಿನಿಯರ್‌ಗಳು, ವೈದ್ಯರು, ವಕೀಲರು ಜಗತ್ತಿನ ಎಲ್ಲೆಡೆ ಸಿಗುತ್ತಾರೆ. ರಾಜ್ಯದಲ್ಲಿ ಶಿಕ್ಷಣಕ್ಕೆ ಮೊದಲ ಆದ್ಯತೆ ನೀಡಲಾಗಿದೆ. 12ನೇ ಶತಮಾನದ ಬಸವಣ್ಣನವರ ಕಾಲದಿಂದಲೂ ಶಿಕ್ಷಣಕ್ಕೆ ಆದ್ಯತೆ ನೀಡಲಾಗಿದೆ. ಜಾತಿ, ಧರ್ಮ ಆಧಾರದ ಮೇಲೆ ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಅಕ್ಷರ ಕಲಿಸಲಾಗುತ್ತಿದೆ. ಮಿಷನರಿಗಳು ವಿದ್ಯಾಸಂಸ್ಥೆಗಳನ್ನು ಆರಂಭಿಸಿ ಗುಣಮಟ್ಟದ ಶಿಕ್ಷಣ ನೀಡುತ್ತಿವೆ. ಇಂತಹ ಸಂಸ್ಥೆಗಳಲ್ಲಿ ಕ್ರೈಸ್ತರಿಗೆ ಮಾತ್ರವಲ್ಲದೆ, ಎಲ್ಲಾ ಧರ್ಮಗಳ ಬಡವರಿಗೆ, ಪರಿಶಿಷ್ಟರು, ಹಿಂದುಳಿದ ವರ್ಗದವರಿಗೆ ಸರಿಸಮಾನವಾಗಿ ಕಲಿಕೆಗೆ ಅವಕಾಶ ಒದಗಿಸಲಾಗಿದೆ. ಬಡವರಿಗೆ ಶುಲ್ಕದಲ್ಲೂ ರಿಯಾಯಿತಿ ನೀಡಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ರಾಷ್ಟ್ರ ಉಪಾಧ್ಯಕ್ಷ ಗೀತಾ ನಟರಾಜು, ರಾಜ್ಯ ಜಂಟಿ ಕಾರ್ಯದರ್ಶಿ ಬಿ.ಕೆ.ಬಸವರಾಜು, ಖಜಾಂಚಿ ಗುರುಮೂರ್ತಿ, ಜಿಲ್ಲಾ ಮುಖ್ಯ ಆಯುಕ್ತ ಪಿ.ವಿಶ್ವನಾಥ್, ಆಯುಕ್ತೆ ಕಾವೇರಮ್ಮ, ಮುಖಂಡರಾದ ನಾಗೇಶ್ ಶಿವಪುರ, ಶಿವಕುಮಾರ್ ಇನ್ನಿತರರು ಉಪಸ್ಥಿತರಿದ್ದರು.

ಕೇಂದ್ರ ಮಾಜಿ ಸಚಿವ ಸುಬ್ರಮಣಿಯನ್ ಸ್ವಾಮಿ ಅವರನ್ನು ಭೇಟಿ ಮಾಡಿದ ಕೊಡವ ನ್ಯಾಷನಲ್ ಕೌನ್ಸಿಲ್ ನಿಯೋಗ

ಸಿಎನ್‌ಸಿ ಪಾದಯಾತ್ರೆ, ಕೊಡವರ ಬೇಡಿಕೆಗಳ ಬಗ್ಗೆ ಚರ್ಚೆ



ಮಡಿಕೇರಿ, ಸೆ.21– ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆಯ ನಿಯೋಗ ಕೇಂದ್ರದ ಮಾಜಿ ಕಾನೂನು ಸಚಿವ ಹಾಗೂ ಖ್ಯಾತ ಅರ್ಥಶಾಸ್ತ್ರಜ್ಞ ಡಾ.ಸುಬ್ರಮಣಿಯನ್ ಸ್ವಾಮಿ ಅವರನ್ನು ಇಂದು ಮಂಗಳೂರಿನ ವಿಎಚ್‌ಎಸ್ ಪ್ರಮುಖ ರಾಜೀವ್ ಶೆಟ್ಟಿ ಅವರ ನಿವಾಸದಲ್ಲಿ ಭೇಟಿ ಮಾಡಿತು. ಕೊಡವ ಲ್ಯಾಂಡ್ ಭೌಗೋಳಿಕ–ರಾಜಕೀಯ ಸ್ವಾಯತ್ತತೆ ಮತ್ತು 5 ಹಂತಗಳ ಪಾದಯಾತ್ರೆಯ ಕುರಿತು ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಚರ್ಚಿಸಿದರು.

ಡಾ.ಸುಬ್ರಮಣಿಯನ್ ಸ್ವಾಮಿ ಅವರು ಕೊಡವಲ್ಯಾಂಡ್ ಜಿಯೋ–ರಾಜಕೀಯ ಸ್ವಾಯತ್ತತೆ ಮತ್ತಿತರ ಸಾಂವಿಧಾನಿಕ ಬೇಡಿಕೆಗಳ ಪ್ರಬಲ ಪ್ರತಿಪಾದಕರಾಗಿದ್ದಾರೆ. ಸಿಎನ್‌ಸಿಗೆ ಬೆಂಬಲವಾಗಿ ಕೊಡವರ ಪರ ಸಾರ್ವಜನಿಕ ಹಿತಾಸಕ್ತಿಯ ರಿಟ್ ಅರ್ಜಿಯನ್ನು ಹೈಕೋರ್ಟ್‌ನಲ್ಲಿ ಮಂಡಿಸುವ ಮೂಲಕ ಕಾನೂನು ಹೋರಾಟವನ್ನು ಕೂಡ ನಡೆಸುತ್ತಿರುವುದು ಹೆಮ್ಮೆಯ ವಿಚಾರವೆಂದು ನಾಚಪ್ಪ ತಿಳಿಸಿದರು.

ಅತಿ ಸೂಕ್ಷ್ಮ ಜನಾಂಗವಾಗಿರುವ ಕೊಡವರ ಅಸ್ತಿತ್ವವನ್ನು ಉಳಿಸಲು ಸಿಎನ್‌ಸಿ ವಿವಿಧ ಬೇಡಿಕೆಗಳನ್ನು ಮುಂದಿಟ್ಟು ಹೋರಾಟ ನಡೆಸುತ್ತಿದೆ. ಇದಕ್ಕೆ ಪೂರಕವಾಗಿ ಆಯೋಗವೊಂದನ್ನು ರಚಿಸಬೇಕೆನ್ನುವ ನಿಟ್ಟಿನಲ್ಲಿ ಸಾಂವಿಧಾನಿಕ ಪರಿಹಾರವನ್ನು ಸೂಚಿಸಲು ಸ್ವಾಮಿ ಅವರು ನಿರಂತರ ಪ್ರಯತ್ನದಲ್ಲಿ ತೊಡಗಿದ್ದಾರೆ ಎಂದರು.

ವಿರಾಟ್ ಹಿಂದೂಸ್ಥಾನ ಸಂಘಂನ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಜಗದೀಶ್ ಶೆಟ್ಟಿ, ಪ್ರಮುಖರಾದ ನಿಕುಂಜ್ ಶಾ, ಡಾ.ಸುರೇಂದ್ರ ಶೆಟ್ಟಿ, ವಿಜಯೇಂದ್ರ ಶೆಟ್ಟಿ, ಆಶಿಶ್ ಶೆಟ್ಟಿ, ಗುರುದತ್ ಶೆಟ್ಟಿ, ಸುಧೀರ್ ಭಂಡಾರಿ, ರಾಜೀವ್ ಶೆಟ್ಟಿ, ಸ್ವಪ್ನಾ ಶೆಟ್ಟಿ, ಸಿಎನ್‌ಸಿ ನಿಯೋಗದ ಕಲಿಯಂಡ ಪ್ರಕಾಶ್, ಕಾಂಡೇರ ಸುರೇಶ್, ಚಂಬಂಡ ಜನತ್, ಮಂದಪಂಡ ಮನೋಜ್ ಉಪಸ್ಥಿತರಿದ್ದರು.

ಯುವ ಜನೋತ್ಸವದ ಅಂಗವಾಗಿ ಮ್ಯಾರಥಾನ್



ಮಡಿಕೇರಿ, ಸೆ.21– ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಏಡ್ಸ್ ನಿಯಂತ್ರಣ ಘಟಕ, ಜಿಲ್ಲಾ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮಡಿಕೇರಿ ರೋಟರಿ ವುಡ್ಸ್ ಹಾಗೂ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಸಹಯೋಗದೊಂದಿಗೆ ಕೊಡಗು ಜಿಲ್ಲೆಯಲ್ಲಿ ಜಿಲ್ಲಾ ಮಟ್ಟದ ಯುವ ಜನೋತ್ಸವ ಕಾರ್ಯಕ್ರಮದ ಅಂಗವಾಗಿ ಮ್ಯಾರಥಾನ್ ಸ್ಪರ್ಧೆಗೆ (5 ಕಿ.ಮೀ) ನಗರದ ಜನರಲ್ ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ ಬುಧವಾರ ಚಾಲನೆ ದೊರೆಯಿತು.

ಮ್ಯಾರಥಾನ್ ಸ್ಪರ್ಧೆಯನ್ನು ನಗರಸಭೆ ಅಧ್ಯಕ್ಷೆ ಅನಿತಾ ಪೂವಯ್ಯ ಉದ್ಘಾಟಿಸಿದರು. ಪ್ರಸಕ್ತ (2023–24) ಸಾಲಿನ ಯುವಜನೋತ್ಸವ–ಕಾರ್ಯಕ್ರಮದ ಅಂಗವಾಗಿ (ರೆಡ್ ರಿಬ್ಬನ್ ಓಟ, ಹೆಚ್‌ಐವಿ/ಏಡ್ಸ್ ನಿಯಂತ್ರಣಕ್ಕಾಗಿ ಯುವಕರು) ಎಚ್‌ಐವಿ/ಏಡ್ಸ್ ಜಾಗೃತಿಗಾಗಿ ಮ್ಯಾರಥಾನ್ ಸ್ಪರ್ಧೆ ಹಮ್ಮಿಕೊಳ್ಳುವಂತೆ, ಕರ್ನಾಟಕ ಏಡ್ಸ್ ನಿಯಂತ್ರಣ ಸಂಸ್ಥೆ ವತಿಯಿಂದ ಏರ್ಪಡಿಸಲಾಗಿದೆ ಎಂದರು.

ಎಚ್‌ಐವಿ/ಏಡ್ಸ್ ಬಗ್ಗೆ ಅರಿವು, ಸೇವಾ ಸೌಲಭ್ಯಗಳ ಮಾಹಿತಿ, ಕಳಂಕ ಮತ್ತು ತಾರತಮ್ಯವನ್ನು ತಡೆಗಟ್ಟುವುದು, ಉಚಿತ ರಾಷ್ಟ್ರೀಯ ಸಹಾಯವಾಣಿ 1097, ಎಚ್‌ಐವಿ/ಏಡ್ಸ್ (ತಡೆಗಟ್ಟುವಿಕೆ ಹಾಗೂ ನಿಯಂತ್ರಣ) ಕಾಯಿದೆ 2017 ಮತ್ತಿತರ ಕುರಿತು ಅರಿವು ಮೂಡಿಸುವುದು ಈ ಸ್ಪರ್ಧೆಯ ಮುಖ್ಯ ಉದ್ದೇಶವಾಗಿದೆ ಎಂದು ಅನಿತಾ ಪೂವಯ್ಯ ಹೇಳಿದರು.

ಮ್ಯಾರಥಾನ್ ಸ್ಪರ್ಧೆಯಲ್ಲಿ ಜಿಲ್ಲೆಯ ವಿವಿಧ ಕಾಲೇಜುಗಳ 17 ರಿಂದ 25 ವರ್ಷದ ಒಟ್ಟು 71 ಕಾಲೇಜು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮ್ಯಾರಥಾನ್ ಸ್ಪರ್ಧೆಯು ಬುಧವಾರ ಜನರಲ್ ತಿಮ್ಮಯ್ಯ ಕ್ರೀಡಾಂಗಣ, ಮ್ಯಾನ್ಸ್ ಕಾಂಪೌಂಡ್, ಮಡಿಕೇರಿಯಿಂದ ಪ್ರಾರಂಭವಾಗಿ, ನಗರದ ಪ್ರಮುಖ ಬೀದಿಗಳಾದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತ, ಜನರಲ್ ತಿಮ್ಮಯ್ಯ ವೃತ್ತ, ಮುಖಾಂತರ ಹಾದು ಜನರಲ್ ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣ ತಲುಪಿತು. ಮ್ಯಾರಥಾನ್ ಸಂಚರಿಸುವ ಮಾರ್ಗದಲ್ಲಿ, ಆಟೋ ಪ್ರಚಾರದ ಮುಖಾಂತರ ಎಚ್.ಐ.ವಿ/ಏಡ್ಸ್ ಬಗ್ಗೆ ಅರಿವು ಮೂಡಿಸಲಾಯಿತು.

ಮ್ಯಾರಥಾನ್ ಸ್ಪರ್ಧೆ ಬಾಲಕರ ವಿಭಾಗ: ನಾಪೋಕ್ಲು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಗೌತಮ್ ಎಸ್. (ಪ್ರಥಮ), ಸೋಮವಾರಪೇಟೆ ಸರ್ಕಾರಿ ಪ್ರಥಮ ದರ್ಜೆ ಬಿಟಿಸಿಜಿ ಕಾಲೇಜಿನ ಗಗನ್ ವೈ.ಪಿ (ದ್ವಿತೀಯ), ಗೋಣಿಕೊಪ್ಪ ಕಾವೇರಿ ಕಾಲೇಜಿನ ಗೌತಮ್ ಪಿ.ಸಿ (ತೃತೀಯ), ವಿರಾಜಪೇಟೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ತಾಜುದ್ದೀನ್ ಪಿ.ಯು., ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆಯ ಬಿಎಸ್ಸಿ ನರ್ಸಿಂಗ್‌ನ ಕಿರಣ್ ಮಾಡರ್, ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆಯ ಎಂಬಿಬಿಎಸ್ ವಿದ್ಯಾರ್ಥಿ ಸಿದ್ದಾಪ್ರಭು ಹಾಗೂ ವಿರಾಜಪೇಟೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಶರಣು ಪಿ.ಜಿ. ಸಮಾಧಾನಕರ ಬಹುಮಾನ ಪಡೆದಿದ್ದಾರೆ.

ಬಾಲಕಿಯರ ವಿಭಾಗದಲ್ಲಿ ಪೊನ್ನಂಪೇಟೆ ಕೂರ್ಗ್ ಇನ್ಸ್‌ಟ್ಯೂಟ್ ಆಫ್ ಟೆಕ್ನಾಲಜಿಯ ಚೋಂದಮ್ಮ ಕೆ.ಟಿ. (ಪ್ರಥಮ), ವಿರಾಜಪೇಟೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ತ್ರಿಶಾ ಕೆ.(ದ್ವಿತೀಯ), ಮಡಿಕೇರಿ ಎಫ್‌ಎಂಕೆಎಂಸಿ ಭೂಮಿಕಾ ಕೆ.ಆರ್. (ತೃತೀಯ), ಹಾಗೂ ನಾಪೋಕ್ಲು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಭವಾನಿ ಎಸ್., ವಿರಾಜಪೇಟೆ ಕಾವೇರಿ ಕಾಲೇಜಿನ ದೇಚಮ್ಮ ಸಿ.ಸಿ., ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆಯ ಪ್ಯಾರಾ ಮೆಡಿಕಲ್‌ನ ಮೇಘನಾ ಮುತ್ತಮ್ಮ ಸಮಾಧಾನಕರ ಬಹುಮಾನ ಪಡೆದಿದ್ದಾರೆ.

ಜಾಥಾದಲ್ಲಿ ವಿವಿಧ ಕಾಲೇಜುಗಳಿಂದ ಒಟ್ಟು 71 ವಿದ್ಯಾರ್ಥಿಗಳು ಭಾಗವಹಿಸಿ, ಜಿಲ್ಲಾ ಮಟ್ಟದಲ್ಲಿ ಪ್ರಥಮ ಬಹುಮಾನ ಪಡೆದ ವಿದ್ಯಾರ್ಥಿಗಳಾದ ಗೌತಮ್.ಎಸ್ ಮತ್ತು ಚೋಂದಮ್ಮ ಕೆ.ಟಿ ಅವರು ಸೆಪ್ಟೆಂಬರ್, 22 ರಂದು ಬೆಂಗಳೂರಿನಲ್ಲಿ ನಡೆಯುವ ರಾಜ್ಯ ಮಟ್ಟದ ಮ್ಯಾರಥಾನ್ ಸ್ಪರ್ಧೆಯಲ್ಲಿ ಭಾಗವಹಿಸಲಿದ್ದಾರೆ.

ವಿಜೇತರು ಹಾಗೂ ಭಾಗವಹಿಸಿದ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರವನ್ನು ವಿತರಿಸಲಾಯಿತು. ಜಿಲ್ಲಾ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ವಿಸ್ಮಯಿ, ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿ ಡಾ. ಆನಂದ್, ಮಡಿಕೇರಿ ರೋಟರಿ ವುಡ್ಸ್‌ನ ಅಧ್ಯಕ್ಷ ವಸಂತ್ ಕುಮಾರ್, ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ರವೀಂದ್ರ ರೈ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ತರಬೇತುದಾರ ಅಂಥೋನಿ ಡಿಸೋಜ, ಮಹಾಬಲ, ಬಿಂದ್ಯಾ ಹಾಗೂ ವಿವಿಧ ಕಾಲೇಜಿನ ಪ್ರಾಂಶುಪಾಲರು ಮತ್ತು ಉಪನ್ಯಾಸಕರು ಇತರರು ಇದ್ದರು.

ಮನೆ ಮೇಲೆ ಬಿದ್ದ ಭಾರಿ ಗಾತ್ರದ ಮರ

ಮನೆಯಲ್ಲಿದ್ದವರು ಅದೃಷ್ಟವಶಾತ್ ಪಾರು

ಮಡಿಕೇರಿ, ಸೆ.21– ಭಾರಿ ಗಾತ್ರದ ಮರವೊಂದು ಮನೆ ಮೇಲೆ ಬಿದ್ದ ಪರಿಣಾಮ ಮನೆಗೆ ಹಾನಿ ಸಂಭವಿಸಿದ್ದು, ಅದೃಷ್ಟವಶಾತ್ ಮನೆಮಂದಿ ಪ್ರಾಣಾಪಾಯದಿಂದ ಪಾರಾದ



ಘಟನೆ ಅಮ್ಮತ್ತಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಇಂಜಿಲಗೆರೆಯ ಪುಲಿಯೇರಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ವತ್ಸಲ ಎಂಬವರ ಮನೆ ಮೇಲೆ ರಾತ್ರಿ ವೇಳೆ ಭಾರಿ ಗಾತ್ರದ ಮರವೊಂದು ಉರುಳಿ ಬಿದ್ದ ಪರಿಣಾಮ ಮನೆಯ ಚಾವಣಿಯ ಸಿಮೆಂಟ್ ಶೀಟ್‌ಗಳು ಹಾನಿಗೊಂಡಿವೆ. ಈ ಸಂದರ್ಭ ಮನೆಯಲ್ಲಿದ್ದ ವತ್ಸಲ ಹಾಗೂ ಅವರ ಪುತ್ರ ಸಂದೀಪ್ ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ವಿಷಯ ತಿಳಿದ ವಿರಾಜಪೇಟೆ ಬ್ಲಾಕ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜಾನ್ಸನ್, ಪ್ರಮುಖರಾದ ನೌಶಾದ್, ಉಮ್ಮರ್, ರಾಜನ್, ಉಸ್ಮಾನ್ ಸೇರಿದಂತೆ ಮತ್ತಿತರರು ಸ್ಥಳಕ್ಕೆ ಭೇಟಿ ನೀಡಿ, ಮರವನ್ನು ತೆರವುಗೊಳಿಸಿದರು. ಅಮ್ಮತ್ತಿ ಗ್ರಾಮ ಪಂಚಾಯ್ತಿ ಪಿಡಿಓ ಮೇದಪ್ಪ ಸ್ಥಳ ಪರಿಶೀಲನೆ ನಡೆಸಿದರು. ಗ್ರಾಪಂ ವತಿಯಿಂದ ಮನೆ ಚಾವಣಿಗೆ ಹೊದಿಸಲು ಟಾರ್ಪಲ್ ವ್ಯವಸ್ಥೆಯನ್ನು ಕಲ್ಪಿಸಲಾಯಿತು. ಘಟನೆ ಕುರಿತು ಜಾನ್ಸನ್ ಶಾಸಕ ಎ.ಎಸ್.ಪೊನ್ನಣ್ಣ ಅವರಿಗೆ ಮಾಹಿತಿ ನೀಡಿದ ಮೇರೆಗೆ ಸ್ಪಂದಿಸಿದ ಶಾಸಕರು, ಕೂಡಲೇ ಸ್ಥಳಕ್ಕೆ ತೆರಳಿ ಪರಿಶೀಲನೆ ಮಾಡುವಂತೆ ಸೂಚಿಸಿದ ಮೇರೆಗೆ ಕಂದಾಯ ಇಲಾಖಾಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿದರು.

ಮಡಿಕೇರಿ ದಸರಾಗೆ 2 ಕೋಟಿ ರೂ. ನೀಡಲು ಮನವಿ

ಉಸ್ತುವಾರಿ ಸಚಿವರನ್ನು ಭೇಟಿ ಮಾಡಿದ್ದ ಮಡಿಕೇರಿ ದಸರಾ ಸಮಿತಿ



ಮಡಿಕೇರಿ, ಸೆ.21– ಮಡಿಕೇರಿ ದಸರಾ ಸಮಿತಿ ನಿಯೋಗ ಮಡಿಕೇರಿ ಕ್ಷೇತ್ರದ ಶಾಸಕ ಡಾ.ಮಂಥರ್ ಗೌಡ ಅವರ ನೇತೃತ್ವದಲ್ಲಿ ಇಂದು ಬೆಂಗಳೂರಿನಲ್ಲಿ ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಬೋಸರಾಜು ಅವರನ್ನು ಭೇಟಿಯಾಗಿ ದಸರಾ ಉತ್ಸವ ಆಚರಣೆಗೆ 2 ಕೋಟಿ ರೂ. ಅನುದಾನವನ್ನು ಸರ್ಕಾರದಿಂದ ಬಿಡುಗಡೆಗೊಳಿಸಿಕೊಡಬೇಕೆಂದು ಮನವಿ ಸಲ್ಲಿಸಿತು.

ಈ ಸಂದರ್ಭ ಮಾತನಾಡಿದ ಸಚಿವರು, ಮುಖ್ಯಮಂತ್ರಿಗಳನ್ನು ಭೇಟಿಯಾದ ನಂತರ ಅಂತಿಮ ನಿರ್ಧಾರ ತೆಗೆದುಕೊಳ್ಳುವ ಭರವಸೆ ನೀಡಿದರು.

ಈ ಸಂದರ್ಭ ಮಡಿಕೇರಿ ದಸರಾ ಸಮಿತಿ ಅಧ್ಯಕ್ಷರು ಹಾಗೂ ನಗರಸಭಾ ಅಧ್ಯಕ್ಷೆ ಅನಿತಾ ಪೂವಯ್ಯ, ಕಾರ್ಯಾಧ್ಯಕ್ಷ ಪ್ರಕಾಶ್ ಆಚಾರ್ಯ, ಪ್ರಮುಖರಾದ ಟಿ.ಪಿ.ರಮೇಶ್, ಮುನಿರ್ ಅಹಮ್ಮದ್, ಪ್ರಧಾನ ಕಾರ್ಯದರ್ಶಿ ಬಿ.ವೈ.ರಾಜೇಶ್, ನಗರಸಭಾ ಸದಸ್ಯ ಅರುಣ್ ಶೆಟ್ಟಿ ಮತ್ತಿತರರು ಹಾಜರಿದ್ದರು. ಇದೇ ಸಂದರ್ಭ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ ಅವರಿಗೂ ನಿಯೋಗ ಮನವಿ ಪತ್ರ ಸಲ್ಲಿಸಿತು.

ಪಶು ಸಖಿಯರಿಗೆ ಪಶು ಕಿಟ್ ವಿತರಣೆ



ಗೋಣಿಕೊಪ್ಪ, ಸೆ.21– ಪೊನ್ನಂಪೇಟೆ ತಾಲೂಕು ಪಶುಪಾಲನಾ ಇಲಾಖೆ ವತಿಯಿಂದ ಪಶು ಸಖಿಯರಿಗೆ ಪಶು ಕಿಟ್ ವಿತರಣೆ ಮಾಡಲಾಯಿತು. ತಾಪಂ ಇಓ ಕೋಣಿಯಂಡ ಅಪ್ಪಣ್ಣ ಮಾತನಾಡಿ, ಯೋಜನೆಗಳನ್ನು ರೈತರಿಗೆ ತಲುಪಿಸಲು ಸೂಚಿಸಿದರು. ತಾಲೂಕು ಮುಖ್ಯ ಪಶು ವೈದ್ಯಾಧಿಕಾರಿ ಡಾ. ಎ. ಎಸ್. ಶಾಂತೇಶ್ ಮಾತನಾಡಿ, ಜಾನುವಾರುಗಳ ಪ್ರಥಮ ಚಿಕಿತ್ಸೆ ಹಾಗೂ ಕಾಲುಬಾಯಿಜ್ವರ ವಿರುದ್ಧ ಲಸಿಕೆ ಹಾಕುವ ಯೋಜನೆ ಬಗ್ಗೆ ಜಾಗೃತಿ ಮೂಡಿಸಿದರು.

ಅಂಬೇಡ್ಕರ್‌ಗೆ ಅಪಮಾನ: ಡಿಎಸ್‌ಎಸ್ ಪ್ರತಿಭಟನೆ



ಕುಶಾಲನಗರ, ಸೆ.21– ಅಂಬೇಡ್ಕರ್ ಭಾವಚಿತ್ರವನ್ನು ಕಚೇರಿಯಲ್ಲಿ ಅಳವಡಿಸದೆ ಅಪಮಾನ ಮಾಡಲಾಗಿದೆ ಎಂದು ಆರೋಪಿಸಿ ದಲಿತಪರ ಸಂಘಟನೆಗಳು ಕೂಡಿಗೆ ಗ್ರಾಮ ಪಂಚಾಯತಿ ಮುಂದೆ ಗುರುವಾರ ಪ್ರತಿಭಟನೆ ನಡೆಸಿದವು.

ಸಂವಿಧಾನ ಪೀಠಿಕೆ ಓದುವ ಕಾರ್ಯಕ್ರಮದಲ್ಲಿ ಕಚೇರಿಯ ಗೋಡೆ ಮೇಲಿದ್ದ ಅಂಬೇಡ್ಕರ್ ಫೋಟೋವನ್ನು ಬಿಚ್ಚಿ ಕಾರ್ಯಕ್ರಮ ಮುಗಿದ ನಂತರ ಮೂಲೆಗೆ ಹಾಕುವ ಮೂಲಕ ಅಂಬೇಡ್ಕರ್ ಫೋಟೋಗೆ ಅಪಮಾನ ಮಾಡಿದ್ದು, ಗ್ರಾಪಂ ಆಡಳಿತ ಮಂಡಳಿ ಹಾಗೂ ಪಂಚಾಯತಿ ಅಭಿವೃದ್ಧಿ ಅಧಿಕಾರಿ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಸ್ಥಳಕ್ಕೆ ಆಗಮಿಸಿದ ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ ಜಯಣ್ಣ ಅವರಿಗೆ ಪ್ರತಿಭಟನಾಕಾರರು ಮನವಿ ಸಲ್ಲಿಸಿ ಕ್ರಮಕ್ಕೆ ಆಗ್ರಹಿಸಿದರು. ಪ್ರತಿಭಟನೆಯಲ್ಲಿ ದಲಿತಪರ ಸಂಘಟನೆಗಳ ಮುಖಂಡರಾದ ಸಿದ್ದಪ್ಪ, ಬಿ.ಡಿ.ಅಣ್ಣಯ್ಯ, ಕೆಬಿ.ರಾಜು, ನಾಗರಾಜ್, ಚರಣ್, ಗಣೇಶ್, ಕಿರಣ್ ಸೇರಿದಂತೆ ಗ್ರಾಮಸ್ಥರು ಇದ್ದರು.

ನಾಳೆ ವಿದ್ಯುತ್ ವ್ಯತ್ಯಯ



ಚಾಮರಾಜನಗರ, ಸೆ.21– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ಚಾಮರಾಜನಗರ ಉಪವಿಭಾಗ ವ್ಯಾಪ್ತಿಯಲ್ಲಿ ಸೆ.23ರಂದು 2ನೇ ತ್ರೈಮಾಸಿಕ ನಿರ್ವಹಣೆ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಬೆಳಗ್ಗೆ 9 ರಿಂದ ಸಂಜೆ 5 ಗಂಟೆವರೆಗೆ ಪಣ್ಯದಹುಂಡಿ, ಬದನಗುಪ್ಪೆ, ಬೆಂಡರವಾಡಿ, ಕೆಲ್ಲಂಬಳ್ಳಿ ಎನ್‌ಜೆವೈ, ಇಂಡಸ್ಟ್ರಿಯಲ್ ಏರಿಯಾ, ಕೆಇಡಿಪಿ 10 ಮತ್ತು 11, ಮುತ್ತಿಗೆ, ಹೆಗ್ಗೋಠಾರ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿವೆ.

ನಾಳೆ ದಸರಾ ಕ್ರೀಡಾಕೂಟ

ಚಾಮರಾಜನಗರ, ಸೆ.21– ಜಿಲ್ಲಾಡಳಿತ, ಜಿಪಂ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಂಯುಕ್ತಾಶ್ರಯದಲ್ಲಿ ಯಳಂದೂರು ತಾಲೂಕು ಮಟ್ಟದ ದಸರಾ ಕ್ರೀಡಾಕೂಟವನ್ನು ಸೆ.23 ರಂದು ಬೆಳಗ್ಗೆ 10.30ಕ್ಕೆ ಸಂತೇಮರಹಳ್ಳಿ ಜೆಎಸ್‌ಎಸ್ ಪ್ರೌಢಶಾಲೆ ಮೈದಾನದಲ್ಲಿ ಏರ್ಪಡಿಸಲಾಗಿದೆ. ಶಾಸಕ ಎ.ಆರ್.ಕೃಷ್ಣಮೂರ್ತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ತಹಸೀಲ್ದಾರ್ ಆರ್. ಜಯಪ್ರಕಾಶ್, ತಾಪಂ ಇಓ ಆರ್.ಉಮೇಶ್, ಬಿಇಓ ಕೆ.ಕಾಂತರಾಜು, ತಾಲೂಕು ದೈಹಿಕ ಶಿಕ್ಷಣ ಪರಿವೀಕ್ಷಕ ಎಸ್.ಲಿಂಗರಾಜು ಭಾಗವಹಿಸುವರು.

ತಮಿಳುನಾಡಿಗೆ ನೀರು ಬಿಡಲು ಸುಪ್ರೀಂಕೋರ್ಟ್ ತೀರ್ಪು ಹಿನ್ನೆಲೆ

ರೈತ, ಕನ್ನಡಪರ ಸಂಘಟನೆಗಳಿಂದ ಸರಣಿ ಪ್ರತಿಭಟನೆ

▸ ರಾಷ್ಟ್ರೀಯ ಹೆದ್ದಾರಿ ತಡೆ ▸ ಖಾಲಿ ಮಡಿಕೆ ಪ್ರದರ್ಶನ



ಚಾಮರಾಜನಗರ, ಸೆ.21– ತಮಿಳುನಾಡಿಗೆ ಕಾವೇರಿ ನೀರು ಹರಿಸುವಂತೆ ಸುಪ್ರೀಂಕೋರ್ಟ್ ತೀರ್ಪು ನೀಡಿದ ಹಿನ್ನೆಲೆಯಲ್ಲಿ ನಗರದಲ್ಲಿ ಗುರುವಾರ ರಾಜ್ಯ ಕಬ್ಬು ಬೆಳೆಗಾರರ ಸಂಘ, ರೈತ ಸಂಘ ಹಾಗೂ ಕರ್ನಾಟಕ ಸೇನಾ ಪಡೆ ಕಾರ್ಯಕರ್ತರು ಪ್ರತ್ಯೇಕ ಪ್ರತಿಭಟನೆ ನಡೆಸಿ, ಆಕ್ರೋಶ ವ್ಯಕ್ತಪಡಿಸಿದರು.

ರಾಷ್ಟ್ರೀಯ ಹೆದ್ದಾರಿ ತಡೆ: ಕಬ್ಬು ಬೆಳೆಗಾರರ ಸಂಘದ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು, ನಗರದಲ್ಲಿ ಹಾದು ಹೋಗಿರುವ ಬೆಂಗಳೂರು– ದಿಂಡಿಗಲ್ ರಾಷ್ಟ್ರೀಯ ಹೆದ್ದಾರಿ 209 ಅನ್ನು ತಡೆದು ಆಕ್ರೋಶ ಹೊರ ಹಾಕಿದರು.

ಸಂಘದ ಕಾರ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಮಾತನಾಡಿ, ರಾಜ್ಯದ ಜನರಿಗೆ ನೀರಿಲ್ಲ. ಸುಪ್ರೀಂಕೋರ್ಟ್ ಆದೇಶ ವಿರೋಧಿಸಿ ರಾಜ್ಯ ಸರ್ಕಾರ ನಿರ್ಧಾರ ಕೈಗೊಂಡಿರುವ ಉದಾಹರಣೆಗಳಿವೆ. ಬಂಗಾರಪ್ಪ ಅವರು ಆ ನಿರ್ಧಾರ ಕೈಗೊಂಡಿದ್ದರು. ಇದು ಕುಡಿಯುವ ನೀರಿನ ವಿಚಾರ. ವಿಶ್ವಸಂಸ್ಥೆ ಆದೇಶ ಮಾಡಿದರೂ ಹರಿಸಬಾರದು. ಸರ್ಕಾರ ನ್ಯಾಯಾಲಯಕ್ಕೆ, ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ ರಾಜ್ಯದ ಪರಿಸ್ಥಿತಿ ಮನವರಿಕೆ ಮಾಡಿಕೊಡಬೇಕು. ಸುಪ್ರೀಂಕೋರ್ಟ್‌ನಲ್ಲಿ ಮರು ಅರ್ಜಿ ಅಥವಾ ಮೇಲ್ಮನವಿ ಸಲ್ಲಿಸಲಿ. ಒಂದು ಲೀಟರ್ ನೀರನ್ನೂ ತಮಿಳುನಾಡಿಗೆ ಬಿಡಬಾರದು ಎಂದು ಆಗ್ರಹಿಸಿದರು.

ನೀರಿನ ವಿಚಾರದಲ್ಲಿ ಕ್ಯಾತೆ ತೆಗೆಯುವ ತಮಿಳುನಾಡು ಸರ್ಕಾರಕ್ಕೆ ರಾಜ್ಯದ ರೈತರು ಬುದ್ಧಿ ಕಲಿಸುತ್ತೇವೆ. ತಮಿಳುನಾಡು ವಾಹನಗಳ ಪ್ರವೇಶ, ಚಲನಚಿತ್ರಗಳ ಬಿಡುಗಡೆಗೆ ಅವಕಾಶ ಕೊಡುವುದಿಲ್ಲ. ಸರ್ವಪಕ್ಷ ಸಭೆಯಲ್ಲಿ ತಮಿಳುನಾಡಿಗೆ ನೀರು ಹರಿಸುವುದಿಲ್ಲ ಎಂಬ ನಿರ್ಧಾರ ಸರ್ಕಾರ ತೆಗೆದುಕೊಂಡಿದೆ. ಅದರಂತೆ ನಡೆದುಕೊಳ್ಳಬೇಕು. ಇಲ್ಲದಿದ್ದರೆ ಅದರ ಪರಿಣಾಮವನ್ನು ರಾಜ್ಯ ಸರ್ಕಾರ ಅನುಭವಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ವಾಹನ ಸಂಚಾರ ತಡೆದು ಧರಣಿ ನಡೆಸಿದ ಪ್ರತಿಭಟನಾಕಾರರನ್ನು ಪೊಲೀಸರು ವಶಕ್ಕೆ ಪಡೆದು ಕರೆದೊಯ್ದರು. ಪ್ರತಿಭಟನೆಯಲ್ಲಿ ನಾಗರಾಜು, ಮಹೇಂದ್ರ, ಪ್ರವೀಣ್, ದೊಡ್ಡಗುರು, ಗುರುಮಲ್ಲಪ್ಪ, ರಾಜು, ಸಿದ್ದರಾಜು, ಬಸವರಾಜಪ್ಪ, ನಂದೀಶ್, ರವಿ ಇತರರಿದ್ದರು.

ಖಾಲಿ ಮಡಕೆ ಪ್ರದರ್ಶನ: ಸುಪ್ರೀಂ ಕೋರ್ಟ್ ತೀರ್ಪು ಖಂಡಿಸಿ ನಗರದಲ್ಲಿ ಕರ್ನಾಟಕ ಸೇನಾ ಪಡೆ ಕಾರ್ಯಕರ್ತರು ಖಾಲಿ ಮಡಕೆ ಪ್ರದರ್ಶಿಸಿ ವಿನೂತನ ಪ್ರತಿಭಟನೆ ನಡೆಸಿದರು. ನಗರದ ಶ್ರೀಚಾಮರಾಜೇಶ್ವರ ಉದ್ಯಾನವನದ ಆವರಣದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು, ಅಲ್ಲಿಂದ ಖಾಲಿ ಮಡಕೆ ಹಿಡಿದು ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ಕೆಲಕಾಲ ರಸ್ತೆತಡೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.



ಚಾ.ರಂ.ಶ್ರೀನಿವಾಸಗೌಡ ಮಾತನಾಡಿ, ತಮಿಳುನಾಡು ಸರ್ಕಾರ ಮತ್ತು ಕಾವೇರಿ ನೀರು ನಿರ್ವಹಣಾ ಮಂಡಳಿಯಿಂದ ಕರ್ನಾಟಕಕ್ಕೆ ಅನ್ಯಾಯವಾಗಿದ್ದು, ಸುಪ್ರೀಂಕೋರ್ಟ್‌ನಲ್ಲಿಯೂ ತಮಿಳುನಾಡಿನ ಪರ ಕಾವೇರಿ ತೀರ್ಪು ನೀಡಿರುವುದು ಕರ್ನಾಟಕ ಪಾಲಿಗೆ ಬರಸಿಡಿಲು ಬಡಿದಂತಾಗಿದೆ ಎಂದರು. ಪ್ರತಿಭಟನೆಯಲ್ಲಿ ಮುಖಂಡರಾದ ಶಾ. ಮುರಳಿ, ನಿಜಧ್ವನಿ ಗೋವಿಂದರಾಜು, ಗು. ಪುರುಷೋತ್ತಮ್, ಚಾ.ರಾ.ಕುಮಾರ್, ರವಿಚಂದ್ರಪ್ರಸಾದ್ ಕಹಳೆ, ಚಾ.ಹ. ರಾಮು, ಶಿವು, ಚಾ.ಹ. ಶಿವರಾಜ್, ತಾಂಡವಮೂರ್ತಿ, ವೀರಭದ್ರ, ಲಿಂಗರಾಜು, ಮಂಜು, ರಂಗಸ್ವಾಮಿ ಇತರರಿದ್ದರು.

ರೈತ ಸಂಘದಿಂದ ಪ್ರತಿಭಟನೆ

ಚಾಮರಾಜನಗರ, ಸೆ.21– ತಮಿಳುನಾಡಿಗೆ ಕಾವೇರಿ ನೀರು ಹರಿಸುವುದನ್ನು ಖಂಡಿಸಿ ಹಾಗೂ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ನಗರದಲ್ಲಿ ಗುರುವಾರ ರೈತ ಸಂಘದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ನಗರದ ಶ್ರೀಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಮುಂಭಾಗ ಸಮಾವೇಶಗೊಂಡ ಪ್ರತಿಭಟನಾಕಾರರು, ಅಲ್ಲಿಂದ ಭುವನೇಶ್ವರಿ ವೃತ್ತಕ್ಕೆ ತೆರಳಿ ಕೆಲಕಾಲ ರಸ್ತೆ ತಡೆ ನಡೆಸಿದರು. ನಂತರ ಬಿ.ರಾಚಯ್ಯ ಜೋಡಿ ರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ರಾಜ್ಯದಲ್ಲಿ ಬರಗಾಲ ಆವರಿಸಿ, ರೈತರು ನೀರಿಲ್ಲದೇ ಪರಿತಪಿಸುತ್ತಿದ್ದಾರೆ. ಆದರೆ, ಕಾವೇರಿ ನೀರು ನಿರ್ವಹಣಾ ಮಂಡಳಿ ಆದೇಶದಂತೆ ರಾಜ್ಯ ಸರ್ಕಾರ ತಮಿಳುನಾಡಿಗೆ ನೀರು ಹರಿಸುತ್ತಿರುವುದು ಸರಿಯಲ್ಲ. ರಾಜ್ಯದ ವಾಸ್ತವಾಂಶ ತಿಳಿಸುವಲ್ಲಿ ಸರ್ಕಾರ ವಿಫಲವಾಗಿದೆ ಎಂದು ದೂರಿದರು.

ಕೂಡಲೇ ಸರ್ಕಾರ ತಮಿಳುನಾಡಿಗೆ ಹರಿಸುತ್ತಿರುವ ನೀರನ್ನು ನಿಲ್ಲಿಸಬೇಕು ಎಂದು ಒತ್ತಾಯಿಸಿದ ಅವರು, ಜಿಲ್ಲೆಯನ್ನು ಬರಗಾಲ ಪ್ರದೇಶವೆಂದು ಘೋಷಣೆ ಮಾಡಬೇಕು. ವನ್ಯಜೀವಿಗಳ ದಾಳಿಯಿಂದ ಬೆಳೆ ನಷ್ಟ ಅನುಭವಿಸಿರುವ ರೈತರಿಗೆ ಸೂಕ್ತ ಪರಿಹಾರ ನೀಡಬೇಕು. ಬಿಳಿಗಿರಿರಂಗನ ಬೆಟ್ಟ, ಮಲೆ ಮಹದೇಶ್ವರ ಬೆಟ್ಟ ರಸ್ತೆ ಸರಿಪಡಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ರೈತ ಸಂಘದ ಅಧ್ಯಕ್ಷ ಪ್ರಕಾಶ್, ಕಾರ್ಯದರ್ಶಿ ಡಾ.ಗುರುಪ್ರಸಾದ್, ತಾಲೂಕು ಅಧ್ಯಕ್ಷ ಮಹೇಶ್, ಮಹದೇವಪ್ಪ, ಮಹೇಶ್, ಸಂಪತ್, ಗುರು, ಶಾಂತಕುಮಾರ್, ಲಿಂಗಸ್ವಾಮಿ, ಮಾದೇಶ, ಮಣಿಕಂಠ, ಪ್ರಸಾದ್, ಪ್ರಭುಸ್ವಾಮಿ ಸೇರಿದಂತೆ ರೈತ ಮುಖಂಡರು ಇದ್ದರು.

ಸವಿತಾ ಸಮಾಜದ ಸ್ಮಶಾನಕ್ಕೆ ಭೂಮಿ ನೀಡಲು ಮನವಿ



ಚಾಮರಾಜನಗರ, ಸೆ.21– ನಗರದ ಸವಿತಾ ಸಮಾಜದ ಸ್ಮಶಾನಕ್ಕೆ ಭೂಮಿ ನೀಡುವಂತೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರಿಗೆ ಸಮುದಾಯದ ಮುಖಂಡರು ಮನವಿ ಸಲ್ಲಿಸಿದರು.

ನಗರದಲ್ಲಿ ಗುರುವಾರ ಶಾಸಕರನ್ನು ಭೇಟಿ ಮಾಡಿದ ಸವಿತಾ ಸಮಾಜದ ಮುಖಂಡರು, ಸ್ವಾತಂತ್ರ್ಯ ಪೂರ್ವದಿಂದಲೂ ನಗರದ ಹೊರವಲಯದಲ್ಲಿರುವ ಸರ್ವೇ ನಂ.619ರ ಭೂಮಿಯಲ್ಲಿ ಸವಿತಾ ಸಮಾಜದ ಯಾರೇ ಮೃತಪಟ್ಟರೂ, ಅವರ ಶವಸಂಸ್ಕಾರ ಮಾಡಿಕೊಂಡು ಬರುತ್ತಿದ್ದೇವೆ. ಆದರೆ, ಇತ್ತೀಚೆಗೆ ಈ ಜಾಗದಲ್ಲಿ ಶವ ಸಂಸ್ಕಾರ ಮಾಡದಂತೆ ನಮಗೆ ಕೆಲವರು ತಿಳಿಸಿದ್ದಾರೆ. ಇದರಿಂದ ನಮಗೆ ದಿಕ್ಕೇ ತೋಚದಂತಾಗಿದೆ ಎಂದು ಶಾಸಕರ ಬಳಿ ಅಳಲು ತೋಡಿಕೊಂಡರು.

ಈಗಾಗಲೇ ನಮ್ಮ ಪೂರ್ವಿಕರ ಸಮಾಧಿಗಳನ್ನು ನಾಶ ಮಾಡಿ, ಜಾಗ ಸಮತಟ್ಟು ಮಾಡಲಾಗಿದೆ. ಇದರಿಂದ ನಮ್ಮ ಪೂರ್ವಿಕರ ಗುರುತು ಇಲ್ಲವಾಗಿದೆ. ಮುಂದಿನ ದಿನಗಳಲ್ಲಿ ಸವಿತಾ ಸಮಾಜದವರು ಸೇರಿದಂತೆ ಇನ್ನಿತರ ಸಮುದಾಯದವರಿಗೆ ಶವ ಸಂಸ್ಕಾರಕ್ಕೆ ಅಲ್ಲಿ ಅವಕಾಶ ನೀಡದಿದ್ದರೇ ನಾವೆಲ್ಲಾ ಏನು ಮಾಡಬೇಕೆಂಬುದು ತಿಳಿಯದಾಗಿದೆ. ಹೀಗಾಗಿ ಅದೇ ಜಾಗದಲ್ಲಿ ಶವ ಸಂಸ್ಕಾರ ಮಾಡಲು ಅವಕಾಶ ಮಾಡಿಕೊಡಬೇಕು ಎಂದು ಮನವಿ ಮಾಡಿದರು.

ಮನವಿ ಆಲಿಸಿ ಮಾತನಾಡಿದ ಶಾಸಕ ಪುಟ್ಟರಂಗಶೆಟ್ಟಿ, ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಈ ವೇಳೆ ಸವಿತಾ ಸಮಾಜದ ಗೌರವಾಧ್ಯಕ್ಷ ಮುದ್ದುಮಾಧು, ಉಪಾಧ್ಯಕ್ಷ ರಂಗಸ್ವಾಮಿ, ತಾಲೂಕು ಅಧ್ಯಕ್ಷ ಬಸವಣ್ಣ ಮುಖಂಡರಾದ ನಂಜೆದೇವರು, ನಿಂಗರಾಜು, ಚಂದ್ರಶೇಖರ್, ನಿಂಗಪ್ಪ ಮಹದೇವ, ನಾಗೇಂದ್ರ, ನಾಗ, ಮಾದೇಶ, ಕುಮಾರ್ ಸೇರಿದಂತೆ ಸಮುದಾಯದ ಯುವಕರಿದ್ದರು.

ಸಕಾಲಕ್ಕೆ ಸಾಲ ಮರುಪಾವತಿಸಿ ಬ್ಯಾಂಕ್ ಏಳಿಗೆಗೆ ಸಹಕರಿಸಿ

ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಹೆಚ್.ಎಂ.ಮಹೇಶ್



ಗುಂಡ್ಲುಪೇಟೆ, ಸೆ.21– ರೈತರು ಸಕಾಲಕ್ಕೆ ಸಾಲ ಮರುಪಾವತಿಸಿ ಬ್ಯಾಂಕ್ ಏಳಿಗೆಗೆ ಸಹಕರಿಸಿ ಎಂದು ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಹೆಚ್.ಎಂ.ಮಹೇಶ್ ಮನವಿ ಮಾಡಿದರು.

ಪಟ್ಟಣದ ಸಿಎಂಎಸ್ ಕಲಾಮಂದಿರದಲ್ಲಿ ಆಯೋಜಿಸಿದ್ದ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ರೈತರು ಬ್ಯಾಂಕ್‌ನಿಂದ ಪಡೆದ ಸಾಲವನ್ನು ಉತ್ಪಾದಕ ಚಟುವಟಿಕೆಗಳಿಗೆ ಬಳಸಿಕೊಂಡು ಅಭಿವೃದ್ಧಿ ಹೊಂದಬೇಕು ಎಂದು ಸಲಹೆ ನೀಡಿದರು.

ಪಿಕಾರ್ಡ್ ಬ್ಯಾಂಕ್ ಕಡಿಮೆ ಬಡ್ಡಿದರದಲ್ಲಿ ಕೃಷಿ, ವಾಣಿಜ್ಯ ಹಾಗೂ ಚಿನ್ನದ ಮೇಲೆ ಸಾಲ ನೀಡುತ್ತಿದೆ. ಇದನ್ನು ಉತ್ಪಾದಕ ಚಟುವಟಿಕೆಗಳಿಗೆ ಬಳಸಿಕೊಂಡರೆ ಹೆಚ್ಚಿನ ಲಾಭ ಗಳಿಸಲು ಸಾಧ್ಯ. ಆದರೆ ಹೆಚ್ಚಿನ ರೈತರು ಸರ್ಕಾರ ಸಾಲ ಮನ್ನಾ ಮಾಡುತ್ತದೆ ಎಂದು ಮರು ಪಾವತಿಸದೆ ಸುಸ್ತಿದಾರರಾಗುತ್ತಿದ್ದಾರೆ. ಇದರಿಂದ ಹೊಸ ಸದಸ್ಯರಿಗೂ ಸಾಲ ಕೊಡಲು ಸಾಧ್ಯವಾಗದೆ ಬ್ಯಾಂಕು ನಷ್ಟ ಅನುಭವಿಸಬೇಕಾಗುತ್ತದೆ. ಆದ್ದರಿಂದ ಸಕಾಲದಲ್ಲಿ ಸಾಲದ ಕಂತುಗಳನ್ನು ಪಾವತಿಸಬೇಕು ಎಂದರು.

ಈ ವೇಳೆ ಉಪಾಧ್ಯಕ್ಷ ಡಿ.ಮಹೇಶ್, ನಿರ್ದೇಶಕರಾದ ಕೊಡಸೋಗೆ ಶಿವಬಸಪ್ಪ, ಎನ್.ಮಲ್ಲೇಶ್, ಎಸ್.ಎಂ.ಮಲ್ಲಿಕಾರ್ಜುನ, ಡಿ.ಎಸ್.ಶಿವಸ್ವಾಮಿ, ಶಿವಣ್ಣ, ಸಿ.ಜಿ.ನಾಗೇಂದ್ರ, ಬಸವರಾಜು, ಗೌರಮ್ಮ, ಈಶ್ವರಪ್ಪ, ಬಸವಣ್ಣ, ಮಹದೇವಪ್ಪ ಬ್ಯಾಂಕ್ ವ್ಯವಸ್ಥಾಪಕ ಆನಂದ್ ಹಾಗೂ ಸಿಬ್ಬಂದಿ ಮತ್ತು ಷೇರುದಾರರು ಭಾಗವಹಿಸಿದ್ದರು.

ಚಾ. ನಗರಸಭೆ ಸಾಮಾನ್ಯ ಸಭೆ ಮುಂದೂಡಿಕೆ

ಚಾಮರಾಜನಗರ, ಸೆ.21– ನಗರಸಭೆ ಆಡಳಿತಾಧಿಕಾರಿಗಳಾಗಿರುವ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸೆ.22ರಂದು ನಿಗದಿಯಾಗಿದ್ದ ಚಾಮರಾಜನಗರ ನಗರಸಭೆಯ ಸಾಮಾನ್ಯ ಸಭೆಯನ್ನು ಕಾರಣಾಂತರಗಳಿಂದ ಮುಂದೂಡಲಾಗಿದೆ ಮುಂದಿನ ದಿನಾಂಕವನ್ನು ನಂತರ ತಿಳಿಸಲಾಗುವುದೆಂದು ಎಂದು ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಮಿತ್ರ



ಮೈಸೂರು ಸರಸ್ವತಿಪುರಂನ ಕೃಷ್ಣಧಾಮದಲ್ಲಿ ಚಾತುರ್ಮಾಸ್ಯ ವ್ರತದಲ್ಲಿರುವ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿಯವರನ್ನು ವಿಧಾನಸಭೆ ಸ್ಪೀಕರ್ ಯು.ಟಿ.ಖಾದರ್ ಗುರುವಾರ ಭೇಟಿ ಮಾಡಿ, ಆಶೀರ್ವಾದ ಪಡೆದರು.



ಮೈಸೂರಿನ ಬನ್ನಿಮಂಟಪದ ಕ್ರೈಸ್ತ ಸಮಾಜದ ಬಿಷಪ್ ಹೌಸ್‌ಗೆ ಭೇಟಿ ನೀಡಿದ ವಿಧಾನಸಭೆ ಸ್ಪೀಕರ್ ಯು.ಟಿ.ಖಾದರ್ ಅವರನ್ನು ಆಡಳಿತಾಧಿಕಾರಿ ಬರ್ನಾರ್ಡ್ ಬ್ಲಾಸಿಯಸ್ ಮೊರಾಸ್ ಅವರು ಅಭಿನಂದಿಸಿದರು. ಈ ವೇಳೆ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್ ಮತ್ತಿತರರಿದ್ದರು.



ಮೈಸೂರಿನಲ್ಲಿ ಸ್ಪೀಕರ್ ಯು.ಟಿ.ಖಾದರ್ ದರ್ಗಾಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಶಾಸಕ ಕೆ.ಹರೀಶ್‌ಗೌಡ, ಕಾಂಗ್ರೆಸ್ ಮುಖಂಡ ಅಬ್ದುಲ್ ಅಜೀಜ್(ಅಬ್ದುಲ್ಲಾ) ಮತ್ತಿತರ ಮುಖಂಡರು ಉಪಸ್ಥಿತರಿದ್ದರು.

ಒಂದನೇ ಪುಟದಿಂದ

ಬೊಮ್ಮಾಯಿ ಪ್ರತಿಕ್ರಿಯೆ

ಮಾಡಬೇಕಿದೆ, ಸಿಡಬ್ಲ್ಯುಎಂಎ ಆದೇಶ ಅಂತಿಮವಲ್ಲ. ಸುಪ್ರೀಂಕೋರ್ಟ್ ಈ ವಿಚಾರದಲ್ಲಿ ತನಗೆ ಸಂಬಂಧ ಇಲ್ಲ ಎನ್ನುವುದು ಸರಿಯಲ್ಲ. ಕೇವಲ ಕರ್ನಾಟಕದ ಡ್ಯಾಮ್‌ಗಳ ನೀರಿನ ಮಟ್ಟ ಲೆಕ್ಕ ಹಾಕುವುದಲ್ಲ. ತಮಿಳುನಾಡು ಡ್ಯಾಮ್‌ಗಳಲ್ಲಿನ ನೀರಿನ ಮಟ್ಟ ಲೆಕ್ಕ ಹಾಕಬೇಕು ಎಂದರು. ಸಿಡಬ್ಲ್ಯುಎಂಎ ಮೊದಲ ಆದೇಶ ಬಂದಾಗಲೇ ರಾಜ್ಯ ಸರ್ಕಾರ ಸುಪ್ರೀಂಕೋರ್ಟ್ ಮುಂದೆ ಮೇಲ್ಮನವಿ ಸಲ್ಲಿಸಬೇಕಿತ್ತು. ಸರ್ಕಾರ ಎರಡು ಬಾರಿ ನೀರು ಬಿಟ್ಟು ಈಗ ಸುಪ್ರೀಂಕೋರ್ಟ್ ಮುಂದೆ ಹೋಗಿದ್ದಾರೆ.

ಸುಪ್ರೀಂಕೋರ್ಟ್ ಸಂಪೂರ್ಣವಾಗಿ ಸಿಡಬ್ಲ್ಯುಎಂಎ ಮೇಲೆ ಅವಲಂಬನೆ ಆಗಿದೆ. ಕೇವಲ ಅಂಕಿ-ಅಂಶಗಳನ್ನು ಇಟ್ಟುಕೊಂಡು ಆದೇಶ ಮಾಡುತ್ತಿವೆ. ರಾಜ್ಯ ಸರ್ಕಾರ ಸುಪ್ರೀಂಕೋರ್ಟ್‌ನಲ್ಲಿ ಪುನರ್ ಪರಿಶೀಲನಾ ಅರ್ಜಿ ಸಲ್ಲಿಸುವುದಾಗಿ ಹೇಳುತ್ತಾರೆ.

ತಮಿಳುನಾಡು ಈಗಾಗಲೇ ಅಕ್ರಮವಾಗಿ ನೀರು ಬಳಕೆ ಮಾಡಿಕೊಂಡಿದೆ. ಅದನ್ನು ಸುಪ್ರೀಂಕೋರ್ಟ್ ಗಮನಕ್ಕೆ ತರಬೇಕು. ರಾಜ್ಯ ಸರ್ಕಾರ ಕೇವಲ ನಮ್ಮಲ್ಲಿ ನೀರಿಲ್ಲ ಅಂತ ಹೇಳುವುದಷ್ಟೇ ಅಲ್ಲ. ಬೆಂಗಳೂರಿಗೆ ಕುಡಿಯಲು ಪ್ರತ್ಯೇಕವಾಗಿ ನೀರು ಇಟ್ಟಿದ್ದಾರೆ. ಅದನ್ನು ಸುಪ್ರೀಂಕೋರ್ಟ್ ಮುಂದೆ ವಾದ ಮಾಡಬೇಕು. ತಮಿಳುನಾಡಿಗೆ ನವೆಂಬರ್‌ನಲ್ಲಿ ಮತ್ತೊಂದು ಹಿಂಗಾರು ಮಳೆ ಬರುತ್ತದೆ. ಆದರೆ, ಕರ್ನಾಟಕಕ್ಕೆ ಮುಂಗಾರು ಮುಗಿಯುವ ಹಂತದಲ್ಲಿದೆ. ಇದೆಲ್ಲವನ್ನು ಸುಪ್ರೀಂಕೋರ್ಟ್‌ಗೆ ಮನವರಿಕೆ ಮಾಡಿಕೊಡಬೇಕು. ಕುಡಿಯುವ ನೀರಿಗಾದರು ಉಳಿಸಿಕೊಳ್ಳಲು ರಾಜ್ಯ ಸರ್ಕಾರ ಹೋರಾಟ ಮಾಡಬೇಕು. ಈಗಾಗಲೇ ರೈತರ ಬೆಳೆ ಒಣಗಿ ಹೋಗುತ್ತಿದೆ. ರಾಜ್ಯ ಸರ್ಕಾರ ಪ್ರತಿ ಎಕರೆಗೆ 25 ಸಾವಿರ ರೂ. ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.

ಪ್ರಾಧಿಕಾರ ರದ್ದಿಗೆ ರೈತರ ಆಗ್ರಹ

ಹಾಗೂ ಪ್ರಾಧಿಕಾರದ ಆದೇಶವನ್ನು ಪಾಲನೆ ಮಾಡಬೇಕೆಂದು ಸುಪ್ರೀಂ ಕೋರ್ಟ್ ಹೇಳಿರುವುದು ಆಘಾತಕಾರಿ ವಿಷಯ. ಜಲಾಶಯಗಳ ವಾಸ್ತವ ಪರಿಸ್ಥಿತಿ ಅರಿಯದೆ ನೀರು ಬಿಡಲು ಆದೇಶ ಮಾಡಿರುವುದು ರೈತರಿಗೆ ಅನ್ಯಾಯ ಮಾಡಿದಂತಾಗಿದೆ ಎಂದು ಹೇಳಿದರು. ನ್ಯಾಯಾಲಯದ ತೀರ್ಪಿನಂತೆ 15 ದಿನಗಳ ಕಾಲ ನೀರು ಬಿಟ್ಟರೆ ಜಲಾಶಯ ಸಂಪೂರ್ಣ ಬರಿದಾಗಲಿವೆ. ಆನಂತರ ವಾಸ್ತವ ಸ್ಥಿತಿ ಅವಲೋಕಿಸಿದರೆ ಏನು ಪ್ರಯೋಜನ. ಕರ್ನಾಟಕ ಸರ್ಕಾರ ನ್ಯಾಯಾಲಯದಲ್ಲಿ ವಾಸ್ತವಾಂಶದ ವಾದ ಮಂಡನೆ ಮಾಡುವಲ್ಲಿ ವಿಫಲವಾಗಿದೆ. ಯಾವುದೇ ಕಾರಣಕ್ಕೂ ನ್ಯಾಯಾಲಯದ ಆದೇಶ ಪಾಲನೆ ಮಾಡಬಾರದು ಎಂದು ಒತ್ತಾಯಿಸಿದರು.

ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸದೆ ಉದಾಸೀನ ಮಾಡಿರುವುದು ಸರಿಯಲ್ಲ. ಒಕ್ಕೂಟ ವ್ಯವಸ್ಥೆಯಲ್ಲಿ 2 ರಾಜ್ಯಗಳ ನಡುವೆ ಸಮನ್ವಯತೆ ಸಾಧಿಸಿ, ಸಂಕಷ್ಟ ಕಾಲದಲ್ಲಿ ಮಾತುಕತೆ ಮೂಲಕ ಸಮಸ್ಯೆ ಇತ್ಯರ್ಥಪಡಿಸದೆ ಕರ್ನಾಟಕ ರೈತರ ಬಗ್ಗೆ ಮಲತಾಯಿ ಧೋರಣೆ ತೋರುತ್ತಿದೆ. ಈಗಲಾದರೂ ರೈತರ ಕಾಯಲು ಕೇಂದ್ರ ಸರ್ಕಾರ ಬದ್ಧವಾಗಬೇಕು ಎಂದರು. ಪ್ರಾಧಿಕಾರ 2 ರಾಜ್ಯಗಳ ಪರಿಸ್ಥಿತಿ ಅವಲೋಕಿಸದೇ ಏಕಪಕ್ಷೀಯವಾಗಿ ನೀರು ಬಿಡಿ ಎನ್ನುವುದು ತಪ್ಪು. ಈ ನಿಟ್ಟಿನಲ್ಲಿ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರವನ್ನೇ ರದ್ದುಗೊಳಿಸಬೇಕೆಂದು ಆಗ್ರಹಿಸಿದರು.

ಕೆಆರ್‌ಎಸ್ ಪಕ್ಷದಿಂದ ಬೈಕ್ ರ‍್ಯಾಲಿ: ಸುಪ್ರೀಂಕೋರ್ಟ್ ಆದೇಶ ಖಂಡಿಸಿ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ ನಗರದ ಜಯಚಾಮರಾಜೇಂದ್ರ ಒಡೆಯರ್ ವೃತ್ತದಲ್ಲಿ ರಸ್ತೆ ತಡೆ ನಡೆಸಿ ಬಳಿಕ ಬೈಕ್ ರ‍್ಯಾಲಿಯಲ್ಲಿ ವಿಶ್ವೇಶ್ವರಯ್ಯ ಪ್ರತಿಮೆ ಬಳಿ ಆಗಮಿಸಿ ಹಿತರಕ್ಷಣಾ ಸಮಿತಿ ಹೋರಾಟಕ್ಕೆ ಸಾಥ್ ನೀಡಿತು. ಬಳಿಕ ಡಿಸಿ ಕಚೇರಿಗೆ ಮುತ್ತಿಗೆ ಹಾಕಿದ ಕೆಆರ್‌ಎಸ್ ಕಾರ್ಯಕರ್ತರು ಡಿಸಿಗೆ ಮನವಿ ಸಲ್ಲಿಸಿದರು. ಮೈಷುಗರ್ ಕಬ್ಬು ಬೆಳೆಗಾರರ ಒಕ್ಕೂಟವು ಸಹ ಪ್ರತಿಭಟನೆ ನಡೆಸಿ, ಹಿತರಕ್ಷಣಾ ಸಮಿತಿ ಹೋರಾಟಕ್ಕೆ ಸಾಥ್ ನೀಡಿದರು. ಪ್ರತಿಭಟನೆಯಲ್ಲಿ ಮಾಜಿ ಶಾಸಕರಾದ ಎಂ.ಎಸ್.ಆತ್ಮಾನಂದ, ಕೆ.ಟಿ.ಶ್ರೀಕಂಠೇಗೌಡ, ಜಿ.ಬಿ.ಶಿವಕುಮಾರ್, ಮೈಶುಗರ್ ಮಾಜಿ ಅಧ್ಯಕ್ಷ ಸಿದ್ದರಾಮೇಗೌಡ, ರೈತ ಹಿತರಕ್ಷಣಾ ಸಮಿತಿ ಸುನಂದಾ ಜಯರಾಂ, ಕೆ.ಬೋರಯ್ಯ ಚಂದ್ರಶೇಖರ್, ಮುದ್ದೇಗೌಡ, ಕನ್ನಡಸೇನೆ ಮಂಜುನಾಥ್, ಅಂಬುಜಮ್ಮ, ಹೆಮ್ಮಿಗೆ ಚಂದ್ರಶೇಖರ್, ಕಬ್ಬು ಬೆಳೆಗಾರರ ಸಂಘದ ವೇಣುಗೋಪಾಲ್, ವಾಯು ಮಾಲಿನ್ಯ ನಿಯಂತ್ರಣ ಮಂಡಳಿ ಮಾಜಿ ಅಧ್ಯಕ್ಷ ಪ್ರೊ.ಬಿ.ಶಿವಲಿಂಗಯ್ಯ, ಕಸಾಪ ಮಾಜಿ ಅಧ್ಯಕ್ಷ ಮೀರಾ ಶಿವಲಿಂಗಯ್ಯ ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು.

ಹೆದ್ದಾರಿಯಲ್ಲೇ ಮಲಗಿದ ರೈತರು: ಕಾವೇರಿ ಸಂಬಂಧ ಸುಪ್ರೀಂ ಕೋರ್ಟ್‌ನಲ್ಲಿ ವ್ಯತಿರಿಕ್ತ ತೀರ್ಪು ಬಂದ ಹಿನ್ನಲೆಯಲ್ಲಿ ನಗರದ ಜಯಚಾಮರಾಜೇಂದ್ರ ಒಡೆಯರ್ ವೃತ್ತದಲ್ಲಿ ರೈತ ಸಂಘ ಪ್ರತಿಭಟನೆ ನಡೆಸಿತು. ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿ ಮಲಗಿ ಧರಣಿ ನಡೆಸಿ, ತಮಿಳುನಾಡಿಗೆ ಕೂಡಲೇ ನೀರು ನಿಲ್ಲಿಸಬೇಕು. ಸುಪ್ರೀಂಕೋರ್ಟ್ ನೀಡಿರುವ ತೀರ್ಪು ಹಳೇ ಮೈಸೂರು ಭಾಗದ ಜನರ ಮರಣ ಶಾಸನವಾಗಿದ್ದು, ಜಿಲ್ಲೆಯ ರೈತರಿಗೆ ಅನ್ಯಾಯವಾಗುತ್ತಿದೆ ಎಂದು ಕಿಡಿಕಾರಿದರು.

ಕೆಎಸ್‌ಆರ್‌ಟಿಸಿ ಬಸ್ ತಡೆದು ಚಕ್ರದಡಿ ಮಲಗಿದ ರೈತರು, ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ರೈತರ ಆಕ್ರೋಶಕ್ಕೆ ಮಣಿದು ಪೊಲೀಸರು ವಾಹನಗಳನ್ನು ತಡೆದು ರಸ್ತೆ ತಡೆಗೆ ಅನುವು ಮಾಡಿಕೊಟ್ಟರು.

ಶಾಸಕ ದರ್ಶನ್ ನೇತೃತ್ವದಲ್ಲಿ ಪ್ರತಿಭಟನೆ: ತೀರ್ಪಿನ ವಿರುದ್ಧ ಪಾಂಡವಪುರದಲ್ಲಿ ರೈತರಿಂದ ಬೃಹತ್ ಪ್ರತಿಭಟನೆ ನಡೆಯಿತು. ಶಾಸಕ ದರ್ಶನ್ ಪುಟ್ಟಣ್ಣಯ್ಯ ನೇತೃತ್ವದಲ್ಲಿ ಬೀದಿಗಿಳಿದ ರೈತರು, ರಸ್ತೆ ತಡೆ ನಡೆಸುವ ಮೂಲಕ ರೈತ ಸಂಘ ಆಕ್ರೋಶ ವ್ಯಕ್ತಪಡಿಸಿದರು. ಈ ಸಂದರ್ಭ ಮಾತನಾಡಿದ ಶಾಸಕ ದರ್ಶನ್ ಪುಟ್ಟಣ್ಣಯ್ಯ, ಸುಪ್ರೀಂಕೋರ್ಟ್ ಮೇಲೆ ಭಾರೀ ನಿರೀಕ್ಷೆ ಇಟ್ಟುಕೊಂಡಿದ್ದೆವು. ನಮ್ಮ ನಿರೀಕ್ಷೆಗಳು ಹುಸಿಯಾಗಿವೆ. ಯಾವುದೇ ಕಾರಣಕ್ಕೂ ತಮಿಳುನಾಡಿಗೆ ನೀರು ಬಿಡಬಾರದು ಎಂದು ಒತ್ತಾಯಿಸಿದರು.

ಈ ಬಾರಿ ಜಂಬೂಸವಾರಿಯಲ್ಲಿ ಮೈಸೂರು ಮೆಡಿಕಲ್ ಕಾಲೇಜು ಬಿಂಬಿಸುವ ಸ್ತಬ್ಧಚಿತ್ರ

- ಶತಮಾನೋತ್ಸವ ಆಚರಣೆ ಹಿನ್ನೆಲೆಯಲ್ಲಿ ದಸರಾ ಸಮಿತಿಗೆ ಪ್ರಸ್ತಾವನೆ ಸಲ್ಲಿಕೆ
- 'ಅಂದು-ಇಂದು-ಮುಂದು' ಘೋಷವಾಕ್ಯದೊಂದಿಗೆ ಸಂಸ್ಥೆಯ ಸಾಧನೆ ಅನಾವರಣ

ಮೈಸೂರು, ಸೆ 21 (ಆರ್‌ಕೆ)- ಶತಮಾನದ ಹೊಸ್ತಿಲಲ್ಲಿರುವ ಪ್ರತಿಷ್ಠಿತ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (ಎಂಎಂಸಿ ಮತ್ತು ಆರ್‌ಐ)ಯ ಸಾಧನೆಯನ್ನು ನಾಡಿನ ಜನರಿಗೆ ಪರಿಚಯಿಸಲು ಸಂಸ್ಥೆಯು ತೀರ್ಮಾನಿಸಿದೆ.

1924 ರಲ್ಲಿ ಆರಂಭವಾದ ಮೈಸೂರು ವೈದ್ಯಕೀಯ ಮಹಾವಿದ್ಯಾಲಯ (ಮೈಸೂರು ಮೆಡಿಕಲ್ ಕಾಲೇಜು)ವು ಮಹಾರಾಜರ ಕಲ್ಪನೆಯ ಪ್ರತೀಕವಾಗಿದ್ದು, ಲಕ್ಷಾಂತರ ವೈದ್ಯರನ್ನು ನಾಡಿಗೆ ನೀಡಿದೆ. ಮುಂದಿನ ವರ್ಷ (2024) ಶತಮಾನೋತ್ಸವ ಸಂಭ್ರಮ ಆಚರಿಸಿಕೊಳ್ಳುತ್ತಿರುವ ಸಂಸ್ಥೆಯ 100 ವರ್ಷದ ಲಾಂಛನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಇತ್ತೀಚೆಗೆ ಬಿಡುಗಡೆ ಮಾಡಿದ್ದಾರೆ.

ಈ ಹಿನ್ನೆಲೆಯಲ್ಲಿ ಕಾಲೇಜಿನ ನೂರು ವರ್ಷಗಳ ಇತಿಹಾಸ, ನಡೆದು ಬಂದ ದಾರಿ, ಪ್ರಸ್ತುತ ಪರಿಸ್ಥಿತಿ ಹಾಗೂ ಭವಿಷ್ಯದ ಯೋಜನೆಗಳನ್ನು ರಾಜ್ಯ, ರಾಷ್ಟ್ರ ಹಾಗೂ ವಿಶ್ವಕ್ಕೆ ಪರಿಚಯಿಸಲು ಮುಂದಾಗಿರುವ ಸಂಸ್ಥೆಯು, ಪ್ರಸಕ್ತ ಸಾಲಿನ ದಸರಾ ಮಹೋತ್ಸವದ ಜಂಬೂಸವಾರಿ ಮೆರವಣಿಗೆಯನ್ನು ಬಳಸಿಕೊಳ್ಳಲು ನಿರ್ಧರಿಸಿದೆ.

ಈ ಬಾರಿಯ ವಿಜಯದಶಮಿ ಮೆರವಣಿಗೆಯಲ್ಲಿ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಶತಮಾನೋತ್ಸವ ಬಿಂಬಿಸುವ ಸ್ತಬ್ಧಚಿತ್ರ ರೂಪಿಸಲು ತಯಾರಿ ನಡೆಯುತ್ತಿದೆ.

'ಅಂದು-ಇಂದು-ಮುಂದು' (Past-Present-Future) ಘೋಷವಾಕ್ಯದೊಂದಿಗೆ ತಯಾರಿಸುವ ಸ್ತಬ್ಧಚಿತ್ರದಲ್ಲಿ ಹಿಂದೆ ರಾಜಮಹಾರಾಜರ ಕಾಲದಲ್ಲಿ ಇದ್ದ ಕಾಲೇಜು, ಪ್ರಸ್ತುತ ಅಭಿವೃದ್ಧಿ ಪರ್ವ ಹಾಗೂ ಭವಿಷ್ಯದಲ್ಲಿ ಸಂಸ್ಥೆ ಹೇಗಿರಬೇಕೆಂಬ ಕಲ್ಪನೆಯನ್ನು ಬಿಂಬಿಸುವುದು ಸ್ತಬ್ಧಚಿತ್ರದ ಉದ್ದೇಶವಾಗಿದೆ.

ಈ ಕುರಿತು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ ಕಾಲೇಜಿನ ಡೀನ್ ಅಂಡ್ ಡೈರೆಕ್ಟರ್ ಡಾ. ಕೆ.ಆರ್. ದಾಕ್ಷಾಯಿಣಿ, ಶತಮಾನೋತ್ಸವದ ಹೊಸ್ತಿಲಲ್ಲಿರುವ ಸಂಸ್ಥೆಯು ನಡೆದು ಬಂದ ಹಾದಿಯ ಬಗ್ಗೆ ದಸರಾ ವಿಜಯದಶಮಿ ಮೆರವಣಿಗೆಯಲ್ಲಿ ಸ್ತಬ್ಧಚಿತ್ರ ರೂಪಿಸುವ ಚಿಂತನೆ ಇದೆ ಎಂದರು.

ವರ್ಷಪೂರ್ತಿ ವಿಚಾರ ಸಂಕಿರಣಗಳು, ಕಾರ್ಯಾಗಾರಗಳು, ಸಂವಾದ ಕಾರ್ಯಕ್ರಮ ಆಯೋಜಿಸುತ್ತಿದ್ದು, ಸಂಸ್ಥೆಯಲ್ಲಿರುವ ವಿವಿಧ ವಿಭಾಗಗಳು, ಅಧೀನದಲ್ಲಿರುವ ಬೋಧನಾ ಆಸ್ಪತ್ರೆಗಳಾದ ದೊಡ್ಡಾಸ್ಪತ್ರೆ ಎಂದೇ ಖ್ಯಾತಿಯಾಗಿರುವ ಕೆ.ಆರ್., ಚೆಲುವಾಂಬ ಹಾಗೂ ಪಿಕೆಟಿಬಿ ಆಸ್ಪತ್ರೆಗಳು ಜನರಿಗೆ ಚಿಕಿತ್ಸೆ ನೀಡುತ್ತಿರುವ ವಿಧಾನ, ಸೌಲಭ್ಯಗಳ ಕುರಿತಂತೆ ಸ್ತಬ್ಧಚಿತ್ರದ ಮೂಲಕ ನಾಡಿನ ಜನರಿಗೆ ತಿಳಿಸುವ ಪ್ರಯತ್ನ ಮಾಡುತ್ತಿದ್ದೇವೆ.

ಈಗಾಗಲೇ ಜಿಲ್ಲಾಡಳಿತಕ್ಕೆ ಮನವಿ ಮಾಡಿದ್ದೇವೆ. ಜಿಲ್ಲಾ ಉಸ್ತುವಾರಿ ಸಚಿವರು, ದಸರಾ ವಿಶೇಷಾಧಿಕಾರಿಗಳೂ ಆದ ಜಿಲ್ಲಾಧಿಕಾರಿಗಳಿಗೆ ಉದ್ದೇಶಿತ ಸ್ತಬ್ಧಚಿತ್ರದಲ್ಲಿ ಏನೆಲ್ಲಾ ಮಾಹಿತಿ ಚಿತ್ರಗಳಿರುತ್ತವೆ ಎಂಬುದನ್ನು ಪ್ರಸ್ತಾಪಿಸಿದ್ದೇವೆ. ಅನುಮತಿ ದೊರೆತರೆ ಕಾರ್ಯೋನ್ಮುಖರಾಗುತ್ತೇವೆ ಎಂದು ತಿಳಿಸಿದರು. ಶತಮಾನೋತ್ಸವದ ಅಂಗವಾಗಿ ಸಂಸ್ಥೆಯಲ್ಲಿ ಓದಿದ 1962ನೇ ವರ್ಷದ ವಿದ್ಯಾರ್ಥಿಗಳು ಕೆ.ಆರ್. ಆಸ್ಪತ್ರೆ ಆವರಣದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆ ಸ್ಥಾಪಿಸಲು ಮುಂದೆ ಬಂದಿದ್ದಾರೆ. ಅವರ ಈ ಕಾರ್ಯಕ್ಕೆ ನಾವು ಸಂಪೂರ್ಣ ಬೆಂಬಲ ನೀಡುತ್ತೇವೆ ಎಂದು ಡಾ. ದಾಕ್ಷಾಯಿಣಿ ನುಡಿದರು.

ಪ್ರತಿ ವರ್ಷ 150 ವೈದ್ಯಕೀಯ ವಿದ್ಯಾರ್ಥಿಗಳಿಗೆ ಬೋಧನೆ, ಪ್ರಾಯೋಗಿಕ ತರಬೇತಿ ನೀಡಿ ಸಜ್ಜುಗೊಳಿಸುವ ಮೂಲಕ ರಾಜರ ಆಶಯದಂತೆ ಜನಸಾಮಾನ್ಯರಿಗೆ ಆರೋಗ್ಯ ಸೇವೆ ಮಾಡುವ ವೈದ್ಯರನ್ನು ಸೃಷ್ಟಿಸುತ್ತಿರುವ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯು ಅಧೀನ ಆಸ್ಪತ್ರೆಗಳಲ್ಲಿ ಪ್ರತೀ ದಿನ ಸಾವಿರಾರು ರೋಗಿಗಳಿಗೆ ಚಿಕಿತ್ಸೆ ನೀಡುವ ಮೂಲಕ ಸಮಾಜದ ಸ್ವಾಸ್ಥ್ಯ ಕಾಪಾಡುವಲ್ಲಿ ಇಡೀ ರಾಜ್ಯದಲ್ಲೇ ಮುಂಚೂಣಿಯಲ್ಲಿದೆ ಎಂದು ತಿಳಿಸಿದರು.

ಮೈಸೂರು ಪಾಲಿಕೆ ತಂಡದಿಂದ ನಿಷೇಧಿತ ಪ್ಲಾಸ್ಟಿಕ್ ವಶ

10 ಸಾವಿರ ರೂ. ದಂಡ ವಸೂಲಿ



ಮೈಸೂರು, ಸೆ.21(ಎಂಟಿವೈ)- ಸಾಂಸ್ಕೃತಿಕ ನಗರಿ ಮೈಸೂರನ್ನು ಪರಿಸರಕ್ಕೆ ಮಾರಕವಾದ ಪ್ಲಾಸ್ಟಿಕ್ ಮುಕ್ತ ನಗರವಾಗಿಸಲು ದಿಟ್ಟ ಕ್ರಮ ಕೈಗೊಂಡಿರುವ ಮೈಸೂರು ನಗರ ಪಾಲಿಕೆಯ ಪರಿಸರ ವಿಭಾಗದ ಅಧಿಕಾರಿಗಳು ಸಂತೇಪೇಟೆಯ ಎರಡು ಟ್ರಾನ್ಸ್‌ಪೋರ್ಟ್ ಕಚೇರಿ ಮೇಲೆ ದಾಳಿ ನಡೆಸಿ 252 ಕೆಜಿ ಪ್ಲಾಸ್ಟಿಕ್ ವಶಪಡಿಸಿಕೊಂಡು, 10 ಸಾವಿರ ರೂ. ದಂಡ ವಿಧಿಸಿದ್ದಾರೆ.

ಮೈಸೂರಿನ ಪರಿಸರ ಕಾಪಾಡುವ ನಿಟ್ಟಿನಲ್ಲಿ ಪ್ಲಾಸ್ಟಿಕ್ ಬಳಕೆ, ಮಾರಾಟ ನಿಷೇಧಿಸಲಾಗಿದೆ. ಪ್ಲಾಸ್ಟಿಕ್ ನಿರ್ಬಂಧದ ಬಗ್ಗೆ ಸಾಕಷ್ಟು ಜಾಗೃತಿ ಮೂಡಿಸಿದ್ದರೂ ಪ್ಲಾಸ್ಟಿಕ್ ಮಾರಾಟ, ಬಳಕೆ ನಿಯಂತ್ರಣಕ್ಕೆ ಬಂದಿರಲಿಲ್ಲ. ಈ ಹಿನ್ನೆಲೆಯಲ್ಲಿ ಪ್ಲಾಸ್ಟಿಕ್ ಮಾರಾಟ ಮಳಿಗೆಗಳ ಮೇಲೆ ದಾಳಿ ನಡೆಸುತ್ತಿದ್ದ ಅಧಿಕಾರಿಗಳು ದಂಡ ವಿಧಿಸಿ ಎಚ್ಚರಿಕೆ ನೀಡಿದ್ದರು. ಆದರೂ ಪ್ಲಾಸ್ಟಿಕ್ ಬಳಕೆ ನಿಯಂತ್ರಣಕ್ಕೆ ಬಂದಿರಲಿಲ್ಲ. ಇದೀಗ ಪ್ಲಾಸ್ಟಿಕ್ ವಸ್ತುಗಳು ಸರಬರಾಜಾಗುವ ಟ್ರಾನ್ಸ್‌ಪೋರ್ಟ್ ಸಂಸ್ಥೆಗಳ ಮೇಲೆ ಪಾಲಿಕೆ ಪರಿಸರ ವಿಭಾಗದ ಅಧಿಕಾರಿಗಳು ದಾಳಿ ನಡೆಸುತ್ತಿದ್ದಾರೆ.

ಮೈಸೂರಿನ ಸಂತೇಪೇಟೆಯಲ್ಲಿರುವ ಸಂತೋಷ್ ಟ್ರಾನ್ಸ್‌ಪೋರ್ಟ್ ಹಾಗೂ ಮಾರುತಿ ಎಂಟರ್‌ಪ್ರೈಸಸ್ ಮೇಲೆ ಇಂದು ಮೈಸೂರು ಮಹಾನಗರ ಪಾಲಿಕೆಯ ಪರಿಸರ ಅಭಿಯಂತರ ಮೈತ್ರಿ ಅವರ ನೇತೃತ್ವದ ತಂಡ ಪರಿಸರಕ್ಕೆ ಮಾರಕವಾದ ನಿಷೇಧಿತ ಪ್ಲಾಸ್ಟಿಕ್ ಪಾರ್ಸೆಲ್ ಬಂದಿರುವುದನ್ನು ಪತ್ತೆ ಮಾಡಿದರು. ಬಳಿಕ ಎರಡೂ ಸಂಸ್ಥೆಗಳಿಂದ 252 ಕೆಜಿ ಪ್ಲಾಸ್ಟಿಕ್ ವಸ್ತುಗಳನ್ನು ವಶಪಡಿಸಿಕೊಂಡರಲ್ಲದೆ, ಎರಡೂ ಸಂಸ್ಥೆಗಳಿಂದ 10 ಸಾವಿರ ರೂ. ದಂಡ ವಿಧಿಸಿದರು. ಪ್ಲಾಸ್ಟಿಕ್ ದಾಳಿ ಮುಂದುವರೆಯಲಿದ್ದು, ಮಾರಾಟ ಮಾಡುವವರ ವಿರುದ್ಧವೂ ಕಠಿಣ ಕ್ರಮ ಕೈಗೊಳ್ಳಲು ಪಾಲಿಕೆ ನಿರ್ಧರಿಸಿದೆ.

ಸಂತೇಪೇಟೆಯಲ್ಲಿ ನಡೆದ ಪ್ಲಾಸ್ಟಿಕ್ ದಾಳಿಯಲ್ಲಿ ಪಾಲಿಕೆ ಪರಿಸರ ಅಭಿಯಂತರರಾದ ಮೈತ್ರಿ, ಆರೋಗ್ಯ ನಿರೀಕ್ಷಕ ಮಂಜುಕುಮಾರ್, ಬಸವರಾಜು ಹಾಗೂ ಅಭಯ ತಂಡದ ಸದಸ್ಯರು ಪಾಲ್ಗೊಂಡಿದ್ದರು.

ಸೆ.24ರಂದು ಇನ್ನರ್ ವ್ಹೀಲ್ ಕ್ಲಬ್ ಆಫ್ ಐಸಿರಿಯಿಂದ ಫ್ಯಾಷನ್ ಶೋ, ಚಿತ್ರಕಲಾ ಸ್ಪರ್ಧೆ

ಮೈಸೂರು,ಸೆ21(ಎಂಟಿವೈ)- ಮೈಸೂರಿನ ರಾಮಾನುಜ ರಸ್ತೆಯ ಅನೆಕ್ಸ್ ರಾಜೇಂದ್ರ ಕಲಾಮಂದಿರದ ದಿ ವೈಸ್‌ರಾಯ್ ಕಂಫರ್ಟ್ಸ್ ಸಭಾಂಗಣದಲ್ಲಿ ಸೆ.24ರಂದು ಸಂಜೆ 5ಕ್ಕೆ ಮೈಸೂರಲ್ಲಿ 'ಫ್ಯಾಷನ್ ಶೋ' ಏರ್ಪಡಿಸಲಾಗಿದೆ ಎಂದು ಇನ್ನರ್ ವ್ಹೀಲ್ ಕ್ಲಬ್ ಆಫ್ ಮೈಸೂರು ಐಸಿರಿ ಸಂಸ್ಥೆಯ ಕಾರ್ಯದರ್ಶಿ ರಾಧಾ ತಿಳಿಸಿದ್ದಾರೆ.

ಇನ್ನರ್ ವ್ಹೀಲ್ ಕ್ಲಬ್ ಆಫ್ ಮೈಸೂರು ಐಸಿರಿ ಸಂಸ್ಥೆಯು ಆರ್‌ಕೆ ಯುನಿವರ್ಸ್ ಕೂರ್ಗ್ ಸಂಸ್ಥೆಯ ಸಹಕಾರದೊಂದಿಗೆ ಈ ಫ್ಯಾಷನ್ ಶೋ ಆಯೋಜಿಸಿದೆ. ಕಾರ್ಯಕ್ರಮದ ಅಂಗವಾಗಿ ಸೆ.24ರಂದು ಬೆಳಗ್ಗೆ 10ರಿಂದ 11 ಗಂಟೆವರೆಗೆ ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆ ಆಯೋಜಿಸಲಾಗಿದೆ. ಈ ಸ್ಪರ್ಧೆಯಲ್ಲಿ 7-9 ವರ್ಷದ ಮಕ್ಕಳು ತಮಗಿಷ್ಟವಾದ ಚಿತ್ರ ಬರೆಯಬಹುದಾಗಿದೆ. 10-12ವರ್ಷದ ಮಕ್ಕಳು ಗ್ರೀನ್ ಇಂಡಿಯಾ, 13-15 ವರ್ಷದ ಮಕ್ಕಳು ದೇಶದ ಅಭಿವೃದ್ಧಿಗೆ ಸಂಬಂಧಿಸಿದಂತೆ ಚಿತ್ರ ಬಿಡಿಸಬಹುದಾಗಿದೆ. ಸಂಜೆ 5 ರಿಂದ ಫ್ಯಾಷನ್ ಶೋ ಆರಂಭವಾಗಲಿದ್ದು, ಈ ಸ್ಪರ್ಧೆಯಲ್ಲಿ 'ಮಿಸ್ ಮೈಸೂರು(14ರಿಂದ 30ವರ್ಷ), ಮಿಸ್ಟರ್ ಮೈಸೂರು(14-60ವರ್ಷ), ಮಿಸಸ್ ಮೈಸೂರು(21-60ವರ್ಷ) ರೂಪದರ್ಶಿಗಳು, ಉದಯೋನ್ಮುಖ ಮಾಡೆಲ್ ಸೇರಿದಂತೆ ಆಸಕ್ತರು ಪಾಲ್ಗೊಳ್ಳಬಹುದು. ಸ್ಪರ್ಧಿಗಳು ಪಾಶ್ಚಿಮಾತ್ಯ ಹಾಗೂ ಸಾಂಪ್ರದಾಯಿಕ ಉಡುಪಿನಲ್ಲಿ ಪಾಲ್ಗೊಳ್ಳಬಹುದು. ಮಾಹಿತಿಗಾಗಿ ಮೊ.ಸಂಖ್ಯೆ 8310981845, 9731358008 ಸಂಪರ್ಕಿಸಿ.

ಅಂತರರಾಷ್ಟ್ರೀಯ ಸಂಕೇತ ಭಾಷೆಗಳ ದಿನದ ಅಂಗವಾಗಿ ಕಾರ್ಯಾಗಾರ

ಮೈಸೂರು, ಸೆ.21- ಸೆ.23ರಂದು ಅಂತರರಾಷ್ಟ್ರೀಯ ಸಂಕೇತ ಭಾಷೆಗಳ ದಿನವನ್ನಾಗಿ ಆಚರಿಸುತ್ತಿದ್ದು, ಈ ದಿನದ ಅಂಗವಾಗಿ ಮೈಸೂರು ನಗರದ ವಿವಿಧ ಅಂಚೆ ಕಚೇರಿಗಳಲ್ಲಿ ಸೇವೆ ಸಲ್ಲಿಸುತ್ತಿರುವ ಪೋಸ್ಟ್ ಮ್ಯಾನ್ ಮತ್ತು ಪೋಸ್ಟ್ ವುಮೆನ್‌ಗಳಿಗೆ ಮೂಲ ಸಂಕೇತ ಭಾಷೆ ಕುರಿತು ಒಂದು ದಿನದ ಕಾರ್ಯಾಗಾರವನ್ನು ಸೆ.24ರಂದು ಬೆಳಗ್ಗೆ 10 ಗಂಟೆಗೆ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ಆವರಣದಲ್ಲಿರುವ ನಾಲೆಡ್ಜ್ ಪಾರ್ಕ್, ಸೆಮಿನಾರ್ ಹಾಲ್‌ನಲ್ಲಿ ಆಯೋಜಿಸ ಲಾಗಿದೆ. ಕಾರ್ಯಾಗಾರ ಅಧ್ಯಕ್ಷತೆಯನ್ನು ಮೈಸೂರು ಆಕಾಶವಾಣಿಯ ನಿರ್ದೇಶಕ ಎಸ್.ಎಸ್.ಉಮೇಶ್ ಉದ್ಘಾಟನೆ ಮಾಡ ಲಿದ್ದು, ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ ನಿರ್ದೇಶಕಿ ಡಾ.ಎಂ.ಪುಷ್ಪಾರಾಣಿ ಅಧ್ಯಕ್ಷತೆ ವಹಿಸಲಿದ್ದಾರೆ. ಅತಿಥಿಗಳಾಗಿ ಕಾರ್ಯಾಗಾರದ ಸಂಯೋಜಕ ಡಾ.ರೂಬೆನ್ ವರ್ಗೀಸ್ ಭಾಗವಹಿಸಲಿದ್ದಾರೆ.

ಕಲುಷಿತ ನೀರಿನ ಬಗ್ಗೆ ಮಾಹಿತಿ ನೀಡಿ

ಮೈಸೂರು, ಸೆ.21- ಮೈಸೂರು ಮಹಾನಗರ ಪಾಲಿಕೆಯ ವಾಣಿವಿಲಾಸ ನೀರು ಸರಬರಾಜು ಮತ್ತು ಒಳಚರಂಡಿ ವಿಭಾಗದಿಂದ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಿಗೆ ವಿವಿಧ ಮೂಲಸ್ಥಾವರಗಳಿಂದ ಶುದ್ಧ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದ್ದು, ಈ ಸಂಬಂಧ ಎಲ್ಲಾ ಮುಂಜಾಗ್ರತಾ ಕ್ರಮ ವಹಿಸಲಾಗುತ್ತಿದೆ. ಇತರೇ ಕಾರಣಗಳಿಂದ ಕುಡಿಯುವ ನೀರಿಗೆ ತ್ಯಾಜ್ಯ ನೀರು ಸೇರಿ ಕಲುಷಿತಗೊಳ್ಳುತ್ತಿರುವುದು ಕಂಡು ಬಂದಲ್ಲಿ ವಾಣಿವಿಲಾಸ ನೀರು ಸರಬರಾಜು ಮತ್ತು ಒಳಚರಂಡಿ ಕಚೇರಿ, ಇಮೇಲ್ (eevvww2012@gmail.com) ಮೂಲಕ ಅಥವಾ ದೂರವಾಣಿ ಸಂಖ್ಯೆ : 0821-2418849, 9449841196 ಸಂಪರ್ಕಿಸಿ ಎಂದು ವಾಣಿವಿಲಾಸ ನೀರು ಸರಬರಾಜು ಮತ್ತು ಒಳಚರಂಡಿ ಕಾರ್ಯಪಾಲಕ ಅಭಿಯಂತರರ ಪ್ರಕಟಣೆ ತಿಳಿಸಿದೆ.

ಕೇಂದ್ರದಿಂದ ಸಂವಿಧಾನ ಪ್ರಸ್ತಾವನೆಗೆ ತಿಲಾಂಜಲಿ ಆರೋಪ

ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯಿಂದ ಪ್ರತಿಭಟನೆ



ಮೈಸೂರು, ಸೆ.21(ಜಿಎ)-ಸಂವಿಧಾನದ ಪ್ರಸ್ತಾವನೆಯಲ್ಲಿ ಜಾತ್ಯಾತೀತ, ಸಮಾಜವಾದ, ಸಮಗ್ರತೆ ಎಂಬ ಪದವನ್ನು ಕೇಂದ್ರ ಸರ್ಕಾರ ಕೈ ಬಿಡುವ ಮೂಲಕ ಸಂವಿಧಾನವನ್ನು ತಿರುಚಲು ಮುಂದಾಗಿದೆ ಎಂದು ಆರೋಪಿಸಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ವತಿಯಿಂದ ಗುರುವಾರ ಪ್ರತಿಭಟನೆ ನಡೆಸಲಾಯಿತು.

ನಗರ ನ್ಯಾಯಾಲಯದ ಮುಂಭಾಗವಿರುವ ಗಾಂಧಿ ಪುತ್ಥಳಿ ಬಳಿ ವೇದಿಕೆಯ ಪದಾಧಿಕಾರಿಗಳು ಸಂವಿಧಾನ ಉಳಿಯಬೇಕು, ಸಂವಿಧಾನ ವಿರೋಧಿ ಆರ್‌ಎಸ್‌ಎಸ್ ಅನ್ನು ನಿಷೇಧಿಸಿ, ಸಂವಿಧಾನ ಬುಡ ಮೇಲು ಮಾಡಲು ಮುಂದಾಗಿರುವ ಮೋದಿಗೆ ಧಿಕ್ಕಾರ ಎಂದು ಘೋಷಣೆ ಕೂಗಿ ಪ್ರತಿಭಟಿಸಿದರು.

ಈ ವೇಳೆ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮು ಮಾತನಾಡಿ, ನೂತನ ಸಂಸತ್ ಭವನದಲ್ಲಿ ನಡೆದ ವಿಶೇಷ ಅಧಿವೇಶನದ ಸಂದರ್ಭದಲ್ಲಿ ಸಂವಿಧಾನದ ಮೂಲ ಆಶಯವಾದ ಸಮಾನತೆ, ಜಾತ್ಯಾತಿತ, ಸಮಗ್ರತೆ ಸಮಾಜವಾದವನ್ನು ಕೈ ಬಿಡಲು ಕೇಂದ್ರ ಸರ್ಕಾರ ಮುಂದಾಗಿದ್ದು, ಇದರ ಹಿಂದೆ ಆರ್‌ಎಸ್‌ಎಸ್‌ನ ಹುನ್ನಾರವಿದೆ. ಪ್ರಧಾನ ಮಂತ್ರಿ ಮೋದಿ ಅವರು ಆರ್‌ಎಸ್‌ಎಸ್‌ನ ಅಡಿಯಾಳಾಗಿ ಕೆಲಸ ಮಾಡುತ್ತಿದ್ದಾರೆ. ತಮ್ಮದೇ ಅಜೆಂಡಾಗಳನ್ನು ಇಟ್ಟುಕೊಂಡು ಈ ರೀತಿ ಮಾಡುತ್ತಿದ್ದು, ಈ ಕೂಡಲೇ ಸುಪ್ರೀಂ ಕೋರ್ಟ್ ಮಧ್ಯ ಪ್ರವೇಶಿಸಿ, ಸಂವಿಧಾನವನ್ನು ಉಳಿಸಬೇಕಿದೆ ಎಂದು ಮನವಿ ಮಾಡಿದರು.

ಪ್ರೊ.ಕೆ.ಎಸ್.ಭಗವಾನ್ ಮಾತನಾಡಿ, ಸಂವಿಧಾನದ ಪೀಠಿಕೆಯಲ್ಲಿರುವ ಪ್ರಜಾಪ್ರಭುತ್ವ ಸಮಾನತೆ, ಸಮಾಜವಾದಗಳನ್ನು ಪ್ರಧಾನ ಮಂತ್ರಿ ಮೋದಿ ಕೈಬಿಟ್ಟಿದ್ದಾರೆ. ಹೊಸ ಸಂಸತ್ ಕಟ್ಟಡ ಉದ್ಘಾಟಿಸಬೇಕಾದರೆ, ರಾಷ್ಟ್ರಪತಿ ದ್ರೌಪದಿ ಮುರ್ಮು ಕೈಯ್ಯಲ್ಲಿ ಉದ್ಘಾಟಿಸಬೇಕಿತ್ತು. ಆದರೆ, ಅವರು ಬುಡಕಟ್ಟು ಸಮುದಾಯದವರು ಎಂದು ಹಿಂದೇಟು ಹಾಕಿದ್ದಾರೆ. ಮೋದಿ ಅವರು ಆರ್‌ಎಸ್‌ಎಸ್ ತೋರಿಸುವ ದಾರಿಯಲ್ಲಿ ಸಾಗುತ್ತಿದ್ದಾರೆ ಎಂದರು.

ದೇಶದಲ್ಲಿ ಮಹಿಳಾ ಮೀಸಲಾತಿ ತಂದಿರುವುದು ಸ್ವಾಗತಾರ್ಹ. ಆದರೆ, ಇದು ವೈಜ್ಞಾನಿಕವಾಗಿಲ್ಲ. ಜನ ಸಂಖ್ಯೆ ಅನುಗುಣವಾಗಿ ಶೇ.50ರಷ್ಟು ನೀಡಬೇಕೆಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಪ್ರೊ. ಪಂಡಿತಾರಾಧ್ಯ, ಪ್ರೊ.ಕೆ. ಕಾಳಚನ್ನೇಗೌಡ, ಗೋಪಾಲಕೃಷ್ಣ, ಬಸವರಾಜು ಮತ್ತಿತರರು ಭಾಗಿಯಾಗಿದ್ದರು.

ಹೊಸ ಪಿಂಚಣಿ ಯೋಜನೆ ರದ್ದಿಗೆ ಆಗ್ರಹಿಸಿ ಪ್ರತಿಭಟನೆ



ಮೈಸೂರು, ಸೆ.21(ಜಿಎ)-ಹೊಸ ಪಿಂಚಣಿ ಯೋಜನೆ ರದ್ದುಗೊಳಿಸಿ ಎಂದು ಆಗ್ರಹಿಸಿ ಹಳೆ ಪಿಂಚಣಿ ಯೋಜನೆ ಮರುಸ್ಥಾಪನೆಗಾಗಿ ಜಂಟಿ ವೇದಿಕೆ ಒಕ್ಕೂಟದ ಸದಸ್ಯರು ಗುರುವಾರ ಸಿದ್ದಾರ್ಥನಗರದಲ್ಲಿರುವ ನೂತನ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿದರು. 2008ರಲ್ಲಿ ಹೊಸ ಪಿಂಚಣಿ ಯೋಜನೆ ಅನುಷ್ಠಾನ ಮಾಡುವ ವೇಳೆ ಕಾರ್ಮಿಕ ಸಂಘಟನೆಗಳು ವಿರೋಧಿಸಿದ್ದವು. ಇವು ಕಾರ್ಮಿಕರ ಪರವಾಗಿಲ್ಲ, ಇದರಿಂದ ತೊಂದರೆ ಅನುಭವಿಸಬೇಕಾಗುತ್ತದೆ ಎಂದು ಎಚ್ಚರಿಸಿದ್ದವು. ಈಗ ಹಳೆಯ ಪಿಂಚಣಿದಾರರಿಗೆ ಹೋಲಿಸಿದರೆ, ಈಗಿನ ವ್ಯವಸ್ಥೆಯಲ್ಲಿ ಅತ್ಯಲ್ಪ ಪಿಂಚಣಿ ಪಡೆಯುವ ಸ್ಥಿತಿ ಬಂದೊದಗಿದೆ ಎಂದು ದೂರಿದರು.

ಜಾರ್ಖಂಡ್, ರಾಜಸ್ಥಾನ, ಛತ್ತೀಸಗಢ, ಪಂಜಾಬ್ ಮತ್ತು ಹಿಮಾಚಲಪ್ರದೇಶ ರಾಜ್ಯದಲ್ಲಿ ಎನ್‌ಪಿಎಸ್ ಹಿಂಪಡೆದು. ಒಪಿಎಸ್ ಮರು ಸ್ಥಾಪನೆಗೆ ಅಧಿಸೂಚನೆ ಹೊರಡಿಸಲಾಗಿದೆ. ಆದರೆ, ಕೇಂದ್ರವು ಹೊಸ ಪಿಂಚಣಿ ಯೋಜನೆಯನ್ನು ರದ್ದು ಮಾಡಲು ಸಿದ್ಧವಾಗಿಲ್ಲ. ಇದು ಇನ್ನೂ ಕಾರ್ಮಿಕರ ತಲೆ ಮೇಲೆ ನೇತಾಡುತ್ತಿರುವ ಕತ್ತಿಯಂತೆ ಚಾಲ್ತಿಯಲ್ಲಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ವೇದಿಕೆಯ ಸಂಚಾಲಕ ಶಿವಪ್ರಕಾಶ್, ಸಹ ಸಂಚಾಲಕ ತುಳಜಪ್ಪ ನಿಡಗಟ್ಟಿ, ಮುಖಂಡರಾದ ಸೋಮಶೇಖರ್, ಶಿವಕುಮಾರ್, ನಾಗೇಂದ್ರ, ಯತಿರಾಜ್ ಮತ್ತು ಸೌತ್ ವೆಸ್ಟರ್ನ್ ರೈಲ್ವೆ ಮಜ್ದೂರ್ ಯೂನಿಯನ್, ರೈಲ್ವೆ ಕಾರ್ಯಾಗಾರ ನೌಕರರು, ಅಂಚೆ ಇಲಾಖೆಯ ನೌಕರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಪ್ರಕಟವಾಗದ ಹಾಸನ ಮಹಿಳಾ ಕಾಲೇಜಿನ ಬಿಎ ವಿದ್ಯಾರ್ಥಿಗಳ ಫಲಿತಾಂಶ

ಮೈಸೂರು ಕ್ರಾಫರ್ಡ್ ಭವನದ ಎದುರು ವಿದ್ಯಾರ್ಥಿಗಳ ಪ್ರತಿಭಟನೆ



ಮೈಸೂರು, ಸೆ.21(ಜಿಎ)-ಹಾಸನದ ಸರ್ಕಾರಿ ಮಹಿಳಾ ಕಾಲೇಜಿನ ಬಿಎ ವಿದ್ಯಾರ್ಥಿಗಳ ಮೊದಲನೇ ಮತ್ತು 2ನೇ ಸೆಮಿಸ್ಟರ್ ಫಲಿತಾಂಶವನ್ನು ಪ್ರಕಟಿಸಿಲ್ಲದೆ ಇರುವುದನ್ನು ಖಂಡಿಸಿ ಗುರುವಾರ ಮೈಸೂರಿನ ವಿಶ್ವವಿದ್ಯಾನಿಲಯದ ಕಾರ್ಯಸೌಧದ ಮುಂಭಾಗ ಎಐಡಿಎಸ್‌ಓ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು.

ಈ ವೇಳೆ ಎಐಡಿಎಸ್‌ಓ ಜಿಲ್ಲಾ ಅಧ್ಯಕ್ಷ ಸುಭಾಷ್ ಬೆಟ್ಟದ ಕೊಪ್ಪ ಮಾತನಾಡಿ, ಮೈಸೂರು ವಿಶ್ವ ವಿದ್ಯಾನಿಲಯದ ವ್ಯಾಪ್ತಿಗೆ ಒಳಪಡುವ ಹಾಸನದ ಸರ್ಕಾರಿ ಮಹಿಳಾ ಕಾಲೇಜಿನ 2020-21ನೇ ಸಾಲಿನ ಬಿಎ ವಿದ್ಯಾರ್ಥಿಗಳ ಮೊದಲನೇ ಮತ್ತು 2ನೇ ಸೆಮಿಸ್ಟರ್ ಫಲಿತಾಂಶವನ್ನು ಪ್ರಕಟಿಸಿಲ್ಲ. ಜೊತೆಗೆ ಕಾಲೇಜಿನ ಆಡಳಿತ ಮಂಡಳಿ ಮೊದಲನೇ ಸೆಮಿಸ್ಟರ್‌ನಲ್ಲಿ ಪರಿಚಯಿಸದೆ ಇದ್ದ ದೈಹಿಕ ಶಿಕ್ಷಣ ವಿಷಯವನ್ನು ನಂತರ ಆರನೇ ಸೆಮಿಸ್ಟರ್‌ನಲ್ಲಿ ಪರಿಚಯಿಸಿದ್ದು, ಇದರಿಂದ ಮೈಸೂರು ವಿವಿಯು 159 ವಿದ್ಯಾರ್ಥಿನಿಯರಿಂದ ತಲಾ 500 ರೂ. ಗಳನ್ನು ದಂಡವಾಗಿ ವಸೂಲಿ ಮಾಡಿ ಪರೀಕ್ಷೆ ನೀಡಿದೆ ಎಂದರು.

ಪರೀಕ್ಷೆಯ ಫಲಿತಾಂಶ ಪ್ರಕಟವಾಗಿದ್ದು ಮೊದಲನೇ ಸೆಮಿಸ್ಟರ್‌ನಲ್ಲಿ ಉಲ್ಲೇಖಿಸಬೇಕಿದ್ದ ದೈಹಿಕ ಶಿಕ್ಷಣ ವಿಷಯವನ್ನು 6ನೇ ಸೆಮಿಸ್ಟರ್‌ನಲ್ಲಿ ಉಲ್ಲೇಖಿಸಿದ್ದು ಇದರಿಂದ ಮೊದಲನೇ ಸೆಮಿಸ್ಟರ್‌ನಲ್ಲಿ ಜಿಪಿಎ ಗ್ರೇಡ್ ಪ್ರಕಟವಾಗಿಲ್ಲ. ಆದ್ದರಿಂದ ಎರಡನೇ ಸೆಮಿಸ್ಟರ್ ಫಲಿತಾಂಶ ಕೂಡ ಪ್ರಕಟವಾಗಿಲ್ಲ. ಇದರಿಂದ 159 ವಿದ್ಯಾರ್ಥಿಗಳು ಸಮಸ್ಯೆಯಲ್ಲಿ ಸಿಲುಕಿದ್ದಾರೆ ಎಂದರು.

ಆರನೇ ಸೆಮಿಸ್ಟರ್‌ನ ಪತ್ರಿಕೋದ್ಯಮದ Introduction to Electronic Media ಪೇಪರ್‌ನ ಆಂತರಿಕ ಮೌಲ್ಯಮಾಪನವಾದ ಅಂಕಗಳು 23 ವಿದ್ಯಾರ್ಥಿನಿಯರ ಅಂಕಪಟ್ಟಿಯಲ್ಲಿ ಪ್ರಕಟವಾಗಿರುವುದಿಲ್ಲ. ಇದರಿಂದ 23 ವಿದ್ಯಾರ್ಥಿನಿಯರಿಗೆ 20 ಅಂಕಗಳು ಕಡಿತಗೊಂಡಿದ್ದು, ವಿದ್ಯಾರ್ಥಿನಿಯರಿಗೆ ವಂಚನೆಯಾಗಿದೆ. ಈ ಎಲ್ಲಾ ಕಾರಣಗಳಿಂದ ವಿದ್ಯಾರ್ಥಿಗಳಿಗೆ ಪದವಿಯ ಒಟ್ಟಾರೆ ಫಲಿತಾಂಶ ಬಂದಿರುವುದಿಲ್ಲ. ಇದರಿಂದ ವಿದ್ಯಾರ್ಥಿಗಳಿಗೆ ತಮ್ಮ ಸ್ನಾತಕೋತ್ತರ ಪದವಿಗೆ ಹೋಗಲು ತೊಂದರೆಯಾಗಿದ್ದು, ದಯಮಾಡಿ ಮೈಸೂರು ವಿವಿಯು ಈ ಸಮಸ್ಯೆಯನ್ನು ಆದಷ್ಟು ಬೇಗ ಬಗೆಹರಿಸುವಂತೆ ಆಗ್ರಹಿಸಿದರು.

ಈ ವೇಳೆ ಮನವಿ ಪತ್ರ ಸ್ವೀಕರಿಸಿ ಮಾತನಾಡಿದ ರಿಜಿಸ್ಟ್ರಾರ್ ಪ್ರೊ.ಮಹಾದೇವ್, ಸಮಸ್ಯೆ ಬಗೆಹರಿಸುವುದಾಗಿ ಭರವಸೆ ನೀಡಿದರು. ಪ್ರತಿಭಟನೆಯಲ್ಲಿ ಸುಭಾಷ್, ನಿತಿನ್, ವರ್ಷ, ಅಂಬಿಕಾ, ಲಾವಣ್ಯ, ಕಾವ್ಯ, ಚಂದನ, ಧನಲಕ್ಷ್ಮೀ, ಲೇಖನ, ಅನುಶ್ರೀ ಮತ್ತಿತರರು ಭಾಗಿಯಾಗಿದ್ದರು.



ಬೇಸಾಯ ಸಮುದಾಯದ ಆದರ್ಶ ರೈತ



ರೈತನಿಂದ, ರೈತರಿಗಾಗಿಯೇ ನಿರ್ಮಾಣವಾಗಿರುವ ಚಿತ್ರ 'ಆದರ್ಶ ರೈತ'; ರೈತನ ಕುರಿತು ಸಾಕಷ್ಟು ಚಿತ್ರಗಳು ಬಂದಿವೆ. ಆದರೆ ರೈತ ಏನು ಮಾಡಬೇಕು, ಏನು ಮಾಡಬಾರದು ಎಂದು ಹೇಳುವ ಕಥಾಹಂದರ ಹೊಂದಿರುವ ಚಿತ್ರ 'ಆದರ್ಶ ರೈತ' ತೆರೆಗೆ ಬರಲು ಸಿದ್ಧವಾಗಿದೆ. ಇತ್ತೀಚೆಗೆ ಈ ಚಿತ್ರದ ಟ್ರೇಲರ್ ಬಿಡುಗಡೆ, ಹಾಗೂ ಹಾಡುಗಳ ಪ್ರದರ್ಶನ ನಡೆಯಿತು. ನಟಿ ಪ್ರಿಯಾಹಾಸನ್, ವೇಗಸ್ ಆಸ್ಪತ್ರೆಯ ನಾರಾಯಣಸ್ವಾಮಿ, ಸಿರಿ ಮ್ಯೂಸಿಕ್‌ನ ಸುರೇಶ್ ಚಿಕ್ಕಣ್ಣ, ಆರ್.ವಿ.ಚೌಡಪ್ಪ ಹಾಗೂ ನಿರ್ಮಾಪಕ ಅಂತರ್ಯ ಸತೀಶ್ ಸೇರಿ ಟ್ರೈಲರ್ ರಿಲೀಸ್ ಮಾಡಿದರು, ತನ್ನದು ಕೃಷಿಕರ ಕುಟುಂಬ. ನನ್ನ ತಂದೆ ರೈತ. ನನಗೂ ಚಿಕ್ಕಂದಿನಿಂದಲೂ ವ್ಯವಸಾಯ ಮಾಡಿ ಅಭ್ಯಾಸವಿದೆ. ವ್ಯವಸಾಯ ವೃತ್ತಿಯಿಂದಲೇ ನನ್ನ ತಂದೆ ನಮ್ಮನ್ನೆಲ್ಲಾ ವಿದ್ಯಾವಂತರನ್ನಾಗಿ ಮಾಡಿದ್ದಾರೆ. ನನಗೆ ಮೊದಲಿನಿಂದಲೂ ರೈತರ ಬದುಕು ಹೇಗಿರುತ್ತೆ ಎಂಬ ಕುರಿತಂತೆ ಸಿನಿಮಾ ಮಾಡುವ ಆಸೆಯಿತ್ತು. ನಿರ್ದೇಶಕ ರಾಜೇಂದ್ರ ಕೊಣಿದೆಲ ಅವರು ರೈತನ ಕುರಿತಾಗಿ ಮಾಡಿಕೊಂಡಿದ್ದ ಕಥೆ ಇಷ್ಟವಾಯಿತು. ನಿರ್ಮಾಣದ ಜೊತೆಗೆ ಚಿತ್ರದ ಪ್ರಮುಖ ಪಾತ್ರವನ್ನು ಕೂಡ ಮಾಡಿದ್ದೇನೆ. ಸದ್ಯದಲ್ಲೇ ನಮ್ಮ ಚಿತ್ರ ಬಿಡುಗಡೆಯಾಗಲಿದೆ ಎಂದು ನಿರ್ಮಾಪಕ ಹಾಗೂ ನಾಯಕ ನಟ ಡಾ॥ಅಮರನಾಥ ರೆಡ್ಡಿ ಹೇಳಿದರು. ತೆಲುಗು ಚಿತ್ರರಂಗದಲ್ಲಿ ಸಹಾಯಕ ನಿರ್ದೇಶಕ, ನೃತ್ಯ ನಿರ್ದೇಶಕನಾಗಿ ಕಾರ್ಯನಿರ್ವಹಿಸಿರುವ ನನಗೆ ಇದು ಮೊದಲ ಚಿತ್ರ ಎಂದು ಮಾತು ಆರಂಭಿಸಿದ ನಿರ್ದೇಶಕ ರಾಜೇಂದ್ರ ಕೊಣದೆಲ, ರೈತನ ಕುರಿತು ಸಾಕಷ್ಟು ಚಿತ್ರಗಳು ಬಂದಿವೆ. ಆದರೆ ನಮ್ಮ ಚಿತ್ರದಲ್ಲಿ ರೈತ ಹೆಚ್ಚಿನ ಬಡ್ಡಿಗೆ ಸಾಲ ಮಾಡಬಾರದು. ಮಾಡಿದರೆ ಏನಾಗುತ್ತದೆ, ಸರ್ಕಾರಿ ಬ್ಯಾಂಕ್‌ನಿಂದಲೇ ಸಾಲ ಪಡೆಯಬೇಕು. ಸರ್ಕಾರದ ಸವಲತ್ತುಗಳನ್ನು ಬಳಸಿಕೊಳ್ಳಬೇಕು ಎನ್ನುವಂಥ ಉಪಯುಕ್ತ ಮಾಹಿತಿಗಳನ್ನು ಹೇಳಿದ್ದೇವೆ. ಒಬ್ಬ ರೈತ ಇಂತಹ ವಿಷಯಗಳನ್ನು ತಿಳಿದು ವ್ಯವಸಾಯ ಮಾಡಿದಾಗ ಆತ ಆದರ್ಶ ರೈತನಾಗುತ್ತಾನೆ ಎನ್ನುವುದೇ ಚಿತ್ರದ ಕಥೆ ಎಂದರು. ಕಲಾವಿದರಾದ ರೇಖಾದಾಸ್, ಸಿದ್ಧಾರ್ಥ, ಮೈಸೂರು ಸುಜಾತ, ಸೂಫಿಯಾ, ಖುಷಿ ಮೆಹ್ತಾ, ಸಂಗೀತ, ಎಂ.ವಿ.ಸುರೇಶ್ ಹಾಗೂ ಸಂಗೀತ ನಿರ್ದೇಶಕ ಮುರಳೀಧರ್ ನಾವಡ ಮುಂತಾದವರು ಚಿತ್ರ ಕುರಿತಂತೆ ಮಾತನಾಡಿದರು.



ರವಿಕೆ ಪ್ರಸಂಗದಲ್ಲಿ ಟೈಟಲ್ ಹಾಡು...



ಚಿತ್ರರಂಗದಲ್ಲಿ ಮಹಿಳೆಯರು ಧರಿಸುವ ರವಿಕೆಯ ಬಗ್ಗೆ ಈವರೆಗೆ ಯಾವುದೇ ಸಿನಿಮಾ ನಿರ್ಮಾಣವಾಗಿಲ್ಲ, ಹೆಣ್ಣು ಮಕ್ಕಳು ತುಂಬಾ ಇಷ್ಟಪಡುವ ರವಿಕೆಯನ್ನು ಹಿನ್ನೆಲೆಯಾಗಿಟ್ಟುಕೊಂಡು ಹಾಸ್ಯ ಕಥಾಹಂದರ ಹೆಣೆದು ಸಂತೋಷ್ ಕೊಡಂಕೇರಿ ಅವರು ಚಿತ್ರವೊಂದನ್ನು ನಿರ್ಮಿಸಿದ್ದಾರೆ, ಜೊತೆಗೆ ಆಕ್ಷನ್‌ಕಟ್ ಕೂಡ ಹೇಳಿದ್ದಾರೆ. ಆ ಚಿತ್ರದ ಹೆಸರು 'ರವಿಕೆ ಪ್ರಸಂಗ'. ಇತ್ತೀಚೆಗೆ ಈ ಚಿತ್ರದ ಟೈಟಲ್‌ಸಾಂಗ್ ಬಿಡುಗಡೆ ಕಾರ್ಯಕ್ರಮ ನಡೆಯಿತು. ವಿನಯ್‌ಶರ್ಮ ಅವರ ಸಂಗೀತ ಸಂಯೋಜನೆಯಲ್ಲಿ ಮೂಡಿ ಬಂದಿರುವ ಈ ಹಾಡಿಗೆ ಚೈತ್ರ ಹಾಗೂ ಚೇತನ್‌ನಾಯಕ್ ದನಿಯಾಗಿದ್ದಾರೆ.

ದೃಷ್ಟಿ ಮೀಡಿಯಾ ಪ್ರೊಡಕ್ಷನ್ ಅಡಿಯಲ್ಲಿ ನಿರ್ಮಾಣವಾಗಿರುವ, ಹಾಸ್ಯ ಪ್ರದಾನ ಕಥೆ ಇರುವ ನಮ್ಮ ಚಿತ್ರಕ್ಕೆ ಕಿರಣ್ ಕಾವೇರಪ್ಪ ಅವರು ಮಹಿಳೆಯರ ಅಚ್ಚುಮೆಚ್ಚಿನ ರವಿಕೆಯ ಕುರಿತಂತೆ ಮೂಡಿಬರುವ ಈ ಹಾಡಿಗೆ ಸಾಹಿತ್ಯ ಬರೆದಿದ್ದಾರೆ, ಈಗಾಗಲೇ ಚಿತ್ರದ ಎಲ್ಲಾ ಕೆಲಸಗಳು ಮುಗಿದು ಚಿತ್ರವೀಗ ಬಿಡುಗಡೆಯ ಹಂತಕ್ಕೆ ಬಂದಿದೆ. ಸದ್ಯದಲ್ಲೇ ತೆರೆಗೆ ತರುವುದಾಗಿ ನಿರ್ದೇಶಕ ಹಾಗೂ ನಿರ್ಮಾಪಕ ಸಂತೋಷ್ ಕೊಡೆಂಕೇರಿ ಅವರು ಹೇಳಿದರು. ಚಿತ್ರಕ್ಕೆ ಕಥೆ ಹಾಗೂ ಸಂಭಾಷಣೆ ಬರೆದಿರುವ ಪಾವನ ಸಂತೋಷ್ ಮಾತನಾಡುತ್ತಾ, ಹೆಣ್ಣು ಮಕ್ಕಳಿಗೆ ಸೀರೆಗಿಂತ ಹೆಚ್ಚಿನ ಪ್ರೀತಿ ರವಿಕೆಯ ಮೇಲಿರುತ್ತದೆ. ಚಿತ್ರದಲ್ಲಿ ಆ ರವಿಕೆ ಕುರಿತಂತೆ ಕಥೆ ಬರೆದಿದ್ದೇನೆ ಎಂದರು.

ಚಿತ್ರದ ನಾಯಕಿಯಾಗಿ ಗೀತಾಭಾರತಿ ಭಟ್ ನಟಿಸಿದ್ದಾರೆ, ಈ ತಂಡದೊಂದಿಗೆ ಕೆಲಸ ಮಾಡಿದ್ದು ಸಂತೋಷವಾಗಿದೆ. ರವಿಕೆಯ ಕುರಿತಾಗಿ ಬರುತ್ತಿರುವ ಈ ಚಿತ್ರವು ಎಲ್ಲಾ ಹೆಣ್ಣು ಮಕ್ಕಳ ಮನಸ್ಸಿಗೆ ಹತ್ತಿರವಾಗಲಿದೆ ಎಂದು ಹಿರಿಯ ನಟಿ ಪದ್ಮಜಾರಾವ್ ತಿಳಿಸಿದರು. ನಿರ್ಮಾಣಕ್ಕೆ ಸಾಥ್ ನೀಡಿರುವ ಶಂತನು ಮಹರ್ಷಿ, ಗಿರೀಶ್‌ಗೌಡ, ನಿರಂಜನ್‌ಗೌಡ ಹಾಗೂ ಶಿವರುದ್ರಯ್ಯ ಸೇರಿದಂತೆ ಅನೇಕರು ಹಾಡಿನ ಬಗ್ಗೆ ಮಾತನಾಡಿದರು.

ಬ್ರಹ್ಮಗಂಟು ಖ್ಯಾತಿಯ ಗೀತಾಭಾರತಿಭಟ್, ಸಂಪತ್ ಮೈತ್ರೇಯ, ರಾಕೇಶ್‌ಮಯ್ಯ, ಸುಮನ್ ರಂಗನಾಥ್, ಪದ್ಮಜಾರಾವ್, ರಘು ಪಾಂಡೇಶ್ವರ್, ಕೃಷ್ಣಮೂರ್ತಿ ಕವತ್ತಾರ್, ಪ್ರವೀಣ್ ಅಥರ್ವ, ಮೀನಾ ಮುಂತಾದವರು ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ. ಮುರಳಿಧರ್ ಎನ್. ಅವರ ಛಾಯಾಗ್ರಹಣ ಹಾಗೂ ರಘು ಶಿವರಾಮ್ ಸಂಕಲನ ಈ ಚಿತ್ರಕ್ಕಿದೆ.



ದೇಶದ ಪ್ರತಿಷ್ಠಿತ ಚಿತ್ರ ವಿತರಕರ ಸಂಸ್ಥೆ ಪೆನ್ ಸ್ಟುಡಿಯೋ ಪ್ರತಿನಿಧಿಯೊಂದಿಗೆ 'ಘೋಸ್ಟ್' ಚಿತ್ರ ನಿರ್ಮಾಪಕ ಸಂದೇಶ್ ಎನ್.

ಹೆಸರಾಂತ ಪೆನ್‌ಸ್ಟುಡಿಯೋ ತೆಕ್ಕೆಗೆ 'ಘೋಸ್ಟ್'

ಹೆಸರಾಂತ ನಿರ್ಮಾಣ ಸಂಸ್ಥೆ ಸಂದೇಶ್ ಪ್ರೊಡಕ್ಷನ್ಸ್ ಮೂಲಕ ಸಂದೇಶ್ ಎನ್. ನಿರ್ಮಿಸಿರುವ, ಶ್ರೀನಿ ನಿರ್ದೇಶನ, ಶಿವರಾಜಕುಮಾರ್, ಅನುಪಮ್ ಖೇರ್ ನಟಿಸಿರುವ, ಬಹುನಿರೀಕ್ಷಿತ "ಘೋಸ್ಟ್" ಚಿತ್ರದ ಥಿಯೇಟ್ರಿಕಲ್, ಸ್ಯಾಟಲೈಟ್ ಹಾಗೂ ಡಿಜಿಟಲ್ ಹಕ್ಕು ದೊಡ್ಡ ಮೊತ್ತಕ್ಕೆ ಮಾರಾಟವಾಗಿದೆ. ಆರ್‌ಆರ್‌ಆರ್, ಜವಾನ್ ಸೇರಿದಂತೆ ಅನೇಕ ಹಿಟ್ ಚಿತ್ರಗಳನ್ನು ವಿತರಣೆ ಮಾಡಿರುವ ಪೆನ್‌ಸ್ಟುಡಿಯೋ ಈ ಚಿತ್ರದ ವಿತರಣಾ ಹಕ್ಕನ್ನು ಪಡೆದುಕೊಂಡಿದೆ. ಕನ್ನಡ, ತಮಿಳು ಹಾಗೂ ಮಲೆಯಾಳಂ ಭಾಷೆಗಳನ್ನು ಹೊರತುಪಡಿಸಿ ಮಿಕ್ಕೆಲ್ಲಾ ಭಾಷೆಗಳಲ್ಲಿ ಘೋಸ್ಟ್ ಚಿತ್ರವನ್ನು ಪೆನ್ ಸ್ಟುಡಿಯೋ ಸಂಸ್ಥೆ ಬಿಡುಗಡೆ ಮಾಡುತ್ತಿರುವುದಾಗಿ ನಿರ್ಮಾಪಕ ಸಂದೇಶ್ ಎನ್. ತಿಳಿಸಿದ್ದಾರೆ. ಇತ್ತೀಚೆಗೆ ಪೆನ್ ಸ್ಟುಡಿಯೋ ಸಂಸ್ಥೆ ಮುಖ್ಯಸ್ಥ ಜಯಂತಿ ಲಾಲ್ ಗಡ ಹಾಗೂ ನಿರ್ಮಾಪಕ ಸಂದೇಶ್ ಎನ್. ಈ ಕುರಿತು ಮಾತನಾಡಿದ್ದಾರೆ. ಅಕ್ಟೋಬರ್ ಮೊದಲ ವಾರ 'ಘೋಸ್ಟ್' ಚಿತ್ರದ ಪ್ರಚಾರಕ್ಕಾಗಿ ಶಿವರಾಜ್‌ಕುಮಾರ್ ಅವರು ಮುಂಬೈ, ದೆಹಲಿ ಮುಂತಾದೆಡೆ ತೆರಳುತ್ತಿದ್ದಾರೆ ಎಂದು ನಿರ್ಮಾಪಕರು ಮಾಹಿತಿ ನೀಡಿದ್ದಾರೆ.


'ಯಂಗ್ ಮ್ಯಾನ್' ದೇಶ ಪ್ರೇಮದ ಕಥೆ

ಕನ್ನಡದಲ್ಲಿ ಆಗಾಗ ಹೊಸ ಪ್ರಯೋಗಗಳು ನಡೆಯುತ್ತಲೇ ಇರುತ್ತವೆ. ಇದೀಗ ಮುತ್ತುರಾಜ್ ಎಂಬ ನಿರ್ದೇಶಕ ಇಡೀ ಚಿತ್ರವನ್ನು ಸಿಂಗಲ್ ಟೇಕ್‌ನಲ್ಲಿ ಚಿತ್ರೀಕರಿಸಿದ್ದಾರೆ. ಯಂಗ್‌ಮ್ಯಾನ್ ಹೆಸರಿನ ಕಮರ್ಷಿಯಲ್ ಅಂಶಗಳನ್ನೊಳಗೊಂಡ ಚಿತ್ರ ಇದಾಗಿದ್ದು, ಈ ಚಿತ್ರದಲ್ಲಿ ಸುನಿಲ್‌ಗೌಡ, ನಯನ ಪಟ್ಟಸ್ವಾಮಿ, ರಾಶಿಕಾ, ಆನಂದ್ ಕೆಂಗೇರಿ ಇತರರು ನಟಿಸಿದ್ದಾರೆ.

ಇತ್ತೀಚೆಗೆ ನಡೆದ ಪತ್ರಿಕಾಗೋಷ್ಠಿಯಲ್ಲಿ ನಿರ್ದೇಶಕ ಮುತ್ತುರಾಜ್ ಮಾತನಾಡುತ್ತ ಚಿತ್ರರಂಗದಲ್ಲಿ ಹೊಸದಾಗಿ ಏನಾದರೂ ಮಾಡಬೇಕೆಂದು ಯೋಚಿಸಿದಾಗ ಈ ಐಡಿಯಾ ಹೊಳೆಯಿತು. ಈ ಪ್ರಯತ್ನಕ್ಕೆ ನಿರ್ಮಾಪಕ ಮುರಳಿ ನನ್ನಜೊತೆ ನಿಂತರು. ಇಲ್ಲಿ ಛಾಯಾಗ್ರಾಹಕ ವೀನಸ್ ನಾಗರಾಜಮೂರ್ತಿ ಅವರ ಕೆಲಸ ತುಂಬಾ ದೊಡ್ಡದು. 13 ಜನ ಕಲಾವಿದರನ್ನು ಇಟ್ಟುಕೊಂಡು ಎರಡೂವರೆ ಗಂಟೆ ಅವಧಿಯ ಈ ಚಿತ್ರವನ್ನು ಸಿಂಗಲ್‌ಟೇಕ್‌ನಲ್ಲಿ ಚಿತ್ರೀಕರಿಸಿದ್ದೇನೆ. ದೇಶಪ್ರೇಮದ ಬಗ್ಗೆ ಈವರೆಗೆ ಯಾರೂ ಹೇಳಿರದಂಥ ಕಂಟೆಂಟ್ ಈ ಚಿತ್ರದಲ್ಲಿದೆ. ಬೇರೆಯದೇ ಲೋಕಕ್ಕೆ ಕರೆದುಕೊಂಡು ಹೋಗುವ, ಅದ್ಭುತ ಆರ್‌ಆರ್ ಫೀಲ್ ಕೊಡುವ ದೇಶಭಕ್ತಿಯ ಅದ್ಭುತ ಕಥೆಯಿರುವ ಮನರಂಜನಾತ್ಮಕ ಚಿತ್ರ ಇದಾಗಿದ್ದು, ಇತ್ತೀಚಿನ ದಿನಗಳಲ್ಲಿ ಯಾರು ಊಹಿಸಲಾಗದ ಅದ್ಭುತ ಕ್ಲೈಮ್ಯಾಕ್ಸ್ ನಮ್ಮ ಚಿತ್ರದಲ್ಲಿದೆ. ಕಲಾವಿದರಿಗೆಲ್ಲಾ 3 ತಿಂಗಳು ತರಬೇತಿ ನೀಡಿ, ನಂತರ ಒಂದು ದಿನ ಚಿತ್ರೀಕರಣ ಮಾಡಿದ್ದೇವೆ. ಕನಕಪುರ ಬಳಿಯ ಮನೆಯೊಂದರಲ್ಲಿ ಇಡೀ ಚಿತ್ರ ಶೂಟ್ ಆಗಿದೆ, ನನ್ನ ತಾಯಿ, ತಂದೆ ಹರೀಶ್ ಹಾಗೂ ಕ್ರಿಯೇಟಿವ್‌ಹೆಡ್ ಮುರಳಿ ಅವರು ನನ್ನ ಕನಸು ನನಸಾಗಲು ಸಹಕಾರ ನೀಡಿದ್ದಾರೆ ಎಂದರು.

ಕಮರ್ಷಿಯಲ್ ಅಂಶಗಳನ್ನಿಟ್ಟುಕೊಂಡು, ಇಡೀ ಚಿತ್ರವನ್ನು ಸಿಂಗಲ್‌ಟೇಕ್‌ನ'ಲ್ಲಿ ಚಿತ್ರೀಕರಿಸುವುದು ಸುಲಭವೇನಲ್ಲ ಎಂದ ಛಾಯಾಗ್ರಾಹಕ ವೀನಸ್ ನಾಗರಾಜ್‌ಮೂರ್ತಿ, ಈ ಸಂದರ್ಭದಲ್ಲಿ ನಾವು ಅಂದುಕೊಂಡ ಹಾಗೆ ಚಿತ್ರೀಕರಣ ಮಾಡಲು ಸಹಕಾರ ನೀಡಿದ ಕಲಾವಿದರಿಗೆ ಧನ್ಯವಾದ ಹೇಳಲೇಬೇಕು. ಅವರ ಸಹಕಾರವಿಲ್ಲದಿದ್ದರೆ ಈ ಸಾಧನೆ ಆಗುತ್ತಿರಲಿಲ್ಲ ಎಂದು ಹೇಳಿದರು. ಚಿತ್ರವನ್ನು ಲಿಮ್ಕಾ ದಾಖಲೆಗೆ ಕಳುಹಿಸುತ್ತಿರುವುದಾಗಿ ಕ್ರಿಯೇಟಿವ್‌ಹೆಡ್ ಮುರಳಿ ತಿಳಿಸಿದರು. ಕಲಾವಿದರಾದ ಸುನೀಲ್‌ಗೌಡ, ನಯನ ಪುಟ್ಟಸ್ವಾಮಿ, ಹರೀಶ್ ಆಚಾರ್ಯ, ಆನಂದ್ ಕೆಂಗೇರಿ, ರಾಶಿಕಾ ತನುಜಾ, ಶೃತಿಗೌಡ ಎಲ್ಲರೂ ತಮ್ಮ ಅನುಭವಗಳನ್ನು ಹಂಚಿಕೊಂಡರು.

ಸಿನಿಪದಬಂಧ-492



ಹೆಸರು ______

ವಿಳಾಸ ______

ದೂರವಾಣಿ ಸಂಖ್ಯೆ ______



ವಿಜೇತರು: ಮೈಥಿಲಿ ಬಾಲಕೃಷ್ಣ ಬಾಲಾಜಿ ನಿಲಯ, ಶಿವಾಜಿ ರಸ್ತೆ, ಹೆಚ್.ಡಿ.ಕೋಟೆ

ಎಡದಿಂದ ಬಲಕ್ಕೆ

1. ಇದು ಚೌಕವಲ್ಲ ಐದು ಕಥೆಯುಳ್ಳ ಚಿತ್ರ 4
3. ಕಲ್ಲು ಎಸೆಯಬೇಡಿ, ಇದು ಕೆ.ವಿ.ಜಯರಾಮ್ ನಿರ್ದೇಶನದ ಚಿತ್ರ 5
5. ಅರ್ಜುನ್ ಸರ್ಜಾನಿಗೆ ಅಚ್ಚರಿ ಉಂಟು ಮಾಡಿದ ಚಿತ್ರ 3
7. "ಅಂದವು ಅಂದವು ಈ ಕನ್ನಡ ನಾಡು...", ಎಂಬ ಗೀತೆಯ ಚಿತ್ರ 5
8. ಮಾತು ಬಾರದ ಶಂಕರ್ ನಾಗ್ ತೀರಿಸಿದ ಹಗೆ 5
9. ಈತನೇ ಚಾಲೆಂಜಿಂಗ್ ಸ್ಟಾರ್ 3
10. ರಾಜೇಶ್ ಅಭಿನಯದಲ್ಲಿ ಕಾರಾಗೃಹ ಖೈದಿಗಳ ಪಾಲಿಗೆ ದೈವ ನೆಲೆ 5
12. ಆರು _ _ _ _ _ 5
17. 'ಸಿಂಹದ ಮರಿ' ಚಿತ್ರದ ನಾಯಕಿ 3
18. ಅನಂತ್ ನಾಗ್ – ಸುಜಾತ ಅಭಿನಯದ ಚಿತ್ರ 5
19. ವಿಷ್ಣುವರ್ಧನ್ ಅಭಿನಯದಲ್ಲಿ ಬಂದ ಸರ್ಪಸ್ತ್ರೀ 4

ಮೇಲಿನಿಂದ ಕೆಳಕ್ಕೆ

1. ಸಮುದ್ರ ಪಕ್ಷಿಯ ಹೆಸರು ತೆರೆಯ ಮೇಲೂ ಬಂದು ಹೋಗಿದೆ 3
2. ನಮ್ಮ ಭಾಷೆಯ ಬಾಕ್‌ಆಫೀಸ್ 5
3. ಅನಂತ್ ನಾಗ್ ಅವರ ತಾರಾಪತ್ನಿ 3
4. ಸವತಿಯು ಬೀರಿದ "ಛಾಯೆ" 3
5. ಪ್ರೀತಿಸುವ ಹೃದಯಗಳ ಚಡಪಡಿಕೆ 6
6. ಡಾ.ಹರೀಶ್, ಡಾ.ನಂದಿನಿ ಪಾತ್ರಗಳ ನೆನಪಿಸುವ ಚಿತ್ರ 3
8. ವೈಶಾಖದ ದಿನಗಳು ಚಿತ್ರದ ನಾಯಕಿ 6
11. ಕರಾವಳಿಯೊಳಗೆ ಅಡಗಿರುವ ನಟಿ 3
13. ಏಕಾಂಗಿಯಾಗಿ ತೆರೆಗೆ ಬಂದ ಪ್ರಾಣಿ 5
14. ಜಗ್ಗೇಶ್ ಮನ್ಮಥನಾದರೆ ಆದಿತ್ಯ? 3
15. ಸುಧಾರಾಣಿಯ ಬಳೆಗಳ ಬಣ್ಣ 3
16. ಒಳ್ಳೆಯ ಹೆಣ್ಣು 3



ಉಮ್ಮತ್ತೂರು ಇಂದುಶೇಖರ್
ಮೊ.9880820462

ಸಿನಿ ಪದಬಂಧ 491ರ ಉತ್ತರ

ಸ್ವ	ರ್ಣ	ಗೌ	ರಿ			ರ	ಹ	ಸ್ಯ	ರಾ	ತ್ರಿ
ಸ್ತಿ		ರಿ		ಅ	ಗ್ರ	ಜ				ಶೂ
ಕ್		ಗ		ಳಿ		ನಿ		ಸು		ಲ
		ಣೇ		ಯ				ಜಾ		
ಆ	ಕಾ	ಶ	ಗಂ	ಗೆ		ಪ್ರೇ	ಮ	ತ	ಪ	ಸ್ವಿ
				ಳೆ	ದ್ದ	ಮ				
ಜ	ಯ	ವಿ	ಜ	ಯ		ಸಿಂ	ಧು	ಮೆ	ನ	ನ್
		ನೀ				ಹಾ		ರ		
ಆ		ತಾ		ಶಂ		ಸ		ವ		ಲ
ಮ				ಕ	ದ	ನ		ಣಿ		ಗೋ
ಲಾ	ರಿ	ಡ್ರೈ	ವ	ರ್			ಗಂ	ಗೆ	ಗೌ	ರಿ

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಕುದ್ರು ಹಾಡಲ್ಲಿ ಸದ್ದು!

ಭಾಸ್ಕರ ನಾಯ್ಕ ಅವರ ನಿರ್ಮಾಣ ಹಾಗೂ ನಿರ್ದೇಶನವಿರುವ, ಕರಾವಳಿ ಭಾಗದ ಮತ್ತೊಂದು ಚಿತ್ರ "ಕುದ್ರು" ಈಗ ಎಲ್ಲೆಡೆ ಸದ್ದು ಮಾಡುತ್ತಿದೆ. ಈ ಚಿತ್ರದ ಉಡಾಯಿಸು ಹಾಡು ಇತ್ತೀಚೆಗೆ ಬಿಡುಗಡೆಯಾಗಿದ್ದು, ಈ ಹಾಡನ್ನು ಉಡುಪಿ ಹಾಗೂ ಮಲೆನಾಡಿನ ಸುಂದರ ಪರಿಸರದಲ್ಲಿ ಚಿತ್ರೀಕರಿಸಲಾಗಿದೆ. ಕಾಲೇಜು ಹುಡುಗರು ಕ್ಲಾಸ್ ಬಂಕ್ ಮಾಡಿ ಎಂಜಾಯ್ ಮಾಡುವ ಗೀತೆಯಿದು. ನೀರಿನಿಂದ ಸುತ್ತುವರೆದ ದ್ವೀಪವನ್ನು ತುಳುವಿನಲ್ಲಿ ಕುದ್ರು ಎನ್ನುತ್ತಾರೆ. ಈ ಚಿತ್ರಕ್ಕೆ ನಾನೇ ಕಥೆ ಬರೆದು ನಿರ್ದೇಶಿಸಿದ್ದೇನೆ ಎಂದು ಭಾಸ್ಕರ ನಾಯ್ಕ್ ಹೇಳಿದರು.

ಕುದ್ರು ದ್ವೀಪದಲ್ಲಿ ಹಿಂದೂ, ಮುಸ್ಲಿಂ ಹಾಗೂ ಕ್ರಿಶ್ಚಿಯನ್ ಈ ಮೂರೂ ಪಂಗಡದವರು ವಾಸಿಸುತ್ತಿರುತ್ತಾರೆ. ಹೀಗೆ ಎಲ್ಲರೂ ಸಹಬಾಳ್ವೆಯಿಂದ ಜೀವನ ನಡೆಸುತ್ತಿರುವಾಗ ಬರುವ ಒಂದು ವಾಟ್ಸಾಪ್ ಸಂದೇಶ ಅವರಲ್ಲಿ ಹೇಗೆ ಅಶಾಂತಿಯನ್ನು ತಂದುಹಾಕುತ್ತದೆ ಹಾಗೂ ಬಂದ ತೊಂದರೆಯನ್ನು ನಿವಾರಣೆ ಮಾಡಿಕೊಂಡು ಮತ್ತೆ ಸಾಮರಸ್ಯದಿಂದ ಹೇಗೆ ಜೀವನ ನಡೆಸಬಹುದು ಎಂಬುದನ್ನು ನಮ್ಮ ಚಿತ್ರದಲ್ಲಿ ತೋರಿಸುತ್ತಿದ್ದೇವೆ. ಹರ್ಷಿತ್ ಶೆಟ್ಟಿ, ಗಾಡ್ವಿನ್, ಪ್ರಿಯಾ ಹೆಗ್ಡೆ, ವಿನುತ ಹಾಗೂ ಡೈನ ಡಿಸೋಜ ಪ್ರಮುಖ ಪಾತ್ರ ನಿರ್ವಹಿಸಿದ್ದು, ಉಡುಪಿ, ಬೆಂಗಳೂರು, ಗೋವಾ ಹಾಗೂ ಸೌದಿ ಅರೇಬಿಯಾದಲ್ಲಿ ಚಿತ್ರೀಕರಣ ನಡೆಸಿದ್ದೇವೆ ಎಂದು ಭಾಸ್ಕರ ನಾಯ್ಕ ಹೇಳಿದರು.

ತಮಿಳುನಾಡಿಗೆ ನೀರು ಬಿಡಲು ಸುಪ್ರೀಂಕೋರ್ಟ್ ಆದೇಶ

ನದಿಗೆ ಇಳಿದು ರೈತರ ಪ್ರತಿಭಟನೆ



ಟಿ.ನರಸೀಪುರ, ಸೆ.21– ತಮಿಳುನಾಡಿಗೆ ನೀರು ಬಿಡುವಂತೆ ಸುಪ್ರೀಂಕೋರ್ಟ್ ನೀಡಿರುವ ತೀರ್ಪನ್ನು ವಿರೋಧಿಸಿ ಇಂದು ಟಿ.ನರಸೀಪುರದಲ್ಲಿ ಕಬಿನಿ ಕಾವೇರಿ ಹೋರಾಟ ಸಮಿತಿ ವತಿಯಿಂದ ಕಬಿನಿ ನದಿಗೆ ಇಳಿದು ರೈತರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ, ಪ್ರತಿಭಟನೆ ನಡೆಸಿದರು.

ತಾಲೂಕು ಅಧ್ಯಕ್ಷ ಕುರುಬೂರು ಸಿದ್ದೇಶ್ ಮಾತನಾಡಿ, ಪಟ್ಟಣದ ವಿವಿಧ ಸಂಘಟನೆಯೊಂದಿಗೆ ಚರ್ಚಿಸಿದ್ದೇವೆ. ಇದೇ ಮಂಗಳವಾರ ಕಾವೇರಿ ಕಬಿನಿ ಹೋರಾಟ ಸಮಿತಿ ವತಿಯಿಂದ ಹಾಗೂ ವಿವಿಧ ಸಂಘಟನೆಗಳಿಂದ ಟಿ.ನರಸೀಪುರ ತಾಲೂಕು ಬಂದ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತೇವೆ ಎಂದು ಎಚ್ಚರಿಕೆ ನೀಡಿದರು.

ಕಬಿನಿ ನದಿಗೆ ಇಳಿದ ರೈತರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಪ್ರತಿಭಟನೆ ನಡೆಸಿದರು. ರಾಜ್ಯ ಸರ್ಕಾರ ಕೂಡಲೇ ಸುಪ್ರೀಂಕೋರ್ಟ್ ಆದೇಶವನ್ನು ತಳ್ಳಿ ಹಾಕಿ ತಮಿಳ್ನಾಡಿಗೆ ನೀರು ಬಿಡುತ್ತಿರುವುದನ್ನು ನಿಲ್ಲಿಸಬೇಕು. ರಾಜ್ಯದ ರೈತರು ಈಗಾಗಲೇ ನೀರಿಲ್ಲದೆ ಭತ್ತ ನಾಟಿ ಮಾಡಿಲ್ಲ. ಹಾಗಾಗಿ ಕರ್ನಾಟಕದ ರೈತರ ಹಿತ ಕಾಪಾಡುವಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಅನ್ಯಾಯವೆಸಗುತ್ತಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಹತ್ತಳ್ಳಿ ದೇವರಾಜ್, ಯಡ್ದೋರೆ ರಾಜು, ಯೋಗೇಶ್, ಬನ್ನೂರ್ ಶ್ರೀನಿವಾಸ್, ಉಮೇಶ್ ಕಿರಗಸೂರು ಶಂಕರ್, ಪ್ರಸಾದ್ ನಾಯಕ್ ಅಪ್ಪಣ್ಣ ಸಿದ್ದರಾಜು ಪರಶಿವಮೂರ್ತಿ, ಪ್ರದೀಪ್, ಚಂದ್ರಶೇಖರ್ ಮುಂತಾದವರು ಹಾಜರಿದ್ದರು.

ಚಿಕ್ಕದೇವಮ್ಮನವರ ಬೆಟ್ಟ ಅಭಿವೃದ್ಧಿ

ಭದ್ರತಾ ಸಿಬ್ಬಂದಿ ಕೊಠಡಿ, ಸೇವಾ ಕೌಂಟರ್, ಪಾಕಶಾಲೆ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಶಾಸಕ ಅನಿಲ್ ಚಿಕ್ಕಮಾದು ಭರವಸೆ

ಸರಗೂರು, ಸೆ.21– ತಾಲೂಕಿನ ಚಿಕ್ಕ ದೇವಮ್ಮನವರ ಬೆಟ್ಟದ ಅಭಿವೃದ್ಧಿಗೆ ಶ್ರಮಿಸುವೆ ಎಂದು ಭರವಸೆ ನೀಡಿದ ಶಾಸಕ ಅನಿಲ್ ಚಿಕ್ಕಮಾದು ಕ್ಷೇತ್ರವನ್ನು ಧಾರ್ಮಿಕ ಪ್ರವಾಸಿ ತಾಣವನ್ನಾಗಿ ಮಾಡುವ ಕನಸಿದೆ ಎಂದರು.



ತಾಲೂಕಿನ ಚಿಕ್ಕದೇವಮ್ಮನವರ ಬೆಟ್ಟದಲ್ಲಿ ಗುರುವಾರ 33.90 ಲಕ್ಷ ರೂ. ವೆಚ್ಚ ಭದ್ರತಾ ಸಿಬ್ಬಂದಿ ಕೊಠಡಿ, ಸೇವಾ ಕೌಂಟರ್ ಮತ್ತು ಪಾಕಶಾಲೆಯ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡುತ್ತಿದ್ದರು.

ದೇವಾಲಯದ ಮೆಟ್ಟಿಲು ಬಳಿ ಭದ್ರತಾ ಸಿಬ್ಬಂದಿ ಕಾವಲು ಕೊಠಡಿ, ಸೇವಾ ಕೌಂಟರ್ ನಿರ್ಮಾಣ ಕಾಮಗಾರಿ 17.20 ಲಕ್ಷ ರೂ. ಮತ್ತು ಪಾಕಶಾಲೆ ನಿರ್ಮಾಣ ಕಾಮಗಾರಿಯನ್ನು 16.70 ಲಕ್ಷ ರೂ. ವೆಚ್ಚದಲ್ಲಿ ಮಾಡಲಾಗುತ್ತಿದೆ. ಚಿಕ್ಕದೇವಮ್ಮ ಬೆಟ್ಟದಲ್ಲಿ ಇನ್ನು ಸಾಕಷ್ಟು ಕೆಲಸ ಆಗಬೇಕಿದೆ. ನಮ್ಮದೇ ಸರ್ಕಾರ ಇರುವುದರಿಂದ ಹೆಚ್ಚಿನ ಅನುದಾನ ತಂದು ಧಾರ್ಮಿಕ ಪ್ರವಾಸಿ ತಾಣ ಮಾಡುವ ಕನಸು ಇದೆ ಎಂದರು. ತಹಶೀಲ್ದಾರ್ ಪರಶಿವಮೂರ್ತಿ, ಸಣ್ಣ ರಾಮಪ್ಪ, ಧಾರ್ಮಿಕ ದತ್ತಿ ಇಲಾಖೆ ತಹಶೀಲ್ದಾರ್ ವಿದ್ಯುಲತಾ, ಚಿಕ್ಕದೇವಮ್ಮ ಬೆಟ್ಟದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ರಘು, ಪಾರುಪತ್ತೇದಾರ್ ಮಹದೇವಸ್ವಾಮಿ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಚಿಕ್ಕವೀರನಾಯಕ, ಜಿ.ವಿ.ಸೀತಾರಾಮ್, ಜಿನ್ನಹಳ್ಳಿ ರಾಜನಾಯಕ, ಕ್ಯಾತನಹಳ್ಳಿ ನಾಗರಾಜು,ಇಟ್ನಾ ಗ್ರಾಮ ಪಂಚಾಯಿತಿ ಅಧ್ಯಕ್ಷ ಜಯರಾಮ್, ಶಂಭುಲಿಂಗ ನಾಯಕ, ಪುರದಕಟ್ಟೆ ಬಸವರಾಜು, ಇಟ್ನಾ ಅನಿಲ್ ಕುಮಾರ್, ದೊಡ್ಡವೀರನಾಯಕ, ಎಂಬಿ.ಆನಂದ್, ಪ್ರಸನ್ನಕುಮಾರ್, ಸಂತೋಷ್, ಉಪ್ಪಿ, ಶಿವಕುಮಾರ್, ದೇವಣ್ಣ, ಮಹದೇವಸ್ವಾಮಿ, ಮನೋಹರ, ಸಿದ್ದಲಿಂಗ ಸ್ವಾಮಿ, ಕುಂದೂರು ಮಹದೇವ್, ಯೋಜನಾ ನಿರ್ದೇಶಕರು ನಿರ್ಮಿತಿ ಕೇಂದ್ರ ಎಂಜನಿಯರ್ ಸುಪ್ರಿತ್, ಜೀವನ್ ನಂದೀಶ್ ಕುಮಾರ್, ಆನಂದ್, ಇಮ್ರಾನ್, ದೇವಸ್ಥಾನದ ಸಿಬ್ಬಂದಿವರ್ಗದವರು, ಗ್ರಾಮಸ್ಥರು ಹಾಗೂ ಭಕ್ತಾದಿಗಳು ಹಾಜರಿದ್ದರು.

ಹೈಕೋರ್ಟ್ ಸೂಚನೆ ಮೇರೆಗೆ ಹುಣಸೂರಿಗೆ ಡಿಸಿ ಭೇಟಿ

ನಗರ ಸಭೆಯಿಂದ ನಿರ್ಮಿಸಿರುವ ಅವೈಜ್ಞಾನಿಕ ವಾಣಿಜ್ಯ ಮಳಿಗೆಗಳ ಪರಿಶೀಲನೆ, ಮಾಹಿತಿ ಸಂಗ್ರಹ



ಹುಣಸೂರು.ಸೆ.21– ಹುಣಸೂರು ನಗರ ಸಭೆಯ ವಾಣಿಜ್ಯ ಮಳಿಗೆಗಳ ಹರಾಜು ಪ್ರಕರಣ ರಾಜ್ಯ ಹೈಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿದ್ದು, ಈ ಕುರಿತು ವರದಿ ನೀಡುವಂತೆ ಹೈಕೋರ್ಟ್ ಸೂಚನೆ ಮೇರೆಗೆ ಇಂದು ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಅವರು ಅಧಿಕಾರಿಗಳೊಂದಿಗೆ ಹುಣಸೂರಿಗೆ ಭೇಟಿ ನೀಡಿ ಸಂತೆ ಮೈದಾನದ ವಾಣಿಜ್ಯ ಮಳಿಗೆಗಳ ಸ್ಥಿತಿ–ಗತಿ ಕುರಿತು ಪರಿಶೀಲನೆ ನಡೆಸಿ ಮಾಹಿತಿ ಸಂಗ್ರಹಿಸಿದರು.

ಈ ಸಂದರ್ಭದಲ್ಲಿ ನಗರಸಭಾ ಸದಸ್ಯರುಗಳು ದೂರು ಮತ್ತು ಸಮಸ್ಯೆಗಳನ್ನು ಹೇಳಿಕೊಳ್ಳಲು ಮುಂದಾದಾಗ ನಾನು ದೂರು ಸ್ವೀಕರಿಸಲು ಬಂದಿಲ್ಲ. ಹೈಕೋರ್ಟ್ ಸೂಚನೆ ಮೇರೆಗೆ ವಾಣಿಜ್ಯ ಮಳಿಗೆಗಳ ವಸ್ತುಸ್ಥಿತಿಯನ್ನು ಪರಿಶೀಲಿಸಿ ನ್ಯಾಯಾಲಯಕ್ಕೆ ವರದಿ ಮಾಡಲು ಬಂದಿದ್ದೇನೆ ಎಂದು ತಿಳಿಸಿದರು.

ನಗರಸಭೆಯ ಆಡಳಿತಾಧಿಕಾರಿಗಳಾದ ಜಿಲ್ಲಾಧಿಕಾರಿಗಳು ಹುಣಸೂರಿಗೆ ಭೇಟಿ ನೀಡುವ ವಿಚಾರವನ್ನು ಪೌರಾಯುಕ್ತರು ಮತ್ತು ಚುನಾಯಿತ ಸದಸ್ಯರಿಗೆ ಯಾವುದೇ ಮಾಹಿತಿ ನೀಡದೆ ಆಗಮಿಸಿದ್ದರು. ಸದಸ್ಯರಿದ್ದರೆ ಅಲ್ಲಿನ ವಾಸ್ತವಾಂಶವನ್ನು ಜಿಲ್ಲಾಧಿಕಾರಿಗಳಿಗೆ ಮನವರಿಕೆ ಮಾಡಿಕೊಡಬಹುದಿತ್ತು ಆದರೆ ಅವರ ಭೇಟಿಯ ವಿಷಯ ನಮಗೆ ತಿಳಿಸದೆ ಚುನಾಯಿತ ಸದಸ್ಯರನ್ನು ಕಡೆಗಣಿಸಿರುವುದು ಸ್ಥಳೀಯ ಅಧಿಕಾರಿಗಳ ಬೇಜವಾಬ್ದಾರಿತನವಾಗಿದೆ ಎಂದು ಸದಸ್ಯರಾದ ದೊಡ್ಡಹೆಜ್ಜೂರು ರಮೇಶ್, ಕೃಷ್ಣರಾಜಗುಪ್ತ ಸರುವಣ್ಣ, ಸಿರಾಜ್, ಶ್ರೀನಾಥ್ ಪೇರುಮಾಳ್ ಹೆಚ್.ಪಿ.ಸತೀಶ್ ಕುಮಾರ್ ಸೇರಿದಂತೆ ಇನ್ನೂ ಅನೇಕ ಸದಸ್ಯರು ಆರೋಪಿಸಿದರು.

ಕ್ಲೀನ್ ಮಾಡಲು ಒಂದು ವಾರ ಗಡುವು: 2011–12ರಲ್ಲಿ 132 ಕೋಟಿ ವೆಚ್ಚದಲ್ಲಿ ಅವೈಜ್ಞಾನಿಕವಾಗಿ ನಿರ್ಮಿಸಿದ ವಿವಿಧೋದ್ದೇಶ ವಾಣಿಜ್ಯ ಕಟ್ಟಡ ಈವರೆಗೂ ಪೂರ್ಣವಾಗದೆ, ಕೊಳಚೆ ನೀರು ತುಂಬಿ ಅನೈರ್ಮಲ್ಯ ಮತ್ತು ಅಕ್ರಮಗಳ ತಾಣವಾಗಿದೆ. ಈ ಕಾಮಗಾರಿ ಬಗ್ಗೆ ತನಿಖೆ ಮಾಡಿ ಈ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮವಾಗಬೇಕು ಎಂದು ಸದಸ್ಯರು ಮತ್ತು ಸಾರ್ವಜನಿಕರು ಒತ್ತಾಯಿಸಿದಾಗ ಮೋಟಾರ್‌ಗಳನ್ನು ಬಳಸಿ ಸೆಲ್ಲರ್ ಒಳಗೆ ತುಂಬಿರುವ ನೀರನ್ನು ಒಂದು ವಾರದಲ್ಲಿ ಹೊರ ತೆಗೆದು ಕ್ಲೀನ್ ಮಾಡಬೇಕು ಎಂದು ಅಧಿಕಾರಿಗಳಿಗೆ ಡಿಸಿ ತಾಕಿತು ಮಾಡಿದರು.

ಈ ಸಂದರ್ಭದಲ್ಲಿ ವಾಣಿಜ್ಯ ಮಳಿಗೆಗಳ ಬಿಡ್‌ದಾರರಾದ ತರಕಾರಿ ವ್ಯಾಪಾರಿ ಮುನ್ನಾ ಹಾಗೂ ಅದೀಲ್, ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿ ಅವೈಜ್ಞಾನಿಕವಾಗಿ ನಡೆದಿರುವ ಹರಾಜು ಪ್ರಕ್ರಿಯೆಯಲ್ಲಿ ತುಂಬಾ ಅನ್ಯಾಯವಾಗಿದೆ. ಅಂದಿನ ಪೌರಾಯುಕ್ತರು, ಕಂದಾಯ ಅಧಿಕಾರಿ ಮತ್ತು ಕಂದಾಯ ನಿರೀಕ್ಷಕರಿಂದ ಆಗಿರುವ ಅನ್ಯಾಯವನ್ನು ಸರಿಪಡಿಸಿ ಅನೇಕ ವರ್ಷಗಳಿಂದ ವ್ಯಾಪಾರ ಮಾಡಿಕೊಂಡು ಬಂದಿರುವ ನಮಗೆ ನ್ಯಾಯ ದೊರಕಿಸಿ ಕೊಡಬೇಕೆಂದು ಮನವಿ ಮಾಡಿದರು.

ನಗರಸಭೆಯ ವಾಣಿಜ್ಯ ಮಳಿಗೆಗಳನ್ನು ಸಾರ್ವಜನಿಕವಾಗಿ 2022ರ ಫೆ.22 ರಂದು 103 ಮಳಿಗೆಗಳನ್ನು ಹರಾಜು ಮಾಡಲಾಗಿತ್ತು. ಈ ಪೈಕಿ ಹರಾಜಿನಲ್ಲಿ ಅನ್ಯಾಯವಾಗಿದೆ ಎಂದು 57 ಬಿಡ್‌ದಾರರು ನ್ಯಾಯ ಕೋರಿ ಹೈಕೋರ್ಟ್ ಮೊರೆ ಹೋಗಿದ್ದು ವಿಚಾರಣೆ ನಡೆಯುತ್ತಿದೆ. ಈ ಸಂದರ್ಭದಲ್ಲಿ ಪಂಚಾಯಿತ್ ಜಿಲ್ಲಾಧಿಕಾರಿ(ಪಿ.ಡಿ) ಶುಭಾ, ಪೌರಾಯುಕ್ತೆ ಮಾನಸ, ಇಂಜಿನಿಯರ್‌ಗಳಾದ ಶರ್ಮಿಳಾ, ಲೋಕೇಶ್, ರವಿಕುಮಾರ್, ಪರಿಸರ ಇಂಜಿನಿಯರ್ ರೂಪಾ, ಆರೋಗ್ಯ ನಿರೀಕ್ಷಕರುಗಳಾದ ಸತೀಶ್, ಶಶಿಕುಮಾರ್, ಸಿಬ್ಬಂದಿಗಳಾದ ಚಂದ್ರ, ಸುರೇಂದ್ರ, ಸದಸ್ಯರುಗಳಾದ ಹೆಚ್.ಪಿ.ಸತೀಶ್‌ಕುಮಾರ್, ಕೃಷ್ಣರಾಜಗುಪ್ತ, ಸರವಣ, ಸಿರಾಜ್, ಶ್ರೀನಾಥ್, ಪೇರುಮಾಳ್, ರಿಜ್ವಾನ್, ಸೇರಿದಂತೆ ಸಾರ್ವಜನಿಕರು ವ್ಯಾಪಾರಸ್ಥರು ಉಪಸ್ಥಿತರಿದ್ದರು.

ಉಸಿರುಗಟ್ಟಿಸಿ ಪತ್ನಿಯನ್ನೇ ಕೊಂದ ಪತಿ

ಸ್ವಸಹಾಯ ಸಂಘದಲ್ಲಿ ಸಾಲ ಕೊಡಿಸದ ಹಿನ್ನೆಲೆಯಲ್ಲಿ ಕೃತ್ಯ

ನಂಜನಗೂಡು, ಸೆ.21– ಹಣ ಕೊಡದ ಪತ್ನಿಯನ್ನು ಪತಿಯೇ ಉಸಿರುಗಟ್ಟಿಸಿ ಕೊಲೆ ಮಾಡಿರುವ ಘಟನೆ ತಾಲೂಕಿನ ದೊಡ್ಡಹೊಮ್ಮ ಗ್ರಾಮದಲ್ಲಿ ಸಂಭವಿಸಿದೆ.

ಗ್ರಾಮದ ರಾಮಯ್ಯ ಎಂಬುವರ ಪುತ್ರಿ ರೂಪ (35), ಮೃತ ದುರ್ದೈವಿಯಾಗಿದ್ದು, ಪುರುಷೋತ್ತಮ(45) ಪತ್ನಿಯನ್ನು ಕೊಂದ ಆರೋಪಿ. ದಂಪತಿಗೆ ಐದು ವರ್ಷದ ಅನ್ವಿತಾ ಎಂಬ ಮಗಳಿದ್ದಾಳೆ.

ಕಳೆದ 6 ವರ್ಷಗಳ ಹಿಂದೆ ದೊಡ್ಡಹೊಮ್ಮ ಗ್ರಾಮದ ರಾಮಯ್ಯ ಎಂಬುವರ ಪುತ್ರಿ ರೂಪಾಳನ್ನು ಕೆಸ್ತೂರು ಗ್ರಾಮದ ಪುರುಷೋತ್ತಮನೊಂದಿಗೆ ಮದುವೆ ಮಾಡಿಕೊಡಲಾಗಿತ್ತು. ಪುರುಷೋತ್ತಮ ದೊಡ್ಡಹೊಮ್ಮ ಗ್ರಾಮದಲ್ಲೇ ಗಾರೆ ಕೆಲಸ ಮಾಡಿಕೊಂಡು ವಾಸವಿದ್ದ ಎನ್ನಲಾಗಿದೆ. ಕಳೆದ ಹಲವಾರು ವರ್ಷಗಳಿಂದ ಮಹಿಳಾ ಸ್ವಸಹಾಯ ಸಂಘದಲ್ಲಿ 1 ಲಕ್ಷ ಸಾಲ ತೆಗೆದುಕೊಡುವಂತೆ ಪತ್ನಿಯನ್ನು ಪೀಡಿಸುತ್ತಿದ್ದ. ಪತ್ನಿ ಸಾಲ ತೆಗೆದು ಕೊಡಲು ಒಪ್ಪದ ಕಾರಣ ಪತ್ನಿಯ ಮಾಂಗಲ್ಯ ಸರವನ್ನೇ ಕಿತ್ತುಕೊಂಡಿದ್ದ. ಈ ಬಗ್ಗೆ ಗ್ರಾಮಸ್ಥರು ಕೂಡಿ ಪುರುಷೋತ್ತಮನಿಗೆ ಬುದ್ಧಿವಾದ ಹೇಳಿ ಹೊಂದಿಕೊಂಡು ಬಾಳುವಂತೆ ಸೂಚಿಸಿದ್ದರು ಎನ್ನಲಾಗಿದೆ.

ಆದರೂ ತನ್ನ ಚಾಳಿ ಬಿಡದ ಪಾಪಿ ಪತಿ ಪುರುಷೋತ್ತಮ ಬುಧವಾರ ಮಧ್ಯಾಹ್ನ ಒಂದು ಗಂಟೆ ಸಮಯದಲ್ಲಿ ನಿನ್ನ ತಂದೆ ಹತ್ತಿರ ಹಣವನ್ನು ಕೊಡಿಸು ಇಲ್ಲವಾದಲ್ಲಿ ನಿನ್ನ ಮೈ ಮೇಲೆ ಇರುವ ಒಡವೆಯನ್ನು ಬಿಚ್ಚಿಕೊಡು ಎಂದು ಪತ್ನಿ ರೂಪಾಳೊಂದಿಗೆ ಗಲಾಟೆ ತೆಗೆದಿದ್ದಾನೆ. ಗಲಾಟೆ ಮಧ್ಯರಾತ್ರಿವರೆಗೂ ನಡೆದಿದ್ದು ಮಧ್ಯರಾತ್ರಿ ಪತಿ ಪುರುಷೋತ್ತಮ ತನ್ನ ಹೆಂಡತಿಯನ್ನು ಉಸಿರುಗಟ್ಟಿಸಿ ಕೊಲೆಗೈದು ಹಿಂಬಾಗಿಲಿನಿಂದ ಪರಾರಿಯಾಗಿದ್ದಾನೆ ಎಂದು ಮೃತ ರೂಪಾಳ ತಂದೆ ರಾಮಯ್ಯ ಕೌಲಂದೆ ಪೊಲೀಸರಿಗೆ ದೂರು ನೀಡಿದ್ದಾರೆ.

ದೂರು ದಾಖಲಿಸಿಕೊಂಡಿರುವ ಕವಲಂದೆ ಠಾಣೆಯ ಪೊಲೀಸರು ಪತಿ ಪುರುಷೋತ್ತಮನನ್ನು ವಶಕ್ಕೆ ಪಡೆದು, ಶವವನ್ನು ಮರಣೋತ್ತರ ಪರೀಕ್ಷೆಗೆ ಒಳಪಡಿಸಿ ಮುಂದಿನ ತನಿಖೆ ಕೈಗೊಂಡಿದ್ದಾರೆ.

ತುಂಬಲ ಡೇರಿ ಸದಸ್ಯರಿಗೆ ಬೋನಸ್



ತಿ.ನರಸೀಪುರ.ಸೆ21– ಹಾಲು ಉತ್ಪಾದಕರ ಸಹಕಾರ ಸಂಘವು ಪ್ರಸಕ್ತ ಸಾಲಿನಲ್ಲಿ ಮುನ್ನಡೆ ಸಾಗುತ್ತಿದ್ದು, ದೀಪಾವಳಿಗೆ ವಿಶೇಷ ಕೊಡುಗೆಯಾಗಿ ಬೋನಸ್ ನೀಡಲು ತೀರ್ಮಾನಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಬಿ.ಸಿದ್ದರಾಜು ತಿಳಿಸಿದರು.

ತಾಲೂಕಿನ ತುಂಬಲ ಹಾಲು ಉತ್ಪಾದಕರ ಸಹಕಾರ ಸಂಘದ ಆವರಣದಲ್ಲಿ 2022–23 ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಉದ್ಘಾಟಿಸಿ ಮಾತನಾಡಿ 55.202.63 ರೂ.ಗಳ ನಿವ್ವಳ ಲಾಭ ಗಳಿಸಿ ಯಶಸ್ವಿಯಾಗಿ ಮುನ್ನಡೆಯುತ್ತಿದೆ ಎಂದರು.

ಸಹಕಾರ ಸಂಘವು ವರ್ಷಗಳಷ್ಟು ಹಳೆಯ ಸಂಘವಾಗಿದ್ದು ಆರಂಭದಿಂದಲೂ ಲಾಭದಾಯಕವಾಗಿ ಮುನ್ನಡೆಯುತ್ತಾ ಬಂದಿದೆ. ಸಂಘದಲ್ಲಿ ಪ್ರತಿನಿತ್ಯ ಹೆಚ್ಚಿನ ಹಾಲು ಉತ್ಪಾದನೆಯಾಗುತ್ತಿದ್ದು ಇನ್ನೂ ಹೆಚ್ಚಿನ ಹಾಲು ಉತ್ಪಾದನೆಗೆ ರೈತರು ಒತ್ತು ನೀಡಬೇಕಿದೆ ಎಂದರು. ಇತ್ತೀಚೆಗೆ ಹೈನುಗಾರಿಕೆ ಲಾಭದಾಯಕ ಉದ್ದಿಮೆಯಾಗಿ ಬೆಳೆಯುತ್ತಿದೆ. ಆದರೆ ಗ್ರಾಮೀಣ ಪ್ರದೇಶಗಳಲ್ಲಿ ಹಸು ಸಾಕುವವರ ಸಂಖ್ಯೆ ಜಾಸ್ತಿ ಆಗಬೇಕು ಮನೆಗೊಂದು, ಎರಡು ಹಸು ಇದ್ದರೆ ಹೆಚ್ಚಿನ ಹಾಲು ಉತ್ಪಾದನೆ ಸಾಧ್ಯವಾಗುತ್ತದೆ ಎಂದರು.

ಮಾರ್ಗ ವಿಸ್ತರಣಾಧಿಕಾರಿ ವೀಣಾ ಮಾತನಾಡಿ, ತುಂಬಲ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಹೆಚ್ಚು ಹೆಚ್ಚು ಹಾಲು ನೀಡುವ ಮೂಲಕ ಡೈರಿಯನ್ನ ಉತ್ತಮ ರೀತಿಯಲ್ಲಿ ಬೆಳೆಸಿದರೆ ರೈತರು ಉತ್ತಮವಾಗಿ ಬದುಕಬಹುದು ಎಂದು ಸಲಹೆ ನೀಡಿದರು

ವಾರ್ಷಿಕ ವರದಿಯನ್ನು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಮ್.ಸುನಿತಾ ಸುರೇಶ್ ಮಂಡಿಸಿದರು. ಉಪಾಧ್ಯಕ್ಷ ಎನ್. ಜವರೇಗೌಡ, ನಿರ್ದೇಶಕರಾದ ಕರಿಶೆಟ್ಟಿ, ಕರಿಗೌಡ, ಕೆ.ಬಸವರಾಜು, ಟಿ.ಎಸ್. ನಾರಾಯಣ.ಎನ್. ಬಸವರಾಜು, ನಾಗರಾಜು, ಮಹದೇವಸ್ವಾಮಿ, ಭಾಗ್ಯಮ್ಮ. ಚಿಕ್ಕತಾಯಿ, ಗಿರಿಜಮ್ಮ, ಹಾಲು ಪರೀಕ್ಷಕ ಟಿ.ಆರ್.ಕೇಶವಮೂರ್ತಿ, ಸಹಾಯಕ ರವಿಕುಮಾರ್, ಶ್ರೀನಿವಾಸ್, ರೈತರು ಹಾಜರಿದ್ದರು.

ಪಿ.ಪಟ್ಟಣದ ಬಳಿ ಹುಲಿ ದಾಳಿಯಿಂದ ರೈತನಿಗೆ ಗಾಯ

ಪಿರಿಯಾಪಟ್ಟಣ, ಸೆ.21– ನಾಗರಹೊಳೆ ರಾಷ್ಟ್ರೀಯ ಉದ್ಯಾನವನದ ಆನೆಚೌಕೂರು ವಿಭಾಗಕ್ಕೆ ಹೊಂದಿಕೊಂಡಂತಿರುವ ಮುದ್ದೇನಹಳ್ಳಿ ಗ್ರಾಮದ ರೈತರೊಬ್ಬರ ಮೇಲೆ ಹುಲಿ ದಾಳಿ ನಡೆಸಿದೆ.

ಹುಲಿ ದಾಳಿಯಿಂದ ಗಾಯಗೊಂಡಿರುವ ಮುದ್ದೇನಹಳ್ಳಿ ಗ್ರಾಮದ ರಮೇಶ್ ಅವರನ್ನು ಆಸ್ಪತ್ರೆಗೆ ಸೇರಿಸಲಾಗಿದೆ.

ತಾಲೂಕಿನ ಮುದ್ದೇನಹಳ್ಳಿ ಗ್ರಾಮದಲ್ಲಿ ಅರಣ್ಯಕ್ಕೆ ಹೊಂದಿಕೊಂಡಂತಿರುವ ತಮ್ಮ ಜಮೀನಿನ ಪಕ್ಕದಲ್ಲಿ ಹಸುಗಳನ್ನು ಮೇಯಿಸಿ ಮನೆಗೆ ವಾಪಸ್ ಬರುವ ಸಂದರ್ಭದಲ್ಲಿ ಪೊದೆಯಲ್ಲಿದ್ದ ಹುಲಿ ರೈತನ ಮೇಲೆ ದಾಳಿ ಮಾಡಿ ಗಂಭೀರ ಗಾಯಗೊಳಿಸಿದೆ. ಇತ್ತೀಚಿನ ದಿನಗಳಲ್ಲಿ ತಾಲೂಕಿನಾದ್ಯಂತ ಅರಣ್ಯಕ್ಕೆ ಹೊಂದಿಕೊಂಡಂತಿರುವ ಗ್ರಾಮಗಳಲ್ಲಿ ಚಿರತೆ ಮತ್ತು ಹುಲಿಗಳ ಹಾವಳಿ ಹೆಚ್ಚಾಗುತ್ತಿದ್ದು, ರೈತರು ತಮ್ಮ ಜಮೀನುಗಳಲ್ಲಿ ವ್ಯವಸಾಯ ನಡೆಸಲು ತುಂಬಾ ಭಯಭೀತರಾಗಿದ್ದು, ಕಾಡುಪ್ರಾಣಿಗಳಿಂದ ರೈತರಿಗೆ ರಕ್ಷಣೆ ನೀಡಬೇಕೆಂದು ಕಾಡಂಚಿನ ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಸಾಲ ಪಾವತಿಸಿ, ಸವಲತ್ತು ಬಳಸಿಕೊಳ್ಳಿ



ತಿ.ನರಸೀಪುರ.ಸೆ.21– ಸಂಘದ ಸದಸ್ಯರು ಪಡೆದ ಸಾಲವನ್ನು ನಿಗದಿತ ಅವಧಿಯಲ್ಲಿ ಮರು ಪಾವತಿ ಮಾಡುವುದರ ಮೂಲಕ ಸಹಕಾರ ಸಂಘದ ಸವಲತ್ತುಗಳನ್ನು ಬಳಸಿಕೊಳ್ಳಿ ಎಂದು ಜಿಲ್ಲಾ ಬ್ಯಾಂಕ್ ಪ್ರತಿನಿಧಿ ಎಂ.ರಾಜಪ್ಪ ಹೇಳಿದರು.

ತಾಲೂಕಿನ ಮಾದೇಗೌಡನಹುಂಡಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದ 2022–23ನೇ ಸಾಲಿನ ಸರ್ವ ಸದಸ್ಯರ ಸಭೆಯಲ್ಲಿ ಅವರು ಮಾತನಾಡಿದರು. ಸಂಘದಿಂದ ವಿವಿಧೋದ್ದೇಶಗಳಿಗೆ ಸಾಲ ಪಡೆದ ಸಂಘದ ಸದಸ್ಯರು ಸಕಾಲಕ್ಕೆ ಸಾಲದ ಮರುಪಾವತಿ ಮಾಡಿದಲ್ಲಿ ಸಂಘದ ಬೆಳವಣಿಗೆ ಸಾಧ್ಯವಾಗಲಿದ್ದು,ಆರ್ಥಿಕವಾಗಿ ಮುಂದುವರೆಯಲು ಸಹಕಾರಿಯಾಗುತ್ತದೆ. ಹಾಗಾಗಿ ಸಾಲ ಪಡೆದ ರೈತರು ಸುಸ್ತಿದಾರರಾಗದೇ ಸಕಾಲಕ್ಕೆ ಸಾಲ ಮರುಪಾವತಿಸಿ ಮತ್ತೆ ಹೆಚ್ಚುವರಿ ಸಾಲ ಪಡೆದು ಸ್ವಾವಲಂಬಿ ಜೀವನ ನಡೆಸುವಂತೆ ಮನವಿ ಮಾಡಿದರು.

ಸಂಘದ ಅಧ್ಯಕ್ಷ ನಾಗರಾಜು ಮಾತನಾಡಿ, ಸಹಕಾರ ಸಂಘಕ್ಕೆ ರೈತರೇ ಜೀವನಾಡಿಯಾಗಿದ್ದು ಸಂಘದಿಂದ ಪಡೆದ ಸಾಲವನ್ನು ಸದಸ್ಯರು ಸುಸ್ತಿದಾರರಾಗದೇ ಸಕಾಲಕ್ಕೆ ಪಾವತಿಸಿದಾಗ ಮಾತ್ರವೇ ಸಹಕಾರ ಸಂಘದ ಬೆಳವಣಿಗೆ ಸಾಧ್ಯ,ಹಾಗಾಗಿ ರೈತರು ಪಡೆದ ಸಾಲವನ್ನು ಕಾಲ ಕಾಲಕ್ಕೆ ಮರು ಪಾವತಿಸಿ ಸಂಘವು ನೀಡುವ ಇತರೆ ಸವಲತ್ತುಗಳನ್ನು ಬಳಸಿಕೊಂಡು ಆರ್ಥಿಕವಾಗಿ ಅಭಿವೃದ್ಧಿ ಹೊಂದುವಂತೆ ಕರೆ ನೀಡಿದರು.

ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಸಿ.ರಾಜೇಶ್ ವಾರ್ಷಿಕ ವರದಿ ಮಂಡಿಸಿ ಪ್ರಸಕ್ತ ಸಾಲಿನಲ್ಲಿ ಸಂಘವು 2,89,740 ರೂ.ಗಳ ನಿವ್ವಳ ಲಾಭಗಳಿಸಿದೆ ಎಂದು ಮಾಹಿತಿ ನೀಡಿದರು. ಉಪಾಧ್ಯಕ್ಷ ಶ್ರೀನಿವಾಸ. ಮಾಜಿ ಅಧ್ಯಕ್ಷ ಎನ್.ಅನಿಲ್ ಕುಮಾರ್. ನಿರ್ದೇಶಕರಾದ ದೇವರಾಜ್. ನಾಗೇಂದ್ರ ವೆಂಕಟೇಶ್. ಹೆಚ್.ಎನ್.ರಾಜೇಶ್. ಗುರು, ನಾಗಮ್ಮ, ನಾಗಮ್ಮಚೆಲುವೆಗೌಡ, ಅಂಬರೀಶ್, ಮೋಹನ್ ಕುಮಾರ್ ಹಾಜರಿದ್ದರು.

ವಾರ್ಷಿಕ ಮಹಾಸಭೆ

ಸರಗೂರು: ಸರಗೂರು ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘದ ವಾರ್ಷಿಕ ಮಹಾಸಭೆ ಸೆ.23, ಸಂಘದ ಆವರಣದಲ್ಲಿ ಬೆಳಿಗ್ಗೆ 11 ಗಂಟೆಗೆ ಸಂಘದ ಅಧ್ಯಕ್ಷ ನಾಗರಾಜರಾಮ ಅಧ್ಯಕ್ಷತೆಯಲ್ಲಿ ನಡೆಯಲಿದೆ.

ಅಂಗನವಾಡಿ ಕಾರ್ಯಕರ್ತೆಯರಿಗೂ ಆರೋಗ್ಯ ಕಿಟ್



ಹೆಚ್.ಡಿ.ಕೋಟೆ, ಸೆ.21– ಆಶಾ ಕಾರ್ಯಕರ್ತೆಯರಿಗೆ ನೀಡುವಂತೆ ಅಂಗನವಾಡಿ ಕಾರ್ಯಕರ್ತೆಯರಿಗೂ ಆರೋಗ್ಯ ಕಿಟ್ ನೀಡುವಂತೆ ಮುಖ್ಯಮಂತ್ರಿಗಳ ಜೊತೆ ಚರ್ಚಿಸಲಾಗುವುದು ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣದ ಆದಿಚುಂಚನಗಿರಿ ಸಭಾಭವನದಲ್ಲಿ ಮೈಸೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ, ಹೆಚ್.ಡಿ. ಕೋಟೆ ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿ ಮತ್ತು ಶಿಶು ಅಭಿವೃದ್ಧಿ ಯೋಜನೆ ಹಾಗೂ ತಾಲೂಕು ಆಡಳಿತ ವತಿಯಿಂದ ಆಯೋಜಿಸಿದ್ದ ಆಶಾ ಕಾರ್ಯಕರ್ತೆಯರಿಗೆ ಕಿಟ್ ವಿತರಣೆ ಮತ್ತು ಪೋಷಣ್ ಅಭಿಯಾನ ಮಾಸಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಪೌಷ್ಟಿಕ ಆಹಾರವನ್ನು ಸೇವಿಸುವುದರಿಂದ ಆರೋಗ್ಯವಾಗಿರಲು ಸಾಧ್ಯ, ತಮ್ಮ ತಂದೆಯವರು ಸಹ ಸರಿಯಾದ ಸಮಯಕ್ಕೆ ಆಹಾರ ಸೇವಿಸದ ಹಿನ್ನೆಲೆ ಅನಾರೋಗ್ಯದಿಂದ ಬಳಲಿ ಸಾವನ್ನಪ್ಪಿದ್ದಾರೆ. ಆದ್ದರಿಂದ ಸಮಯಕ್ಕೆ ಸರಿಯಾಗಿ ಆಹಾರ ಸೇವಿಸಿ, ಗರ್ಭಿಣಿಯರು ಮತ್ತು ಬಾಣಂತಿಯರು ಆರೋಗ್ಯ ಇಲಾಖೆಯ ಸಲಹೆಯಂತೆ ಆಹಾರ ಸೇವಿಸಬೇಕು ಎಂದರು.

ಆಶಾ ಕಾರ್ಯಕರ್ತೆಯರಿಗೆ ನೀಡುವ ಕಿಟ್ ಅನ್ನು ಅಂಗನವಾಡಿ ಕಾರ್ಯಕರ್ತರಿಗೂ ನೀಡುವಂತೆ ಮುಖ್ಯಮಂತ್ರಿಯವರಲ್ಲಿ ಮನವಿ ಮಾಡಲಾಗುವುದು ಎಂದು ಅಂಗನವಾಡಿ ಕಾರ್ಯಕರ್ತೆಯರಿಗೆ ಭರವಸೆ ನೀಡಿದರು.

ಸಿಡಿಪಿಓ ಆಶಾ ಪೋಷಣ್ ಅಭಿಯಾನದ ಕುರಿತು ಮಾತನಾಡಿ, 2018ರಿಂದಲೂ ಪೋಷಣ್ ಅಭಿಯಾನವನ್ನು ಮಾಡುತ್ತ ಬಂದಿದ್ದೇವೆ, ಮಳೆಗಾಲ ನಿಂತು ಆ ಮಳೆಗಾಲದಲ್ಲೇ ಬೆಳೆದ ಬೆಳೆಗಳ ಮಾಹಿತಿಯನ್ನು ನೀಡಲಾಗುತ್ತಿದೆ. ಇತ್ತೀಚಿನ ದಿನಗಳಲ್ಲಿ ಗರ್ಭಿಣಿ ಮತ್ತು ಬಾಣಂತಿಯರಲ್ಲಿ ರಕ್ತಹೀನತೆ ಕಂಡುಬರುತ್ತಿದೆ. ಮಕ್ಕಳು, ಮನೆ, ಗಂಡ ಎಂದು ಸಮಯಕ್ಕೆ ಸರಿಯಾಗಿ ಊಟ ಮಾಡುವುದಿಲ್ಲ, ಆದ್ದರಿಂದ ಅವರಿಗೆ ಆರೋಗ್ಯದಲ್ಲಿ ಏರುಪೇರಾಗಲಿದೆ. ಗರ್ಭಿಣಿ ಮತ್ತು ಬಾಣಂತಿಯರಿಗೆ ಮನೆಗಳಲ್ಲಿ ಮೊಟ್ಟೆ ನೀಡುವುದಿಲ್ಲ, ಆದ್ದರಿಂದ ಅಂಗನವಾಡಿಯಲ್ಲಿ ಮೊಟ್ಟೆ ನೀಡುತ್ತಿದ್ದು ಅದರ ಪ್ರಯೋಜನವನ್ನು ಪಡೆದುಕೊಳ್ಳಬೇಕು, ಇದರಿಂದ ಮಗುವಿನ ಮೆದುಳು ಬೆಳವಣಿಗೆ ಆಗಲಿದೆ ಎಂದರು.

ತಾಲೂಕು ಆರೋಗ್ಯಾಧಿಕಾರಿ ಟಿ. ರವಿಕುಮಾರ್ ಮಾತನಾಡಿ, ತಾಯಿ ಮಕ್ಕಳ ಸಾವನ್ನು ತಪ್ಪಿಸಲು ಪೋಷಣ್ ಅಭಿಯಾನ ಜಾರಿ ಮಾಡಲಾಗಿದೆ ಎಂದರು.

ಹೆಚ್.ಡಿ.ಕೋಟೆ, ಸರಗೂರು ತಾಲೂಕಿನಲ್ಲಿ 11 ಅಪೌಷ್ಟಿಕತೆಯ ಮಕ್ಕಳಿದ್ದಾರೆ, ಅಲ್ಲದೇ ತಾಲೂಕಿನಲ್ಲಿ ಬಾಲ್ಯವಿವಾಹ ನಡೆಯುತ್ತಿವೆ. ಇದರಿಂದ ಹೆಣ್ಣುಮಕ್ಕಳು ಕಡಿಮೆ ವಯಸ್ಸಿಗೆ ಗರ್ಭವನ್ನು ಧರಿಸುತ್ತಿದ್ದಾರೆ. ಇದರಿಂದ ಮಗುವಿನ ಬೆಳವಣಿಗೆಗೆ ತೊಂದರೆಯಾಗಲಿದೆ ಎಂದರು. ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಸಣ್ಣರಾಮಪ್ಪ, ಸಾರ್ವಜನಿಕ ಆಸ್ಪತ್ರೆಯ ಆಡಳಿತಾಧಿಕಾರಿ ಸೋಮಣ್ಣ, ಸಿ.ಡಿ.ಪಿ.ಓ ಆಶಾ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಚಿಕ್ಕವೀರನಾಯಕ, ಬಾಬು ಜಗಜೀವನ್ ರಾಂ ವೇದಿಕೆಯ ಅಧ್ಯಕ್ಷ ನಾಗರಾಜು, ಸರಳ, ನಾಗೇಂದ್ರ ರವಿರಾಜ್, ರೇಖಾ, ಹನುಮಂತು, ಅಶೋಕ, ಅರಳಪ್ಪ, ರಂಜಿತ, ಅಂಗನವಾಡಿ ಕಾರ್ಯಕರ್ತರು, ಆಶಾ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಹಾಜರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಹನಿಮೂನ್ ಬ್ಯಾಂಕಾಕ್ (ಕ) 2 ಪ್ರದರ್ಶನಗಳು	ದಂದ್ವ (ಕ) 2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಎಕ್ಸ್‌ಪೆಂಡಬ್(ಇ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಜವಾನ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಟೋಬಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಸಪ್ತಸಾಗರದಾಚೆ ಎಲ್ಲೋ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಮಾರ್ಕ್ ಆಂಟೋನಿ (ತ)	4 ಪ್ರದರ್ಶನಗಳು
ಸಂಗಂ	
ಜವಾನ್ (ಹಿ)	4 ಪ್ರದರ್ಶನಗಳು
ಲಿಡೋ	
ಒಲವೇ ಮಂದಾರ–2 (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
13 ಪಾರ್ಟ್–1(ಕ)	4 ಪ್ರದರ್ಶನಗಳು
ಪ್ರಭಾ	
ನಮೋ ಭೂತಾತ್ಮ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ದಿಗ್ವಿಜಯ (ಕ): ಬೆ.10.40ಕ್ಕೆ, ಸಪ್ತಸಾಗರದಾಚೆ ಎಲ್ಲೋ (ಕ): ಮ.1.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, ಜವಾನ್ (ಹಿಂ): ಸಂ.4ಕ್ಕೆ.
ಸ್ಕ್ರೀನ್ 2	ತತ್ಸಮ ತದ್ಭವ (ಕ): ಬೆ.11.30ಕ್ಕೆ, ಒಲವೇ ಮಂದಾರ 2 (ಕ): ಮ.2ಕ್ಕೆ, ಡೆಮಾನ್ (ತ): ಸಂ.4.30ಕ್ಕೆ, ಸುಖೀ (ಹಿಂ): ರಾ.7ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 3	ಎಕ್ಸ್ಪೆಂಡಬಲ್ಸ್ (ಇಂ): ಬೆ.11.30ಕ್ಕೆ, ರಾ.9.40ಕ್ಕೆ, ದಿ ನನ್ 2 (ಇಂ): ಮ.1.45ಕ್ಕೆ, ದಿ ಗ್ರೇಟ್ ಇಂಡಿಯನ್ ಫ್ಯಾಮಿಲಿ (ಹಿಂ): ಸಂ.4.30ಕ್ಕೆ, ರಾ.7ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.9.50ಕ್ಕೆ, ಮ.1ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಸಂ.4.15ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಜವಾನ್ (ಹಿಂ): ಬೆ.10.40ಕ್ಕೆ, ಸಂ.4.35ಕ್ಕೆ, ರಾ.10.30ಕ್ಕೆ, ದಿ ಎಕ್ಸ್ಪೆಂಡಬಲ್ಸ್ (ಇಂ): ಮ.2.10ಕ್ಕೆ, ರಾ.8.05ಕ್ಕೆ.
ಸ್ಕ್ರೀನ್ 2	ಸಪ್ತ ಸಾಗರದಾಚೆ ಎಲ್ಲೋ (ಕ): ಬೆ.10.50ಕ್ಕೆ, ಜವಾನ್ (ಹಿಂ): ಮ.1.50ಕ್ಕೆ, ಸಂ.5.25ಕ್ಕೆ, ರಾ.9ಕ್ಕೆ.
ಸ್ಕ್ರೀನ್ 3	ಜವಾನ್ (ಹಿಂ): ಬೆ.9.10ಕ್ಕೆ, ಮ.12.45ಕ್ಕೆ, ದಿ ಎಕ್ಸ್ಪೆಂಡಬಲ್ಸ್ (ಇಂ): ಸಂ.4.20ಕ್ಕೆ, ರಾ.9.50ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಸಂ.6.50ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.10ಕ್ಕೆ, ದಿ ಗ್ರೇಟ್ ಇಂಡಿಯನ್ ಫ್ಯಾಮಿಲಿ (ಹಿಂ): ಮ.1.50ಕ್ಕೆ, ರಾ.7.30ಕ್ಕೆ, ರಾ.10ಕ್ಕೆ, ಮಾರ್ಕ್ ಆಂಟೋನಿ (ತ): ಸಂ.4.20ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪರಿಶುದ್ಧಂ (ಕ): ಬೆ.10.30ಕ್ಕೆ, ಹನಿಮೂನ್ ಇನ್ ಬ್ಯಾಂಕಾಕ್(ಕ): ಮ.1.30ಕ್ಕೆ, ಧ್ವಂಧ್ವ (ಕ): ಸಂ.4.20ಕ್ಕೆ, ಬನ್ ಟೀ (ಕ): ಸಂ.6.45ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಜವಾನ್ (ಹಿಂ): ಸಂ.4.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ದಿ ನನ್ 2 (ಇಂ): ಸಂ.4.45ಕ್ಕೆ, ಜವಾನ್ (ಹಿಂ): ರಾ.7ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.10.30ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಮ.1.45ಕ್ಕೆ, ಸಂ.4.45ಕ್ಕೆ, ದಿ ನನ್ 2 (ಇಂ): ರಾ.7.35ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಜೈಲರ್ (ತ): ಬೆ.8.35ಕ್ಕೆ, ಬೆ.11.40ಕ್ಕೆ, ಮ.3.40ಕ್ಕೆ, ಸಂ.6.45ಕ್ಕೆ, ರಾ.10.30ಕ್ಕೆ, ಜೈಲರ್ (ಕ): ಬೆ.8.25ಕ್ಕೆ, ಮ.3.10ಕ್ಕೆ, ಓಎಂಜಿ 2 (ಹಿಂ): ಬೆ.8.20ಕ್ಕೆ, ಬೆ.11.50ಕ್ಕೆ, ಸಂ.6.40ಕ್ಕೆ, ರಾ.10.15ಕ್ಕೆ, ಗದರ್ 2 (ಹಿಂ): ಮ.12.05ಕ್ಕೆ, ಮ.3.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ರಾ.9.45ಕ್ಕೆ, ಆಚಾರ್ & ಕೋ (ಕ): ಮ.3.55ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ಮ.3.25ಕ್ಕೆ, ರಾ.10.30ಕ್ಕೆ, ನಮೋ ಭೂತಾತ್ಮ (ಕ): ಬೆ.11.55ಕ್ಕೆ, ರಾಖಿ ಔರ್ ರಾಣಿ (ಹಿಂ): ಬೆ.9.20ಕ್ಕೆ, ಸಂ.6.20ಕ್ಕೆ, ರಾ.9.50ಕ್ಕೆ, ಓಪನ್‌ಹೈಮರ್ (ಇಂ): ಸಂ.6.35ಕ್ಕೆ, ಭೋಳಾ ಶಂಕರ್ (ತೆ): ಬೆ.9.05ಕ್ಕೆ, ಮ.12.30ಕ್ಕೆ, ಮ.2.55ಕ್ಕೆ, ಸಂ.6.20ಕ್ಕೆ, ಮೆಗ್ 2 (ಇಂ): ಮ.12.50ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ರೇಸುಗಳು

6ನೇ ದಿನ, ಶುಕ್ರವಾರ 22-9-2023

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 1.30 ಗಂಟೆಗೆ)

I. ಸಿದ್ದಾಪುರ ಪ್ಲೇಟ್–1400 ಮೀ. ರೇಟೆಡ್ 00 ರಿಂದ 25. ಮ.1.30ಕ್ಕೆ
1. ಎಮರಾಲ್‌ಡೊ 2. ಅಕಾಸಿ 3. ಸಿಟಿ ಆಫ್ ಅಸ್ಟಲ್

II. ಸೈಚ್ಚಿಕ್ ಸ್ಟೆಂಥ್ ಪ್ಲೇಟ್ ಡಿ2–1600 ಮೀ. ರೇಟೆಡ್ 40 ರಿಂದ 65. ಮ.2.00ಕ್ಕೆ
1. ಎಕೋ ಪ್ರಂಡ್ಲಿ 2. ಪಾಸ್ಟಿಚಿ 3. ಆಂಟಿರೋಪ್

III. ಪಂಚಾಗ್ನಿ ಪ್ಲೇಟ್ ಡಿ2–1200 ಮೀ. ರೇಟೆಡ್ 20 ರಿಂದ 45. (ಮೈಸೂರ್ ಬೇಸ್ಡ್ ಹಾರ್ಸ್). ಮ.2.30ಕ್ಕೆ
1 ಮೈಸ್ಟಿಕ್ ಡಿವೈನ್ 2. ಒಕ್ರೆ 3 ಸನ್‌ಶೈನ್ ಕೋಸ್ಟ್

IV. M.A.M. ರಾಮಸ್ವಾಮಿ ಟ್ರೋಫಿ–1600 ಮೀ. ರೇಟೆಡ್ 60 ಮತ್ತು ಮೇಲ್ವರ್ಗ. ಮ.3.00ಕ್ಕೆ
1. ವಿನ್ ಮೈ ಲವಿ 2. ಹಿಸ್ ಎಮಿನೆನ್ಸ್

V. ಒರಿಜಿನಲ್ ವೇಲ್ ರೇಸಿಂಗ್ ಟ್ರೋಫಿ–1200 ಮೀ. ರೇಟೆಡ್ 40 ರಿಂದ 65. (ಮೈಸೂರ್ ಬೇಸ್ಡ್ ಹಾರ್ಸ್). ಮ3.30ಕ್ಕೆ
1. ಶೀಬಾ 2. ಟ್ರಾವ್ ಕ್ರೂಸರ್ 3. ಸಿಯೋಲ್

VI. K.R.H.O. ಅಸೋಸಿಯೇಷನ್ ಮೈಸೂರ್ 1000 ಗಿನ್ನಿಸ್ 2023 – 1600 ಮೀ. (3 ವರ್ಷ ಟವರ್ಸ್). ಸಂ.4.00ಕ್ಕೆ
1 ತಿಯಾನಿ 2 ಆಶ್‌ಪೀಶಿಯಸ್ ಕ್ವಿನ್ 3. ನಿಝಾಹ

VII. ಪಂಚಾಗ್ನಿ ಪ್ಲೇಟ್ ಡಿ1–1200 ಮೀ. ರೇಟೆಡ್ 20 ರಿಂದ 45. (ಮೈಸೂರ್ ಬೇಸ್ಡ್ ಹಾರ್ಸ್). ಸಂ.4.30ಕ್ಕೆ
1. ಡಾಕ್ ಮಾರ್ಟಿನ್ 2. ಮಾರ್ಚ್ ಆಫ್ ವಿಕ್ಟರಿ 3. ನ್ಯಾಚುರಲ್ ಒನ್

VIII. ಸೈಚ್ಚಿಕ್ ಸ್ಟೆಂಥ್ ಪ್ಲೇಟ್ ಡಿ1–1600 ಮೀ. ರೇಟೆಡ್ 40 ರಿಂದ 60. ಸಂ.5.00ಕ್ಕೆ
1. ಐಸ್ ಲ್ಯಾಂಡಿಕ್ 2. ಕಟಾನಾ 3. ಸ್ಟೈಕಿಂಗ್ ಮೆಮೋರಿ

ದಿನದ ಅತ್ಯುತ್ತಮ	: ಎಕೋ ಪ್ರಂಡ್ಲಿ
ಡಬ್ಬಲ್	: ವಿನ್ ಮೈ ಲವಿ, ತಿಯಾನಿ
ಜಾಕ್‌ಪಾಟ್	: 4, 5, 6, 7 ಮತ್ತು 8
ಮಿನಿ ಜಾಕ್‌ಪಾಟ್	: 5, 6, 7 ಮತ್ತು 8
I ಟ್ರಿಬಲ್	: 1, 2, ಮತ್ತು 3
II ಟ್ರಿಬಲ್	: 3, 4, ಮತ್ತು 5
III ಟ್ರಿಬಲ್	: 6, 7 ಮತ್ತು 8
ಎಕ್ಸ್‌ಆಕ್ಸ್	: 1 ರಿಂದ 8

ಟಿಪ್‌ಸ್ಟರ್ ಪಿಜಿಸಿ

ಕೈಲಾಸ ಗಣಾರಾಧನೆ ಆಹ್ವಾನ ಪತ್ರಿಕೆ



ಪಿರಿಯಾಪಟ್ಟಣ ಟೌನ್ ಸಿದ್ದಾಪುರ ರಸ್ತೆಯಲ್ಲಿ ವಾಸವಾಗಿರುವ ಶ್ರೀಮತಿ ಅಕ್ಕಮ್ಮಣ್ಣಿ ಮತ್ತು ಶ್ರೀ ಪಿ.ಎಸ್.ವಿಷಕಂಠಯ್ಯ ಮಾಡುವ ವಿಜ್ಞಾಪನೆಗಳು
ದಿನಾಂಕ: 15–09–2023ನೇ ಶುಕ್ರವಾರ ನಮ್ಮ ಮಗ ಪಿ.ವಿ. ವಿಶ್ವನಾಥ್ ಲಿಂಗೈಕ್ಯರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾದ ಕೈಲಾಸ ಗಣಾರಾಧನೆಯನ್ನು ದಿನಾಂಕ: 25–09–2023ನೇ ಸೋಮವಾರ ಮಧ್ಯಾಹ್ನ 1 ಗಂಟೆಗೆ ನಮ್ಮ ಸ್ವಗೃಹದಲ್ಲಿ ನೆರವೇರಿಸಲು ನಿಶ್ಚಯಿಸಿರುವುದರಿಂದ ಆಹ್ವಾನ ತಲುಪದೇ ಇದ್ದವರು ಇದನ್ನೇ ಆಹ್ವಾನ ಪತ್ರಿಕೆಯೆಂದು ತಿಳಿದು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಬಯಸಬೇಕಾಗಿ ಕೋರುವ

ದಿ|| ಪಿ.ವಿ.ವಿಶ್ವನಾಥ್

ದುಃಖತಪ್ತರು: ಲಿಂಗೈಕ್ಯರ ಪತ್ನಿ ಶ್ರೀಮತಿ ವೇದಾವತಿ ಮತ್ತು ಮಕ್ಕಳು ಕುಟುಂಬದವರ್ಗದವರು, ಪಿರಿಯಾಪಟ್ಟಣ. ಮೊ: 9448165451

ಭಾರತರತ್ನ ಡಾ.ಎಂ.ವಿಶ್ವೇಶ್ವರಯ್ಯ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ (ರಿ.)

1126/ ಸಿಎಚ್14, ಗ್ರೌಂಡ್ ಫ್ಲೋರ್, ಸೌಮ್ಯಕೃಷ್ಣವೇಣಿ ಗೀತಾ ರಸ್ತೆ, ಚಾಮರಾಜ ಮೊಹಲ್ಲಾ, ಮೈಸೂರು 570005, ಕಛೇರಿ ದೂ: 0821-2424518

2022–23ನೇ ಸಾಲಿನ ವಾರ್ಷಿಕ ಮಹಾಸಭೆ

ಮೇಲ್ಕಂಡ ಸಭೆಯು ದಿ: 23.09.2023ನೇ ಶನಿವಾರ ಬೆಳಗ್ಗೆ 10.30 ಗಂಟೆಗೆ ಅಧ್ಯಕ್ಷರಾದ ಶ್ರೀ. ಜಿ.ಎಸ್. ಅಶೋಕ್‌ಕುಮಾರ್ ಅವರ ಅಧ್ಯಕ್ಷತೆಯಲ್ಲಿ ನೆರವೇರಿಸಲಾಗುವುದು. ಈಗಾಗಲೇ ಮಹಾಸಭೆಯ ಆಹ್ವಾನ ಪುಸ್ತಕವನ್ನು ಮಾನ್ಯ ಸದಸ್ಯರುಗಳಿಗೆ ಅಂಚೆ ಮೂಖೇನ ರವಾನಿಸಲಾಗಿದೆ. ತಲುಪದೇ ಇದ್ದಲ್ಲಿ ,ಇದನ್ನೇ ಆಹ್ವಾನವೆಂದು ಪರಿಗಣಿಸಿ, ದಯಮಾಡಿ ಆಗಮಿಸುವುದು.
ಸ್ಥಳ: ಎಮರಾಲ್ಡ್ ಕ್ಲಾರ್ಕ್ಸ್ ಇನ್ ಸೂಟ್ಸ್, ನಂ.937, ಲಿಂಕ್ ರಸ್ತೆ, ಇಂಡಸ್ಟ್ರಿಯಲ್ ಸಬರ್ಬ್, 3ನೇ ಫೇಸ್, ವಿಶ್ವೇಶ್ವರ ನಗರ, ಮೈಸೂರು–8

ದಿ ಭಾವಸಾರ ಕ್ಷತ್ರಿಯ ಕೋ–ಆಪರೇಟಿವ್ ಸೊಸೈಟಿ ಲಿ.,

"ಎ"ಶ್ರೇಣಿಯ ಸಹಕಾರ ಸಂಘ
ಕಛೇರಿ ವಿಳಾಸ: ನಂ.279, ಬೆಂಕಿನವಾಬ ರಸ್ತೆ, ಮಂಡಿ ಮೊಹಲ್ಲಾ, ಮೈಸೂರು–570021

ಆಹ್ವಾನ ಪತ್ರಿಕೆ

ಮೇಲ್ಕಂಡ ನಮ್ಮ ಸಂಘದ 2022–23ನೇ ಸಾಲಿನ 107ನೇ ವಾರ್ಷಿಕ ಮಹಾಸಭೆಯನ್ನು ದಿ.24–09–2023ನೇ ಭಾನುವಾರ ಬೆಳಗ್ಗೆ 11.00 ಘಂಟೆಗೆ ಲಷ್ಕರ್ ಮೊಹಲ್ಲಾದ ಕಬೀರ್ ರಸ್ತೆಯಲ್ಲಿರುವ "ಶ್ರೀ ಪಾಂಡುರಂಗ ವಿಠಲ ಸ್ವಾಮಿ" ದೇವಸ್ಥಾನದ ಆವರಣ ಮೈಸೂರು. ಇಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಎಸ್.ವಿ. ಸತ್ಯನಾರಾಯಣ ರಾವ್ ಸುಲಾಕೆ ರವರ ಘನ ಅಧ್ಯಕ್ಷತೆಯಲ್ಲಿ ನಡೆಸಲು ನಿರ್ದೇಶಕ ಮಂಡಳಿಯ ತೀರ್ಮಾನಿಸಿದೆ. ಎಲ್ಲಾ ಸದಸ್ಯರಿಗೂ ಆಹ್ವಾನ ಪತ್ರಿಕೆಯನ್ನು ಕಳುಹಿಸಲಾಗಿದ್ದು ಪತ್ರಿಕೆ ತಲುಪದೇ ಇದ್ದಲ್ಲಿ ಇದೇ ಆಹ್ವಾನ ಪತ್ರಿಕೆ ಎಂದು ತಿಳಿದು ದಯಮಾಡಿ ಸದರಿ ಮಹಾಸಭೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.

ದಿನಾಂಕ: 15–09–2023
ಆಡಳಿತ ಮಂಡಳಿ ಅಪ್ಪಣೆ ಮೇರೆಗೆ
ಸಹಿ/– ಶ್ರೀ ಎಸ್.ವಿ. ಸತ್ಯನಾರಾಯಣರಾವ್ ಸುಲಾಕೆ, ಅಧ್ಯಕ್ಷರು

ದಿ ಭಾವಸಾರ ಕ್ಷತ್ರಿಯ ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿ ಲಿ.

ಕಛೇರಿ ವಿಳಾಸ: ನಂ.279, ಬೆಂಕಿನವಾಬ ರಸ್ತೆ, ಮಂಡಿ ಮೊಹಲ್ಲಾ, ಮೈಸೂರು–570021

ಆಹ್ವಾನ ಪತ್ರಿಕೆ

ಮೇಲ್ಕಂಡ ನಮ್ಮ ಸಂಘದ 2022–23ನೇ ಸಾಲಿನ 8ನೇ ವಾರ್ಷಿಕ ಮಹಾಸಭೆಯನ್ನು ದಿ. 24–09–2023ನೇ ಭಾನುವಾರ ಸಂಜೆ 06.00 ಘಂಟೆಗೆ ಲಷ್ಕರ್ ಮೊಹಲ್ಲಾದ ಕಬೀರ್ ರಸ್ತೆಯಲ್ಲಿರುವ "ಶ್ರೀ ಪಾಂಡುರಂಗ ವಿಠಲ ಸ್ವಾಮಿ" ದೇವಸ್ಥಾನದ ಆವರಣ ಮೈಸೂರು. ಇಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಆರ್.ವಿ. ಶಿವಾಜಿರಾವ್ ರಂಪೂರೆರವರ ಘನ ಅಧ್ಯಕ್ಷತೆಯಲ್ಲಿ ನಡೆಸಲು ನಿರ್ದೇಶಕ ಮಂಡಳಿಯ ತೀರ್ಮಾನಿಸಿದೆ. ಎಲ್ಲಾ ಸದಸ್ಯರಿಗೂ ಆಹ್ವಾನ ಪತ್ರಿಕೆಯನ್ನು ಕಳುಹಿಸಲಾಗಿದ್ದು ಪತ್ರಿಕೆ ತಲುಪದೇ ಇದ್ದಲ್ಲಿ ಇದೇ ಆಹ್ವಾನ ಪತ್ರಿಕೆ ಎಂದು ತಿಳಿದು ದಯಮಾಡಿ ಸದರಿ ಮಹಾಸಭೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.

ದಿನಾಂಕ: 13–09–2023
ಆಡಳಿತ ಮಂಡಳಿ ಅಪ್ಪಣೆ ಮೇರೆಗೆ
ಸಹಿ/– ಶ್ರೀ ಆರ್.ವಿ. ಶಿವಾಜಿರಾವ್ ರಂಪೂರೆ, ಅಧ್ಯಕ್ಷರು

ಮೈಸೂರು ಅರಮನೆ ಮಂಡಳಿ, ಮೈಸೂರು

ಟೆಂಡರ್ ಅಧಿಸೂಚನೆ ಸಂಖ್ಯೆ:ಕಾನಿಅ/ಅಮಂ/ಉ.ನಿ/ತೋವಿ/ಟೆಂಡರ್:ಸಂಖ್ಯೆ: 02/2023–24 ದಿ: 14.09.2023

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಉಪ ನಿರ್ದೇಶಕರು, ಮೈಸೂರು ಅರಮನೆ ಮಂಡಳಿ, ಮೈಸೂರು. ಇವರಿಂದ ಒಟ್ಟು ಅಂದಾಜು ಮೊತ್ತ ರೂ.4.00 ಲಕ್ಷಗಳಿಗೆ ಸಂಬಂಧಪಟ್ಟಂತೆ 01 ಸಂಖ್ಯೆಯ ತೋಟಗಾರಿಕೆ ವಿಭಾಗದ ಕಾಮಗಾರಿಗೆ ತೋಟಗಾರಿಕೆ ಇಲಾಖೆಯ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ/ನೋಂದಾಯಿತ ಸಂಸ್ಥೆಗಳಿಂದ ಮೊಹರಾದ ಲಕೋಟೆಯಲ್ಲಿ ಶೇಕಡವಾರು ಟೆಂಡರ್‌ಗಳನ್ನು ಅಹ್ವಾನಿಸಲಾಗಿದೆ. 1) ಖಾಲಿ ಟೆಂಡರ್ ಫಾರಂ ಕೋರಿ ಅರ್ಜಿ ಸಲ್ಲಿಸಲು ಕೊನೆಯ ದಿ: 28.09.2023 ಸಂಜೆ 4.00 ಗಂಟೆಯವರೆಗೆ. 2) ಖಾಲಿ ಟೆಂಡರ್ ಫಾರಂಗಳನ್ನು ಗುತ್ತಿಗೆದಾರರಿಗೆ ನೀಡುವ ದಿ: 29.09.2023 ಸಂಜೆ 4.00 ಗಂಟೆಯವರೆಗೆ. 3) ಭರ್ತಿ ಮಾಡಿದ ಟೆಂಡರ್ ಫಾರಂ ಸ್ವೀಕರಿಸುವ ದಿ: 30.09.2023 ಸಂಜೆ 4.00 ಗಂಟೆಯವರೆಗೆ. 4) ಟೆಂಡರ್‌ಗಳನ್ನು ತೆರೆಯುವ ದಿ: 30.09.2023 ರ ಸಂಜೆ 4.30 ಗಂಟೆಗೆ. ಯಾವುದಾದರೂ ಅಥವಾ ಎಲ್ಲಾ ಟೆಂಡರ್‌ಗಳನ್ನು ಯಾವ ಕಾರಣ ನೀಡದೆ ಸ್ವೀಕರಿಸುವ/ತಿರಸ್ಕರಿಸುವ ಹಕ್ಕು ಉಪ ನಿರ್ದೇಶಕರು, ಮೈಸೂರು ಅರಮನೆ ಮಂಡಳಿ, ಮೈಸೂರು ರವರಿಗೆ ಸೇರಿರುತ್ತದೆ. ಹೆಚ್ಚಿನ ವಿವರಗಳಿಗೆ ಈ ಕಛೇರಿಯ ಕೆಲಸದ ವೇಳೆಯ ಎಲ್ಲಾ ದಿನಗಳಂದು ಪಡೆಯಬಹುದು. ಒಂದು ವೇಳೆ ಮೇಲೆ ನೀಡಲಾಗಿರುವ ದಿನಗಳು ಸಾರ್ವಜನಿಕ ರಜಾ ದಿನಗಳಾಗಿದ್ದಲ್ಲಿ ಆ ನಂತರದ ದಿನಗಳನ್ನು ಪರಿಗಣಿಸಲಾಗುವುದು.

DIPR/DDMYS/KSMCA/397/2023-24
ಸಹಿ/– ಉಪ ನಿರ್ದೇಶಕರು

ಸ್ಥಾಪನೆ:1983 ದೂರವಾಣಿ ಸಂಖ್ಯೆ: 0821–2422127

ದಿ ಸಿಟಿಜನ್ಸ್ ಹೌಸ್ ಮಾರ್ಟ್‌ಗೇಜ್ ಮತ್ತು ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿ ಲಿ.,

ನಂ.361/1, ಸಿ.ಹೆಚ್–15, ಡಿ.ಸುಬ್ಬಯ್ಯ ರಸ್ತೆ, ಚಾಮರಾಜ ಮೊಹಲ್ಲಾ, ಮೈಸೂರು–24

ಈ ಸೊಸೈಟಿಯ 2022–2023ನೇ ಸಾಲಿನ 41ನೇ ವಾರ್ಷಿಕ ಮಹಾಸಭೆಯನ್ನು ಸೆಪ್ಟೆಂಬರ್ ಮಾಹೆ ದಿನಾಂಕ: 24.09.2023ರ ಭಾನುವಾರ ಬೆಳಗ್ಗೆ 10.00 ಘಂಟೆಗೆ

ಶ್ರೀ ಶ್ರೀ. ಪಂಡಿತ ನಾರಾಯಣಚಾರ್ಯ ಕಲ್ಯಾಣ ಮಂಟಪ,

ಚಾಮರಾಜ ಜೋಡಿರಸ್ತೆ, (ಸುಬ್ಬರಾಯನ ಕೆರೆ) ಮೈಸೂರಿನಲ್ಲಿ

ಸಂಘದ ಅಧ್ಯಕ್ಷರಾದ ಶ್ರೀ ಎನ್. ಶಿವಕುಮಾರ್ ರವರ ಅಧ್ಯಕ್ಷತೆಯಲ್ಲಿ ನಡೆಯಲಿದೆ.

ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಯನ್ನು ಅಂಚೆ ಮೂಲಕ ಮಾನ್ಯ ಸದಸ್ಯರುಗಳಿಗೆ ಕಳುಹಿಸಲಾಗಿದೆ. ಮಾನ್ಯ ಸದಸ್ಯರುಗಳೆಲ್ಲರೂ ಸಕಾಲಕ್ಕೆ ಸಭೆಗೆ ಹಾಜರಾಗಬೇಕಾಗಿ ಕೋರಲಾಗಿದೆ.

ವಿಶೇಷ ಸೂಚನೆ:
1) ತಿದ್ದುಪಡಿಯಾದ ಸಹಕಾರ ಕಾಯಿದೆ ರೀತ್ಯಾ ವಾರ್ಷಿಕ ಮಹಾಸಭೆಗೆ ಹಾಜರಾತಿ ಕಡ್ಡಾಯವಾಗಿರುತ್ತದೆ. ಮಾನ್ಯ ಸದಸ್ಯರುಗಳು ತಪ್ಪದೇ ಸಭೆಗೆ ಹಾಜರಾಗಿ ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡಬೇಕಾಗಿ ಕೋರಲಾಗಿದೆ.

ಆಡಳಿತ ಮಂಡಳಿ ಅಪ್ಪಣೆ ಮೇರೆಗೆ
ಸಹಿ/– ಎಂ.ವಿ.ರವಿ, ಕಾರ್ಯದರ್ಶಿ, ಮೊಬೈಲ್: 9741202595

ಜಿಲ್ಲಾ ಪಂಚಾಯತ್, ಮೈಸೂರು ಅಕ್ಷರ ದಾಸೋಹ ಕಾರ್ಯಕ್ರಮ

ದೂರವಾಣಿ: 0821–22526351, ಇಮೇಲ್:eomysmms@yahoo.co.in /eomdmmysore@gmail.com
ಸಂ:ಅದಾಯೋ/ವಾಹನ ಬಾಡಿಗೆ ಟೆಂಡರ್/01/2023–24 ದಿನಾಂಕ:20.09.2023

ಟೆಂಡರ್ ಪ್ರಕಟಣೆ

ಮೈಸೂರು ಜಿಲ್ಲಾ ಪಂಚಾಯತ್‌ನ ಅಕ್ಷರ ದಾಸೋಹ ಕಾರ್ಯಕ್ರಮ ಮೇಲ್ವಿಚಾರಣೆಗಾಗಿ ಶಿಕ್ಷಣಾಧಿಕಾರಿಗಳಿಗೆ ವಾಹನ ಸೌಲಭ್ಯ ಒದಗಿಸಲು ಇಸವಿ 2020 ರ ಹಾಗೂ ನಂತರದ ಮಾಡೆಲ್ ಕಾರನ್ನು ಅರ್ಹ ಟ್ರಾವೆಲ್ಸ್ ಏಜೆನ್ಸಿ /ಅಧಿಕೃತ ವಾಹನ ಮಾಲೀಕರಿಂದ ಟೆಂಡರ್ ಆಹ್ವಾನಿಸಲಾಗಿದೆ.

ಕ್ರಸಂ.	ವಿವರ	ದಿನಾಂಕ	ಸಮಯ	ಸ್ಥಳ
1	ಕಛೇರಿಯಿಂದ ಟೆಂಡರ್ ಫಾರಂ ವಿತರಿಸುವ ದಿನಾಂಕ	20.09.2023	10.30AM	ಅಕ್ಷರ ದಾಸೋಹ ಕಛೇರಿ ಜಿಲ್ಲಾ ಪಂಚಾಯತ್, ಮೈಸೂರು
2	ಕಛೇರಿಯಿಂದ ಟೆಂಡರ್ ಫಾರಂ ವಿತರಿಸುವ ಕೊನೆಯ ದಿನಾಂಕ	10.10.2023	4.30PM	ಅಕ್ಷರ ದಾಸೋಹ ಕಛೇರಿ ಜಿಲ್ಲಾ ಪಂಚಾಯತ್, ಮೈಸೂರು
3	ಭರ್ತಿ ಮಾಡಿದ ಟೆಂಡರ್ ಫಾರಂ ಸಲ್ಲಿಸುವ ದಿನಾಂಕ	11.10.2023	5.00PM	ಅಕ್ಷರ ದಾಸೋಹ ಕಛೇರಿ ಜಿಲ್ಲಾ ಪಂಚಾಯತ್, ಮೈಸೂರು
4	ಟೆಂಡರ್ ತೆರೆಯುವುದು a) Technical Bid ತೆರೆಯುವುದು	12.10.2023	4.00PM	ಜಿಲ್ಲಾ ಪಂಚಾಯತ್, ಮೈಸೂರು
	b) Financial Bid ತೆರೆಯುವುದು	13.10.2023	11.00AM	ಜಿಲ್ಲಾ ಪಂಚಾಯತ್, ಮೈಸೂರು

ಮುಚ್ಚಿದ ಲಕೋಟೆಯಲ್ಲಿ ಮೈಸೂರು ಜಿಲ್ಲಾ ಪಂಚಾಯತ್‌ನಲ್ಲಿರುವ ಅಕ್ಷರ ದಾಸೋಹ ಶಾಖೆಗೆ ಟೆಂಡರ್ ಅರ್ಜಿಯನ್ನು ಸಲ್ಲಿಸುವುದು. **ಹೆಚ್ಚಿನ ಮಾಹಿತಿಗಾಗಿ – 0821–2526325** ಸಂಪರ್ಕಿಸಬಹುದು)

ಸಹಿ/– ಶಿಕ್ಷಣಾಧಿಕಾರಿ
ಅಕ್ಷರ ದಾಸೋಹ ಕಾರ್ಯಕ್ರಮ, ಜಿಲ್ಲಾ ಪಂಚಾಯತ್, ಮೈಸೂರು
DIPR/MYS/KAVITA/398/23-24

ಪಿರಿಯಾಪಟ್ಟಣ ತಾಲ್ಲೂಕು ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿಯಮಿತ, ಪಿರಿಯಾಪಟ್ಟಣ

ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ

ಮೇಲ್ಕಂಡ ಬ್ಯಾಂಕಿನ 2022–23ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆಯು ದಿನಾಂಕ: 24–09–2023ನೇ ಭಾನುವಾರದಂದು ಮಾನ್ಯಶ್ರೀ ಲೋಕೇಶ್ ಈ.ಪಿ. ರವರ ಘನ ಅಧ್ಯಕ್ಷತೆಯಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ. ಎಸ್.ಜಿ.ರಸ್ತೆ, ಕಛೇರಿಯ ಆವರಣದಲ್ಲಿ ನಡೆಯಲಿದ್ದು, ಆಹ್ವಾನ ಪತ್ರಿಕೆ ತಲುಪದೇ ಇರುವ ಸದಸ್ಯರು ಅನ್ಯಥಾ ಭಾವಿಸದೆ ಇದೇ ಆಹ್ವಾನ ಪತ್ರಿಕೆ ಎಂದು ತಿಳಿದು ದಯಮಾಡಿ ಸಭೆಯಲ್ಲಿ ಭಾಗವಹಿಸಿ ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ಮನವಿ.

ಕಾರ್ಯಕಾರಿ ಮಂಡಳಿ ಅಪ್ಪಣೆ ಮೇರೆಗೆ
ಸಹಿ/– ಹೆಚ್.ಎಸ್.ಮಧು, ಪ್ರಭಾರ ವ್ಯವಸ್ಥಾಪಕರು

ಶ್ರೀ ರಾಮಲಿಂಗ ಚೌಡೇಶ್ವರಿ ವೀವರ್ಸ್ ಕೋ ಆಪರೇಟಿವ್ ಸೊಸೈಟಿ ಲಿ.,

ನಂ. 79, ಕೆ.ಟಿ. ರಸ್ತೆ, ಲಷ್ಕರ್ ಮೊಹಲ್ಲಾ, ಮೈಸೂರು

ಮೇಲ್ಕಂಡ ಸೊಸೈಟಿ 2022-23ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಸಂಘದ ಅಧ್ಯಕ್ಷರಾದ ಶ್ರೀ ಬಿ.ಎಸ್. ರವಿನಾಥ್ ರವರ ಅಧ್ಯಕ್ಷತೆಯಲ್ಲಿ ದಿನಾಂಕ 24-9-2023ನೇ ಭಾನುವಾರ ಸಂಜೆ 4.30 ಗಂಟೆಗೆ ಕೆ.ಟಿ. ರಸ್ತೆಯಲ್ಲಿರುವ ದೇವಾಂಗ ಭವನದಲ್ಲಿ ನಡೆಸಲು ತೀರ್ಮಾನಿಸಲಾಗಿದೆ.

ಆದ್ದರಿಂದ ಮಾನ್ಯ ಸದಸ್ಯರುಗಳು ವಾರ್ಷಿಕ ಮಹಾಸಭೆಗೆ ಹಾಜರಾಗಬೇಕೆಂದು ಸವಿನಯ ಪ್ರಾರ್ಥನೆ. (ಆಹ್ವಾನ ಪತ್ರಿಕೆಯನ್ನು ಕಳುಹಿಸಲಾಗಿದ್ದು ಪತ್ರಿಕೆ ತಲುಪದೇ ಇದ್ದಲ್ಲಿ ಇದೇ ಆಹ್ವಾನ ಪತ್ರಿಕೆ ಎಂದು ತಿಳಿದು ದಯಮಾಡಿ ಸದರಿ ಮಹಾಸಭೆಗೆ ಹಾಜರಾಗಬೇಕೆಂದು ವಿನಂತಿ).

ಸಹಿ/–ಎಸ್. ನಂಜುಂಡಯ್ಯ
ವೇತನಾ ಕಾರ್ಯದರ್ಶಿ

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಕಾರ್ಯಪಾಲಕ ಅಭಿಯಂತರರು (ಪೂರ್ವ ಮತ್ತು ಪಶ್ಚಿಮ)ರವರ ಕಛೇರಿ, ಸಯ್ಯಾಜಿರಾವ್ ರಸ್ತೆ, ಮೈಸೂರು ಮಹಾನಗರ ಪಾಲಿಕೆ, ಮೈಸೂರು–570024. ಇಮೇಲ್: eewmccmys@gmail.com
ಸಂಖ್ಯೆ:ಮೈನಪಾ/ಕಾ.ಇಂ(ಪೂ&ಪ)/ಸಾ.ಟೆಂ.ಪ್ರ–07/2023–24 ದಿನಾಂಕ: 20.09.2023

ಟೆಂಡರ್ ಪ್ರಕಟಣೆ (ಕರ್ನಾಟಕ ಸರ್ಕಾರದ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಮೈಸೂರು ಮಹಾನಗರ ಪಾಲಿಕೆಯ ವಿವಿಧ ಅನುದಾನದಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

ಕ್ರ ಸಂ.	ಟೆಂಡರ್ ಪ್ರಕಟಣೆ ಸಂಖ್ಯೆ	ಒಟ್ಟು ಕಾಮಗಾರಿಗಳು	ಇ–ಪೋರ್ಟಲ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ:	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ
1.	ಟೆಂ.ಪ್ರ.ಸಂಖ್ಯೆ:ಮೈನಪಾ/ಕಾಇಂ(ಪೂ&ಪ)/ ಟಿಎನ್–11/2023–24, ದಿನಾಂಕ: 19.09.2023	01	20.09.2023 ಬೆಳಿಗ್ಗೆ 11 ರ ನಂತರ	20.10.2023 ಸಂಜೆ 5.30 ಗಂಟೆಗೆ	21.10.2023 ಸಂಜೆ 5.30ರ ನಂತರ
2.	ಟೆಂ.ಪ್ರ.ಸಂಖ್ಯೆ:ಮೈನಪಾ/ಕಾಇಂ(ಪೂ&ಪ)/ ಟಿಎನ್–12/2023–24, ದಿನಾಂಕ: 20.09.2023	04	20.09.2023 ಬೆಳಿಗ್ಗೆ 11 ರ ನಂತರ	27.09.2023 ಸಂಜೆ 5.30 ಗಂಟೆಗೆ	29.09.2023 ಸಂಜೆ 5.30ರ ನಂತರ
3.	ಟೆಂ.ಪ್ರ.ಸಂಖ್ಯೆ:ಮೈನಪಾ/ಕಾಇಂ(ಪೂ&ಪ)/ ಟಿಎನ್–13/2023–24, ದಿನಾಂಕ:20.09.2023	01	19.09.2023 ಬೆಳಿಗ್ಗೆ 10.30 ರ ನಂತರ	19.10.2023 ಸಂಜೆ 5.00 ಗಂಟೆಗೆ	20.10.2023 ಸಂಜೆ 5.30ರ ನಂತರ
4.	ಟೆಂ.ಪ್ರ.ಸಂಖ್ಯೆ:ಮೈನಪಾ/ಕಾಇಂ(ಪೂ&ಪ)/ ಟಿಎನ್–14/2023–24, ದಿನಾಂಕ: 20.09.2023	01	21.09.2023 ಬೆಳಿಗ್ಗೆ 10.30 ರ ನಂತರ	29.09.2023 ಸಂಜೆ 5.30 ಗಂಟೆಗೆ	30.09.2023 ಸಂಜೆ 5.30ರ ನಂತರ

ಅರ್ಹ ಗುತ್ತಿಗೆದಾರರು (**https://kppp.karnataka.gov.in**) ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರವನ್ನು ಕಚೇರಿ ಸಮಯದಲ್ಲಿ ಮೈಸೂರು ಮಹಾನಗರ ಪಾಲಿಕೆಯ ಸಿವಿಲ್ ಕಾ.ಅ(ಪೂ&ಪ) ರವರ ಕಛೇರಿಯನ್ನು ಸಂಪರ್ಕಿಸಿ ಹೆಚ್ಚಿನ ಮಾಹಿತಿ ಪಡೆಯಬಹುದು. **ವಿಶೇಷ ಸೂಚನೆ:** ಮುಂದೆ ಯಾವುದೇ ಸೂಚನೆ / ಬದಲಾವಣೆ / ತಿದ್ದುಪಡಿಗಳಿದ್ದಲ್ಲಿ (**https://kppp.karnataka.gov.in**) ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು(ಪೂರ್ವ) ಮೈಸೂರು ಮಹಾನಗರ ಪಾಲಿಕೆ, ಮೈಸೂರು
ಸಹಿ/– ಕಾರ್ಯಪಾಲಕ ಅಭಿಯಂತರರು(ಪಶ್ಚಿಮ) ಮೈಸೂರು ಮಹಾನಗರ ಪಾಲಿಕೆ, ಮೈಸೂರು
DIPR/MYS/KAVITA/406/23-24